
ಲಂಕೇಶ್
ಸೆಪ್ಟೆಂಬರ್ 23, 2009 ರೂ. 12/-

ದಸರಾ: ಪತ್ರಕರ್ತರ ಡೀಲುಗಳು



ಮ್ಮಪ್ಪನ ಒಡವೆ
0,000 ಕೋಟಿ



ಜಗನ್‌ನ ಬೆಂಗಳೂರು ಸಾಮ್ರಾಜ್ಯ



ಾರವಾಡ
ಸ್ವಾಮಿಗೆ ಮಂಚವೇ
ಉರುಳಾಯಿತು!



ಆಟೋಗಳಿಗೆ ಬೇರೆ ಬಣ್ಣ
ಅಶೋಕ್ ತಿಂದಿದ್ದು ಎಷ್ಟು?

ಬಾಬಾಬುಡನ್‌ಗಿರಿಯಲ್ಲಿ 'ಕೋಮು'ಗಾರಿ

ಬಿಜೆಪಿ ಪಕ್ಷ ಅಧಿಕಾರಕ್ಕೆ ಏಕೆ ಬರಬಾರದು ಅನ್ನುವುದಕ್ಕೆ ಯಡ್ಡಿ ಸರ್ಕಾರ ಪ್ರತಿನಿತ್ಯ ಸಾವಿರ ಉದಾಹರಣೆಗಳನ್ನು ಒದಗಿಸುತ್ತಲೇ ಬರುತ್ತಿದೆ. ಮೊನ್ನೆ ಮೊನ್ನೆ ಪ್ರತಿಯೊಂದು ಸರ್ಕಾರಿ ಪ್ರಾಥಮಿಕ ಶಾಲೆಯೂ ಕಡ್ಡಾಯವಾಗಿ ರಾಷ್ಟ್ರೋತ್ಥಾನ ಪ್ರಕಾಶನದಿಂದ ಪುಸ್ತಕಗಳನ್ನು ಖರೀದಿಸಬೇಕು ಎಂದು ಆದೇಶ ಹೊರಡಿಸಿರುವ ಸರ್ಕಾರ ಮುಗ್ಧ ಮಕ್ಕಳ ಮನಸ್ಸಿಗೇ ಚೆಡ್ಡಿ ತೊಡಿಸಲು ಹೊರಟಿದೆ. ಅದಾದ ಮರುದಿನವಲ್ಲೇ ಪತ್ರಿಕಾ ಮಾನ್ಯತೆ ಮಂಡಳಿಯನ್ನು ಚೆಡ್ಡಿಗಳ ಅಧಿಕೃತ ಮುಖಪತ್ರಿಕೆಯಾದ 'ಹೊಸದಿಗಂತ'ದ ಸಂಪಾದಕರಾದ ದು.ಗು. ಲಕ್ಷ್ಮಣರಂಥವರ ನೇತೃತ್ವದಲ್ಲಿ ಪುನರ್ ರಚಿಸಿದೆ. ಅದೇ ಬೇಸಿನಲ್ಲೇ ಸಪ್ತಮಿ ಟ್ರಸ್ಟ್ ಎಂಬ ತನ್ನ ಮತ್ತೊಂದು ಅಂಗಸಂಸ್ಥೆಗೆ ಕರ್ನಾಟಕದ ಮಕ್ಕಳಿಗೆ ನೀತಿ ಶಿಕ್ಷಣ ಪಾಠ ಮಾಡುವ ಕಾಂಟ್ರಾಕ್ಟ್ ಕೊಟ್ಟು ಸರ್ಕಾರದ ಎಲ್ಲಾ ಶಿಕ್ಷಕರನ್ನು ಕಡ್ಡಾಯವಾಗಿ ಆ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರ್ದೇಶನ ನೀಡಿದೆ. ಹೀಗೆ ಇಡೀ ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೆ ಚೆಡ್ಡಿ ತೊಡಿಸಲು ಹೊರಟಿರುವ ಬಿಜೆಪಿ ಸರ್ಕಾರ ಇದೀಗ ತನಗೆ ಸಿಕ್ಕಿರುವ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಕರ್ನಾಟಕದ ಅಪ್ರತಿಮ ಸೌಹಾರ್ದ ತಾಣವಾಗಿರುವ ಬಾಬಾಬುಡನ್‌ಗಿರಿಯನ್ನು ಸದ್ದಿಲ್ಲದಂತೆ ಕೇಸರೀಕರಿಸಲು ಹೊರಟಿದೆ.



ಈ ಹಿಂದೆ ದತ್ತಪೀಠ ವಿಮೋಚನೆಯ ಹೆಸರಲ್ಲಿ ಜನರನ್ನು ಒಡೆದು ಶಾಸಕರಾದರೂ ಸತ್ಯ, ಕಾನೂನು ಮತ್ತು ಇತಿಹಾಸ ಸಂಘಪರಿವಾರದ ಪರವಾಗಿರಲಿಲ್ಲವಾದ್ದರಿಂದ ಬಿಜೆಪಿಯೇ ಸ್ವಂತಬಲದ ಮೇಲೆ ಅಧಿಕಾರದಲ್ಲಿದ್ದರೂ ಬಾಬಾಬುಡನ್ ಗಿರಿಯಲ್ಲಿ ಹೆಚ್ಚಿನ ಕಿತಾಪತಿಯನ್ನು ಮಾಡಲು ಸಾಧ್ಯವಾಗಿರಲಿಲ್ಲ. ಮೇಲಾಗಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ಸುಪ್ರೀಂಕೋರ್ಟಿನಲ್ಲಿ ಹೂಡಿದ ದಾವೆಯಲ್ಲಿ ಮಧ್ಯಂತರ ಆದೇಶ ನೀಡಿದ ವರಿಷ್ಠ ನ್ಯಾಯಾಲಯವು ತಾನು ವಿಚಾರಣೆ ಪೂರ್ಣಗೊಳಿಸಿ ಅಂತಿಮ ಆದೇಶ ನೀಡುವವರೆಗೂ ಬಾಬಾಬುಡನ್‌ಗಿರಿಯಲ್ಲಿ 1989ರಲ್ಲಿ ಕರ್ನಾಟಕ ಧಾರ್ಮಿಕ ದತ್ತಿ ಆಯುಕ್ತರು ನಿರ್ದಿಷ್ಟಪಡಿಸಿದಂತೆ ದರ್ಗಾದ ಯಥಾಸ್ಥಿತಿಯನ್ನೇ ಕಾಯ್ದುಕೊಂಡು ಬರಬೇಕೆಂದು ಆದೇಶ ನೀಡಿತು. ಇದು ಸಂಘಪರಿವಾರಿಗಳಿಗೆ ಮತ್ತು ಬಿಜೆಪಿ ಸರ್ಕಾರಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.


ಸುಪ್ರೀಂಕೋರ್ಟಿನಲ್ಲಿ ವೇದಿಕೆ ಮಂಡಿಸಿರುವ ವಾದ ಮತ್ತು ಒದಗಿಸಿರುವ ಪುರಾವೆಗಳನ್ನು ಗಮನಿಸಿದರೆ ತಾವೆಂದಿಗೂ ಬಾಬಾಬುಡನ್ ದರ್ಗಾವನ್ನು ದತ್ತ ದೇವಸ್ಥಾನವನ್ನಾಗಿ ಮಾಡಲು ನ್ಯಾಯಾಲಯದ ಮನ್ನಣೆ ಪಡೆದುಕೊಳ್ಳಲು ಸಾಧ್ಯವಿಲ್ಲವೆಂದು ಸಂಘಪರಿವಾರಕ್ಕೆ ಸ್ಪಷ್ಟವಾಗಿ ಅರ್ಥವಾಗಿದೆ. ಹೀಗಾಗಿಯೇ ಅವರು ಕಳೆದ ಒಂದು ವರ್ಷದಿಂದಲೂ ಹಿಂಬಾಗಿಲ ಮೂಲಕ ಬಾಬಾಬುಡನ್‌ಗಿರಿಯನ್ನು ಕೇಸರೀಕರಣ ಮಾಡಲು ಸಂಚುಗಳನ್ನು ಹೆಣೆಯುತ್ತಲೇ ಬರುತ್ತಿದ್ದಾರೆ. ಅವರ ಈ ಬಗೆಯ ಎಲ್ಲಾ ಅಕ್ರಮಗಳಿಗೂ ಬಿಜೆಪಿ ಸರ್ಕಾರ ರಕ್ಷಣೆಯನ್ನೂ, ಸಹಕಾರವನ್ನೂ ಕೊಡುತ್ತಾ ಬಂದಿದೆ. ಜೊತೆಗೆ ಅವರ ತಾಳಕ್ಕೆ ತಕ್ಕನಾಗಿ ಕುಣಿಯುವ ಜಿಲ್ಲಾಧಿಕಾರಿಗಳನ್ನೇ ಅಲ್ಲಿಗೆ ಹಾಕುತ್ತಾ ಬಂದಿದೆ.

ಬಿಜೆಪಿ ಸರ್ಕಾರ ಸ್ವಂತಬಲದ ಮೇಲೆ ಅಧಿಕಾರಕ್ಕೆ ಬಂದ ಮೇಲೆ ದರ್ಗಾವನ್ನು ನಾಶ ಮಾಡಲು ಹೆಣೆದ ಮೊದಲ ತಂತ್ರವೇನೆಂದರೆ ಶಿಥಿಲವಾಗುತ್ತಿದ್ದ ಗುಹೆಯ ಸಂರಕ್ಷಣೆಯ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದು. 2009ರ ಫೆಬ್ರವರಿಯ ವೇಳೆಗೆ ಗುಹೆಯ ಒಳಭಾಗದಲ್ಲಿ ನೀರು ನಿಂತು ಗೋಡೆಗಳು ದುರ್ಬಲವಾಗುತ್ತಿದೆಯೆಂಬುದು ಜಿಲ್ಲಾಡಳಿತಕ್ಕೆ ಗೊತ್ತಿತ್ತು. ಆದರೆ ಅದರ ಬಗ್ಗೆ ಜಿಲ್ಲಾಡಳಿತ ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯ ವಹಿಸಿತು. ಹೀಗೆ ನೀರಿನ ಹೊರಹರಿವಿಗೆ ಸರಿಯಾದ ವ್ಯವಸ್ಥೆ ಮಾಡದೇ ಇದ್ದಿದ್ದರಿಂದ 2009ರ ಜೂನ್ ವೇಳೆಗೆ ದರ್ಗಾದ ಒಂದು ಗೋಡೆ ಸಂಪೂರ್ಣವಾಗಿ ಕುಸಿದು ಬಿದ್ದಿತು. ಇದನ್ನೇ ನೆಪವಾಗಿಟ್ಟುಕೊಂಡ ಸರ್ಕಾರ ಗುಹೆಯ ದುರಸ್ತಿ ನಡೆಯಬೇಕಿರುವುದರಿಂದ ಭಕ್ತಾದಿಗಳ ಪ್ರವೇಶವನ್ನು ಗುಹೆಗಿರಲಿ ದರ್ಗಾದ ಆವರಣಕ್ಕೆ ಸಂಪೂರ್ಣವಾಗಿ ನಿಷೇಧಿಸಿತು. ಮೇಲ್ನೋಟಕ್ಕೆ ಇದು ಎಲ್ಲಾ ಧರ್ಮದ ಭಕ್ತಾದಿಗಳ ಮೇಲೆ ವಿಧಿಸಿದ ನಿಷೇಧವೆಂದು ಕಂಡು ಬಂದರೂ ಅಸಲಿ ನಿಷೇಧವಾಗಿದ್ದು ದರ್ಗಾಗೆ ನಡೆದುಕೊಳ್ಳುತ್ತಿದ್ದ ಬಡ ಮುಸ್ಲಿಂ ಮತ್ತು ಶೂದ್ರ ಹಿಂದೂಗಳ ಆಚರಣೆಯೇ ವಿನಃ ಹಿಂದೂಗಳ ಹೆಸರಲ್ಲಿ ಹೋಮ ಹವನ ನಡೆಸುತ್ತಿದ್ದ ಚೆಡ್ಡಿಗಳ ಆಚರಣೆಯಲ್ಲ. ಆದ್ದರಿಂದಲೇ ಕೋರ್ಟು ಬಾಬಾಬುಡನ್‌ಗಿರಿಯಲ್ಲಿ 1975ಕ್ಕೆ ಮುನ್ನ ಇಲ್ಲದಿದ್ದ ಎಲ್ಲಾ ಆಚರಣೆಗಳನ್ನು ನಿಷೇಧಗೊಳಿಸಿದ್ದರೂ ಬಿಜೆಪಿ ಸರ್ಕಾರ ದರ್ಗಾ ಆವರಣದ ಪಕ್ಕದಲ್ಲೇ ಚೆಡ್ಡಿಗಳು ದತ್ತಜಯಂತಿಯ ಹೆಸರಲ್ಲಿ ನಿಷೇಧಿತ ಹೋಮಹವನಗಳನ್ನು ಮಾಡಲು ಮೊಟ್ಟಮೊದಲ ಬಾರಿಗೆ ಅನುವು ಮಾಡಿಕೊಟ್ಟಿತು. ಆದರೆ ದರ್ಗಾ ಸಂಸ್ಕೃತಿಗೆ ಬದ್ಧವಾದ ಯಾವುದೇ ನಿತ್ಯಾಚರಣೆಗಳಿಗೂ ದುರಸ್ತಿಯ ಹೆಸರಲ್ಲಿ ಜಿಲ್ಲಾಡಳಿತ ಯಾವುದೇ ಅವಕಾಶ ಮಾಡಿಕೊಡಲಿಲ್ಲ.

ಆದರೆ ಬಾಬಾನ ದರ್ಗಾಗೆ ನಡೆದುಕೊಳ್ಳುತ್ತಿದ್ದ ಭಕ್ತಾದಿಗಳು ಸಾಧ್ಯವಾದಷ್ಟು ಬೇಗ ದುರಸ್ತಿ ನಡೆಸಿ ದರ್ಶನಕ್ಕೆ ಅವಕಾಶ ಮಾಡಿಕೊಡಬೇಕೆಂದು ಗೋಗರೆದು ಕೇಳಿಕೊಂಡರೂ ಕಿವಿಗೊಡದ ಸರ್ಕಾರ ಈಗ ಇದ್ದಕ್ಕಿದ್ದಂತೆ ಈ ವರ್ಷದ ಅಂತ್ಯದೊಳಗೆ ದುರಸ್ತಿ ಕೆಲಸ ಪೂರೈಸಿ ಭಕ್ತಾದಿಗಳ ದರ್ಶನಕ್ಕೆ ವ್ಯವಸ್ಥೆ ಮಾಡಿಕೊಡುವುದಾಗಿ ಘೋಷಿಸಿದೆ.



ಸರ್ಕಾರದ ಈ ಘೋಷಣೆಯ ಹಿಂದೆ ಇನ್ನಾವ ಷಡ್ಯಂತ್ರ ಇರಬಹುದೆಂದು ಜನರು ಗೊಂದಲಕ್ಕೆ ಒಳಗಾಗದಂತೆ ಬಿಜೆಪಿ ಸರ್ಕಾರ ತನ್ನ ಉದ್ದೇಶಗಳನ್ನು ಸ್ಪಷ್ಟಪಡಿಸಿದೆ. ಕಳೆದ ಸೆಪ್ಟೆಂಬರ್ 8ರಂದು ದುರಸ್ತಿ ಕಾರ್ಯಗಳ ಅಧಿಕೃತ ಉದ್ಘಾಟನೆಗೆ ಭೂಮಿಪೂಜೆ ಮಾಡಿದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರಪ್ಪ, ಸ್ಥಳೀಯ ಶಾಸಕ ಸಿ.ಟಿ.ರವಿ, ಬಿಜೆಪಿ ರಾಜ್ಯಾಧ್ಯಕ್ಷ ಹಾಗು ಸಂಸದ ಸದಾನಂದಗೌಡ ಮತ್ತು ಇತರೆ ಚಡ್ಡಿ ಪಟಾಲಂಗಳು ಭೂಮಿಪೂಜೆಯ ಜೊತೆಜೊತೆಗೆ ಗುಹೆಯ ಎದುರು ದತ್ತಾತ್ರೇಯ ಮೂರ್ತಿಯನ್ನೂ ಪ್ರತಿಷ್ಠಾಪಿಸಿ ಪೂಜೆ ಮಾಡಿದ್ದಾರೆ. ಅಲ್ಲದೆ ಸದಾನಂದ ಗೌಡರಂತೂ ಇಲ್ಲಿ ದತ್ತ ದೇವಸ್ಥಾನದ ನಿರ್ಮಾಣ ಮಾಡುವ "ಸಂಕಲ್ಪ"ವನ್ನೂ



ಬಹಿರಂಗವಾಗಿ ಘೋಷಿಸಿದ್ದಾರೆ. ದರ್ಗಾದ ಆವರಣದಲ್ಲಿ 1975ಕ್ಕೆ ಮುಂಚೆ ಇಲ್ಲದಿದ್ದ ಹೊಸ ಆಚರಣೆಗಳನ್ನು ತಡೆಹಿಡಿಯಬೇಕಾದ ಜವಾಬ್ದಾರಿ ಹೊಂದಿದ್ದ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ರಕ್ಷಣಾಧಿಕಾರಿ ಇವೆಲ್ಲವನ್ನೂ ನೋಡುತ್ತಾ ಸುಮ್ಮನೆ ನಿಂತಿದ್ದಾರೆ. ಹೀಗೆ ಭೂಮಿಪೂಜೆಯ ದಿನವೇ ಬಾಬಾಬುಡನ್‌ಗಿರಿಯಲ್ಲಿ ನಡೆಯುವುದು ದುರಸ್ತಿ ಕಾಮಗಾರಿಯಲ್ಲವೆಂದೂ, ಬದಲಾಗಿ ಸಂಘಪರಿವಾರದ "ಕೋಮು"ಗಾರಿಯೆಂಬುದನ್ನು ಬಿಜೆಪಿ ಸರ್ಕಾರ ಸ್ಪಷ್ಟಪಡಿಸಿದೆ.

ಈ "ಕೋಮು"ಗಾರಿಯ ವಿವರಗಳನ್ನು ಒಂದೊಂದಾಗಿ ಪರಿಶೀಲಿಸುತ್ತಾ ಹೋದರೆ ಬಿಜೆಪಿ ಸರ್ಕಾರ ದರ್ಗಾವನ್ನು ಕೆಡವಲು ಎಂಥಾ ಘೋರ ಷಡ್ಯಂತ್ರ ರೂಪಿಸಿದೆ ಎಂಬುದು ಅರ್ಥವಾಗುತ್ತಾ ಹೋಗುತ್ತದೆ.

ಗುಹೆಯ ಒಂದು ಭಾಗ ಕುಸಿದು ಬಿದ್ದಿರುವುದು ನಿಜ. ಮುಂದೆಯೂ ಈ ಬಗೆಯ ಅವಘಡಗಳು ಸಂಭವಿಸಬಾರದೆಂದರೆ ಇಡೀ ಗುಹೆಯ ರಚನೆಯನ್ನು ಇನ್ನಷ್ಟು ಗಟ್ಟಿಗೊಳಿಸುವ ಅಗತ್ಯವಿದೆ. ಆದರೆ ಅದರ ದುರಸ್ತಿಗೆಂದು ವಾಸ್ತುಶಿಲ್ಪ ಯೋಜನೆಯನ್ನು ತಯಾರಿಸುವಾಗ ಸಂಬಂಧಪಟ್ಟ ಯಾವ ಧಾರ್ಮಿಕ ಮುಖ್ಯಸ್ಥರೊಂದಿಗೂ ಸರ್ಕಾರ ಸಮಾಲೋಚನೆ ನಡೆಸಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಸಂಸ್ಥೆಯ ಧಾರ್ಮಿಕಾಧಿಕಾರಿ ಶಾಖಾದ್ರಿಯೆಂದು 2000ರ ಸರ್ಕಾರಿ ಆಜ್ಞೆ ಮರುಸ್ಪಷ್ಟ ಪಡಿಸಿದ್ದರೂ ಒಮ್ಮೆಯೂ ಅವರೊಡನೆ ಸಮಾಲೋಚನೆ ನಡೆಸಿಲ್ಲ. ಮಾತ್ರವಲ್ಲ, ಇಲ್ಲಿನ ಶ್ರದ್ಧಾ ಸ್ವರೂಪದ ಬಗೆಗೆ ವಿವಾದವಿರುವಾಗ ವಾಸ್ತುಶಿಲ್ಪದ ನೀಲನಕ್ಷೆಯನ್ನು ಸಾರ್ವಜನಿಕರ ಮತ್ತು ವಿವಾದದ ಎರಡು ಪಕ್ಷಗಳವರ ಒಪ್ಪಿಗೆಗೆ ಮುಂದಿಡಬೇಕಿತ್ತು. ಆದರೆ ಚೆಡ್ಡಿ ಸರ್ಕಾರ ಜನರ ಧಾರ್ಮಿಕ ಭಾವನೆಗಳಿಗೆ ಸ್ವಲ್ಪವೂ ಬೆಲೆ ನೀಡದೆ ಯಾವುದೋ ಒಂದು ಪ್ರಾಚೀನ ಸ್ಮಾರಕವೊಂದರ ದುರಸ್ತಿ ಕಾಮಗಾರಿಯನ್ನು ನಡೆಸುತ್ತಿರುವಂತೆ ಬಾಬಾಬುಡನ್ ದರ್ಗಾದ ಕಾಮಗಾರಿ ನಡೆಸುತ್ತಿರುವುದೇ ಅದರ ನೀಚ ಉದ್ದೇಶಗಳನ್ನು ಬಯಲುಗೊಳಿಸುತ್ತದೆ.

ಅಲ್ಲದೇ 2008ರ ಡಿಸೆಂಬರ್ 1ರಂದು ಸುಪ್ರೀಂ ಕೋರ್ಟು ಒಂದು ತಡೆಯಾಜ್ಞೆ ನೀಡಿದ್ದು ಅಂತಿಮ ಆದೇಶ ನೀಡುವವರೆಗೆ 1989ರ ಯಥಾಸ್ಥಿತಿಯನ್ನೇ ಉಳಿಸಿಕೊಂಡು ಬರುವಂತೆ ಸರ್ಕಾರಕ್ಕೆ ಆದೇಶ ನೀಡಿದೆ. ಅದರ ಪ್ರಕಾರ ಇಲ್ಲಿ ಕಾಪಾಡಿಕೊಂಡು ಬರಬೇಕಿರುವುದು ದರ್ಗಾ ಸ್ವರೂಪದ ಪದ್ಧತಿಗಳನ್ನು, ಅದರಲ್ಲಿ ವಾಸ್ತುಶಿಲ್ಪವೂ ಒಳಗೊಳ್ಳುತ್ತದೆ. ಆದರೆ ಸರ್ಕಾರವು ವಾಸ್ತುಶಿಲ್ಪದ ನೀಲನಕ್ಷೆಗೆ ಒಪ್ಪಿಗೆ ನೀಡುವಾಗ 1989ರ ಯಥಾಸ್ಥಿತಿಯನ್ನು

ಕಾಪಾಡಿಕೊಂಡು ಬರುವ ಯಾವ ಎಚ್ಚರಿಕೆಯನ್ನೂ ವಹಿಸಿಲ್ಲ.

ದರ್ಗಾದ ದುರಸ್ತಿಯ ನೀಲನಕ್ಷೆಯನ್ನು ತಯಾರಿಸುವ ಜವಾಬ್ದಾರಿಯನ್ನು 'ಟಾರಸ್ ಸ್ಟೀಲ್ ರಿಸರ್ಚ್ ಇನ್ ಇಂಡಿಯಾ' ಎಂಬ ಕಂಪನಿಗೆ ವಹಿಸಲಾಗಿದೆ. ಈ ಕಂಪನಿಗೆ ಈವರೆಗೆ ಇಂಥಾ ಧರ್ಮ ಸೂಕ್ಷ್ಮ ಪುರಾತನ ರಚನೆಗಳನ್ನು ದುರಸ್ತಿ ಮಾಡಿದ ಅನುಭವವೇ ಇಲ್ಲ. ಹೀಗಾಗಿ ಈ ಕಂಪನಿ ಇದನ್ನು ಒಂದು ಪುರಾತನ ಗುಹೆಯೆಂದು ಭಾವಿಸಿ ತನ್ನ ಎಂಜಿನಿಯರಿಂಗ್ ಸಲಹೆಗಳನ್ನು ನೀಡಿದೆಯೇ ವಿನಃ ಇಲ್ಲಿನ ದರ್ಗಾ ಸ್ವರೂಪದ ವಾಸ್ತುಶಿಲ್ಪ ಹೇಗಿರಬೇಕೆಂಬ ಬಗ್ಗೆ ಯೋಚಿಸಿಯೇ ಇಲ್ಲ. ಉದಾಹರಣೆಗೆ ಈ ಸಂಸ್ಥೆಯು ಗುಹೆಯ ಒಳಗಿನ ಸಮಾಧಿಗಳಿರುವ ಸ್ಥಳವನ್ನೂ ಒಳಗೊಂಡಂತೆ ಸಮಾಧಿಗಳ ನಡುವೆ ಮತ್ತು ಇಡೀ ಗುಹೆಯ ಉದ್ದಗಲಕ್ಕೂ ದರ್ಗಾ ಶ್ರದ್ಧೆಯ ನೀತಿನಿಯಮಗಳನ್ನೇ ಪಾಲಿಸದಂತೆ 52ಕ್ಕೂ ಹೆಚ್ಚು ಪಿಲ್ಲರ್‌ಗಳನ್ನು ಕಟ್ಟಿ ಮೂಲರಚನೆಯನ್ನೇ ಸಂಪೂರ್ಣವಾಗಿ ಮಾರ್ಪಡಿಸುವ ಸಲಹೆ ನೀಡಿದೆ. ಇದು ಖಂಡಿತಾ ಕೋಮುವಾದಿ ಸರ್ಕಾರ ಮಾತ್ರ ಒಪ್ಪಿಕೊಳ್ಳಬಹುದಾದ ವಾಸ್ತುಶಿಲ್ಪ. ಏಕೆಂದರೆ ಅಕಸ್ಮಾತ್ ಇದು ಪುರಾತನ ರಾಮ ದೇವಸ್ಥಾನವೊಂದರ ದುರಸ್ತಿಯಾಗಿದ್ದರೆ ವಾಸ್ತುಶಿಲ್ಪದ ಪ್ರಕಾರ ಎಷ್ಟೇ ಅಗತ್ಯವಿದೆ ಎಂದಾಗಿದ್ದರೂ ರಾಮ ಮತ್ತು ಸೀತೆಯ ಪ್ರತಿಮೆಗಳ ನಡುವೆ ಒಂದು ಪಿಲ್ಲರ್ ಕಟ್ಟಲು ಯಾರಾದರೂ ಸಲಹೆ ನೀಡಲು ಸಾಧ್ಯವಾಗುತ್ತಿತ್ತೇ? ಪ್ರತಿಯೊಂದು ಧಾರ್ಮಿಕ ಕೇಂದ್ರಗಳ ವಾಸ್ತುಶಿಲ್ಪದ ಮಾದರಿ ಆಯಾ ಧರ್ಮಗಳ ನಂಬಿಕೆ ಮತ್ತು ಶ್ರದ್ಧೆಗಳಿಗನುಸಾರವಾಗಿ ಬೇರೆಬೇರೆಯಾಗಿಯೇ ಇರುತ್ತದೆ. ಅದನ್ನು ಸರ್ಕಾರಿ ಅಧಿಕಾರಿಗಳು ತೀರ್ಮಾನ ಮಾಡಲು ಸಾಧ್ಯವಿಲ್ಲ. ಇದು ಸರ್ಕಾರಕ್ಕೆ ತಿಳಿಯದೆಂದೇನೂ ಅಲ್ಲ. ಇದೇ ರೀತಿಯ ದುರಸ್ತಿ ಕಾಮಗಾರಿಗಳನ್ನು ಕೃಷ್ಣ ಮಠದಲ್ಲೋ, ತಿರುಪತಿ ದೇವಸ್ಥಾನದಲ್ಲೋ ಕೈಗೊಳ್ಳಬೇಕಿದ್ದರೆ ಸರ್ಕಾರ ಆಗಮ ಪಂಡಿತರ ಅಭಿಪ್ರಾಯವನ್ನು ಕೇಳುತ್ತಿರಲಿಲ್ಲವೇ? ಹೀಗಾಗಿ ವಾಸ್ತುಶಿಲ್ಪದ ಹೆಸರಲ್ಲೂ ಸರ್ಕಾರ ಇಲ್ಲಿ ದರ್ಗಾವನ್ನು ನಾಶ ಮಾಡುವ ಯೋಜನೆಯನ್ನಷ್ಟೇ ಹಿಂಬಾಗಿಲಿಂದ ಅನುಷ್ಠಾನಕ್ಕೆ ತರುತ್ತಿದೆ.

ಇದಲ್ಲದೆ ಈ ಯೋಜನೆಯ ಅನುಷ್ಠಾನವನ್ನು ಸರ್ಕಾರ 'ಬನ್ಸಾಸ್ ಕಾಂಟೆಕ್ ಪ್ರೈವೇಟ್ ಲಿಮಿಟೆಡ್' ಎಂಬ ಕಂಪನಿಗೆ ವಹಿಸಿದೆ. ಇದೊಂದು ಬಿಜೆಪಿ ಕೃಪಾಪೋಷಿತ ಕಂಪನಿ. ಇದು ಕಟ್ಟಡ ಕ್ಷೇತ್ರಕ್ಕೆ ಕಾಲಿಟ್ಟದ್ದೇ 200 ನಂತರ. ಅಲ್ಲದೇ ಅದರ ಪರಿಣಿತಿ ಇರುವು ನಿರ್ಮಾಣದಲ್ಲೇ ವಿನಃ ನಿರ್ವಹಣದಲ್ಲಲ್ಲ. ಅಲ್ಲದೆ ಕಂಪನಿಯ ಈವರೆಗಿನ ತನ್ನ ನಿರ್ಮಾಣ ಕಾಮಗ ಯಲ್ಲೂ ಪ್ರಾಚೀನ ಕಟ್ಟಡಗಳ ಮತ್ತು ಗುಹಾಂತಗ ರಚನೆಗಳ ಮೂಲ ರಚನೆಯನ್ನು ಉಳಿಸಿಕೊಂ ಕೆಡುವುವಂತ ಪರಿಣಿತಿಯನ್ನು ಪಡೆದಿಲ್ಲ.

ಈ ಕಂಪನಿ ಮೊದಲು ಟ್ರೇಡಿಂಗ್ ಮತ್ತು ಪೇಪ ಬೋರ್ಡ್ ವ್ಯವಹಾರಗಳನ್ನು ಮಾಡಿಕೊಂಡಿತ್ತು. ಬಳ ಮೂಲದ ಈ ಕಂಪನಿಯ ಇತಿಹಾಸವನ್ನು ನೋಡಿದ ಕರ್ನಾಟಕದಲ್ಲಿ ರೆಡ್ಡಿ ಬ್ರದರ್ಸ್ ಮತ್ತು ಬಿಜೆಪಿ ಯಶಸ್ಸಿನೊಂದಿಗೆ ಈ ಕಂಪನಿಯ ಯಶಸ್ಸೂ ತಳ ಹಾಕಿಕೊಂಡಿರುವುದು ಬರಿಗಣ್ಣಿಗೇ ಗೊತ್ತಾಗುತ್ತದೆ. ಕಂಪನಿಗೇ ಬಾಬಾಬುಡನ್‌ಗಿರಿ ನಿರ್ಮಾಣ ಮಾಡ ಕಾಂಟ್ರಾಕ್ಟ್ ಕೊಡಬೇಕೆಂದು ಆಗ್ರಹಿಸಿದ ಚಿಕ್ಕಮಗಳೂ ಜಿಲ್ಲಾಧಿಕಾರಿಯು ಒದಗಿಸಿರುವ ಪುರಾವೆಗಳು ಹೇ ವುದೇನೆಂದರೆ ಈ ಕಂಪನಿಗೆ ರಸ್ತೆ ಕಟ್ಟಲು ಅಡ್ಡವಾಗಿರ ಕಟ್ಟಡಗಳನ್ನು ಕೆಡವುದು ಗೊತ್ತೇ ವಿನಃ ಗುಹೆಗಳನ್ನ ಗುಡ್ಡಗಾಡುಗಳಲ್ಲೂ ನಿರ್ಮಾಣ ಅಥವಾ ನಿರ್ಮಾ ಮಾಡಿದ ಪರಿಣತಿ ಇಲ್ಲ. ಅಲ್ಲದೆ ಈ ಕಂಪನಿ ವಾರ್ಷಿಕ ವ್ಯವಹಾರ 2003ರಿಂದ 2006ರವರೆಗೆ ಕೋಟಿಗಳನ್ನು ದಾಟರಲಿಲ್ಲ. ಆದರೆ 2006ರಲ್ಲಿ ಬಿಜೆ ಪಕ್ಷಕ್ಕೆ ಅರ್ಧ ಅಧಿಕಾರ ಸಿಕ್ಕೊಡನೆ ನಿಧಾನವಾಗಿ ಕೋಟಿಗಳ ಗಡಿಗಳನ್ನು ದಾಟಿತು. ಬಿಜೆಪಿಗೇ ಸಂಪೂರ್ಣ ಅಧಿಕಾರ ದೊರೆತ ನಂತರ 8 ಕೋಟಿಗಳನ್ನು ದಾಟಿ ಹೀಗಾಗಿ ಇದೊಂದು ಬಿಜೆಪಿ ಕಂಪನಿ ಎಂಬುದರ ಎರಡು ಮಾತಿಲ್ಲ.

ಬನ್ಸಾಸ್ ಕಂಪನಿಯ ಈ ಅನರ್ಹತೆಯ ಮುಚ್ಚಿಹಾಕಲೆಂದೇ ಈ ಗುತ್ತಿಗೆಗೆ ಕರ್ನಾಟಕ ಪಾರದರ್ಶ ಕಾಯಿದೆಯಿಂದ ವಿನಾಯತಿ ನೀಡಲಾಗಿದೆ. ಇದರಿಂದ 2 ಕೋಟಿ ರೂ.ಗಳಿಗೂ ಹೆಚ್ಚಿನ ಈ ಸೂಕ್ಷ್ಮ ಕಾಮಗ ಕುರಿತು ಯಾವುದೇ ಟೆಂಡರ್ ಪ್ರಕ್ರಿಯೆ ನಡೆಯ ಅತ್ಯಂತ ತ್ವರಿತವಾಗಿ ಬನ್ಸಾಸ್ ಕಂಪನಿಗೆ ಇದ ಗುತ್ತಿಗೆಯನ್ನು ನೀಡಲಾಗಿದೆ. ಕರ್ನಾಟಕ ಪಾರದರ್ಶ ಕಾಯಿದೆ-2000ಕ್ಕೆ 2003ರಲ್ಲಿ ತರಲಾಗಿರು ತಿದ್ದುಪಡಿಯ ಪ್ರಕಾರ ಯಾವುದಾದರೂ ಒಂದು ಕಂಪ ಈ ಕಾಯಿದೆಯಿಂದ ವಿನಾಯತಿ ನೀಡಬೇಕೆಂದ ಟೆಂಡರ್ ಕರೆಯದೇ ಯಾವುದಾದರೂ ಒಂ ಕಂಪನಿಯಿಂದ ಯಾವುದಾದರೂ ಸೇವೆ ಪಡೆಯಬೇಕಾ ಅಂಥ ಸೇವಾ ಪರಿಣತಿ ರಾಜ್ಯದ ಮತ್ತು ದೇಶ ಇನ್ನಾವುದೇ ಕಂಪನಿಗಳಿಗೆ ಇಲ್ಲ ಎಂಬುದು ಸಾಬೀತಾ ಬೇಕು. ಆದರೆ ಬನ್ಸಾಸ್ ಕಂಪನಿಗೆ ಇಂಥಾ ಯಾವು ಪರಿಣಿತಿ ಇಲ್ಲ. ಅದಕ್ಕಿರುವ ಏಕೈಕ ಅರ್ಹತೆ ಎಂ ಬಿಜೆಪಿ ಪಕ್ಷದ ಕೃಪಾಕಟಾಕ್ಷ ಮಾತ್ರ!

ಹೀಗಾಗಿ ಎಲ್ಲಾ ಕಾನೂನು ಕ್ರಮಗಳನ್ನು ಉಲ್ಲಂ ಅತ್ಯಂತ ತ್ವರಿತವಾಗಿ ಬಾಬಾಬುಡನ್‌ಗಿರಿಯ ಕಾಮಗಾರಿಯನ್ನು ನಡೆಸುವ ಹಿಂದೆ ಇರುವುದು ಒಂ ದೊಡ್ಡ ಷಡ್ಯಂತ್ರವೇ ಆಗಿದೆ. ಗಿರಿಯಲ್ಲಿರುವುದು ದರ್ ಶ್ರದ್ಧೆಯೇ ಎಂಬ ಬಗ್ಗೆ ಕರ್ನಾಟಕ ಕೋಮು ಸೌಹಾ ವೇದಿಕೆ ಸಲ್ಲಿಸಿರುವ ದಾವೆ ಪೂರ್ಣ ಪ್ರಮಾಣದ ಸುಪ್ರೀಂ ಕೋರ್ಟಿನ ಮುಂದೆ ಬರಲು ಡಿಸೆಂಬ ಕೊನೆಯಾಗುತ್ತದೆ. ಅದರ ಒಳಗೆ ಕಾಮಗಾರಿಯ ಮುಗಿಸಿ 2.9 ಕೋಟಿ ರೂ. ವೆಚ್ಚದಲ್ಲಿ ದರ್ಗಾ ಕೆ ದೇವಸ್ಥಾನ ರೂಪದ ರಚನೆ ತಲೆ ಎತ್ತಿದ್ದರೆ ನ್ಯಾಯಾಲಯ ಸಹ ಅದನ್ನು ಕೆಡವಿ ಹಾಕುವ ಆದೇಶ ನೀಡುವು ಕಷ್ಟವಾಗುತ್ತದೆ. ಹೀಗೆ ಈ "ಕೋಮು"ಗಾರಿಯ ಹಿಂ ಸುಪ್ರೀಂ ಕೋರ್ಟಿನ ಕಣ್ಣಿಗೂ ಮಣ್ಣೆರೆಚುವ ಸನ್ನಾಹ ದರ್ಗಾವನ್ನು ಕೆಡವಿ ದೇವಸ್ಥಾನವನ್ನು ಕಟ್ಟುವ ಪ್ರಯತ್ನ ಕಾನೂನು, ನ್ಯಾಯ ಎಲ್ಲವನ್ನು ಮೀರಿ ಕೋಮುವಾದ ಹಿಂಬಾಗಿಲಿಂದ ಜಾರಿಗೆ ತರುವ ಕೋಮುವಾ ಅಜೆಂಡಾ ಇದೆ.

ಇದನ್ನು ಶತಾಯಗತಾಯ ತಡೆಗಟ್ಟುವ ಜವಾ ಕರ್ನಾಟಕದ ಎಲ್ಲಾ ಧರ್ಮೀಯರದ್ದು. ಏಕೆಂದರೆ ದಾಳಿಗೊಳಗಾಗುತ್ತಿರುವುದು ದರ್ಗಾ ಧರ್ಮ ಮಾತ್ರ ಎಲ್ಲಾ ಧರ್ಮಗಳು ಒಂದೇ ಎಂಬ ಜನಸಾಮಾ ಧಾರ್ಮಿಕತೆಯೇ ಇಲ್ಲಿ ದಾಳಿಗೊಳಗಾಗುತ್ತಿದೆ. ಕಾನೂ ಬದ್ಧ ಆಡಳಿತವೆಂಬ ಪ್ರಜಾತಂತ್ರದ ಮೂಲಧಾತು ಇಲ್ಲಿ ದಾಳಿಗೊಳಗಾಗುತ್ತಿದೆ. ಹೀಗಾಗದಂತೆ ತಡೆಗಟ್ ಜವಾಬ್ದಾರಿ ನಮ್ಮ ನಿಮ್ಮೆಲ್ಲರದ್ದೂ ಆಗಿದೆ.

ಕನ್ನಡ ಚಿತ್ರರಂಗ ಎಲ್ಲಿ ತಪ್ಪಿದೆ?



ಕಂಡಹಾಗೆ

■ ಗೌರಿ ಲಂಕೇಶ್



ನಮ್ಮ ಕನ್ನಡ ಚಿತ್ರರಂಗಕ್ಕೆ ಪ್ರತಿಭೆಯನ್ನು ...ಸುವುದಾಗಲಿ, ಅದನ್ನು ಪ್ರೋತ್ಸಾಹಿಸಿ ...ವುದಾಗಲಿ ಗೊತ್ತಿಲ್ಲ ಎಂಬುದಕ್ಕೆ ಈ ಬಾರಿ ...ಯ ಅತ್ಯುತ್ತಮ ನಟ ಮತ್ತು ನಟಿ ಪ್ರಶಸ್ತಿಗಳನ್ನು ...ರುವ ಪ್ರಕಾಶ್ ರೈ ಮತ್ತು ಉಮಾಶ್ರೀಯವರೇ ...ು ಉದಾಹರಣೆಗಳು.

...ಂಗ್ಲಿಷ್‌ನಲ್ಲಿ `Think out of the box' ... ಜಾಣ್ನುಡಿ ಇದೆ. ಇದರರ್ಥ ...ದಾಯಿಕವಾಗಿ ಯೋಚಿಸುವ ಬದಲಾಗಿ ಹೊಸ ...ರುಲ್ಲಿ, ಸೃಜನಾತ್ಮಕವಾಗಿ ಮತ್ತು ...ಂತಿಕೆಯಿಂದ ಚಿಂತಿಸಿ ಕ್ರಿಯಾಶೀಲರಾಗುವುದು. ... ಕನ್ನಡ ಚಿತ್ರರಂಗದವರಿಗೆ ಕ್ಲೀಷೆ, ಫಾರ್ಮುಲಾ, ...ಳ್ ತರಹದ ಸಿದ್ಧ ತಂತ್ರಗಳ ಚೌಕಟ್ಟನ್ನು ...ವ ಕ್ರಿಯಾಶೀಲತೆಯೇ ಇಲ್ಲದಂತಾಗಿದೆ. ...ದಲೇ ಪಕ್ಕದ ಕೇರಳ, ತಮಿಳುನಾಡು ಮತ್ತು ...ಪ್ರದೇಶಗಳ ಚಿತ್ರರಂಗಗಳಲ್ಲಿ ಸಾಧ್ಯವಾಗುತ್ತಿರುವ ... ಬಗೆಯ ಕಥಾವಸ್ತುಗಳನ್ನು ಹೊಂದಿರುವ ...ು ನಮ್ಮವರಿಂದ ಸಾಧ್ಯವಾಗುತ್ತಿಲ್ಲ.

...ದಕ್ಕೊಂದು ಉದಾಹರಣೆ ಕೊಡಬಹುದು. ...ವರ್ಷ 'ಅಭಿಯುಂ ನಾನುಂ' (ಅಭಿ ಮತ್ತು ... ಎಂಬ ಚಿತ್ರವನ್ನು ತಮಿಳಿನಲ್ಲಿ ...ಸಿ-ನಟಿಸಿದ್ದರು ಪ್ರಕಾಶ್ ರೈ. ತಂದೆ ಮತ್ತು ... ನಡುವಿನ ಸಂಬಂಧವನ್ನು ಕುರಿತ ಆ ಸಿನಿಮಾ ...ಕರು ಮತ್ತು ಪ್ರೇಕ್ಷಕರಿಂದ ಮನ್ನಣೆ ...ತ್ತು, ಆ ಚಿತ್ರವನ್ನು ಕನ್ನಡದಲ್ಲಿ ರಿಮೇಕ್ ...ಬೇಕೆಂದು ಹಲವರು ಯೋಚಿಸಿದರಾದರೂ ...ವರೇ ಆದ ಪ್ರಕಾಶ್ ಬದಲಾಗಿ ತಂದೆಯ ...ಲ್ಲಿ ವಿಷ್ಣುವರ್ಧನ್ ಅವರನ್ನು ಹಾಕಿದರೆ ವಾಸಿ ... ಭಾವಿಸಿದರು. ಅದಕ್ಕೆ ಅವರು ನೀಡಿದ ... "ಪ್ರಕಾಶ್ ರೈಗೆ ಕನ್ನಡದಲ್ಲಿ ಮಾರ್ಕೆಟ್ ಇಲ್ಲ" ...ದು.

...ಂದಹಾಗೆ 'ಮುಂಗಾರು ಮಳೆ'ಯ ಮುನ್ನ ...ಣೇಶನಿಗಾಗಲಿ, 'ದುನಿಯಾ' ಮುನ್ನ ...ಗಾಗಲಿ, 'ನಂದ ಲವ್ಸ್ ನಂದಿತಾ' ಮುನ್ನ ...ಶ್ ಅಲಿಯಾಸ್ ಲೂಸ್ ಮಾದನಿಗಾಗಲಿ ... ಮಾರುಕಟ್ಟೆ ಇತ್ತು? ಇಂತಹ ಪ್ರಶ್ನೆಗಳ ಬಗ್ಗೆ ...ಪಕರ ಯೋಚಿಸುವುದೇ ಇಲ್ಲ. ಚಿತ್ರವೊಂದರ ...ಗೆ ಮಾರುಕಟ್ಟೆ ಮುಖ್ಯ ಎಂಬುದನ್ನು ...ಂಡರೂ ಅದರೊಂದಿಗೆ ಚಿತ್ರದ ಕತೆ, ಅದರ ...ಣಾ ಶೈಲಿ ಮತ್ತು ಸದಭಿರುಚಿಯೂ ಅಷ್ಟೇ ... ಎಂಬುದನ್ನು ಪರಿಗಣಿಸಲೇಬೇಕು. ಪ್ರಕಾಶ್ ...ಗಿ ವಿಷ್ಣುವರ್ಧನ್ ಅವರನ್ನು ಹಾಕುವ ... ಬಂದಾಗ ಯಾರೋ ಒಬ್ಬರು ಚಟಾಕಿ ...ದರಂತೆ: "ಈಗ ಅರವತ್ತರ ಸಮೀಪವಿರುವ ...ವರು ಈಗಲೂ 'ಬಳ್ಳಾರಿ ನಾಗ' ತರಹದ ...ಲ್ಲಿ ಹೀರೋ ಆಗಿ ನಟಿಸುತ್ತಿರುವುದರಿಂದ ... ಕೇವಲ ತಂದೆಯ ಪಾತ್ರ ಮಾಡಲು ...ಸಬಹುದು. ಬದಲಾಗಿ ಆ ಚಿತ್ರದಲ್ಲಿ ಬರುವ ಯುವ ಅಳಿಯನ ಪಾತ್ರವನ್ನೂ ತಾನೇ ಮಾಡಬೇಕೆಂದು ಹಠ ಹಿಡಿಯಬಹುದು!" ಈಗ ಆ ಚಿತ್ರವನ್ನು ಪ್ರಕಾಶ್ ಸ್ವತಃ ನಿರ್ಮಿಸಿ, ನಿರ್ದೇಶಿಸಿ ನಟಿಸಲು ಹೊರಟಿದ್ದಾರೆ ಎನ್ನುವುದು ಬೇರೆ ಮಾತು.


ಪ್ರಕಾಶ್ ರೈಗೆ ರಾಷ್ಟ್ರ ಪ್ರಶಸ್ತಿ ಘೋಷಣೆಯಾದಾಗ ನಮ್ಮ ಮಾಧ್ಯಮಗಳು ಅದು ಕನ್ನಡಿಗರಿಗೆ ಮತ್ತು ಕನ್ನಡ ಚಿತ್ರರಂಗಕ್ಕೆ ಸಂದ ಗೌರವ ಎಂಬಂತೆ ಬಿಂಬಿಸಿದವು. ಆದರೆ ಎರಡು ದಶಕಗಳಿಂದ ಇವತ್ತಿನವರೆಗೂ ಕನ್ನಡ ಚಿತ್ರರಂಗ ಪ್ರಕಾಶ್ ರೈ ಎಂಬ ಅದ್ಭುತ ನಟನನ್ನು ತಿರಸ್ಕರಿಸುತ್ತಲೇ ಬಂದಿದೆ ಎಂಬುದು ವಾಸ್ತವ. 90ರ ದಶಕದ ಆರಂಭದಲ್ಲಿ ನಟನೆಯನ್ನೇ ತನ್ನ ಉಸಿರಾಗಿಸಿಕೊಂಡು ಅವಕಾಶಗಳಿಗಾಗಿ ಪರದಾಡುತ್ತಿದ್ದ ಪ್ರಕಾಶ್ ರೈ ಆಗಿನಿಂದಲೂ ನನಗೆ ಪರಿಚಯ. ಒಂದು ಬಿಳಿ ಶರ್ಟ್ ಮತ್ತು ಜೀನ್ಸ್ ಪ್ಯಾಂಟ್ ಮಾತ್ರ ಹೊಂದಿದ್ದ ಪ್ರಕಾಶ್ ಮಿತ್ರರ ಬಟ್ಟೆ ಧರಿಸಿ ಮಿಂಚುತ್ತಿದ್ದದ್ದು, ಗೆಳೆಯರೇ ನಾಟಕಗಳಲ್ಲಿ ಅವಕಾಶ ನೀಡದಿದ್ದಾಗ ಕುಡಿದು ಗಲಾಟೆ ಮಾಡಿದ್ದು, ಒಂದು ಹೊತ್ತಿನ ಊಟ ಸಿಗುತ್ತದೆಂದು ಚಿಕ್ಕಪುಟ್ಟ ಪಾತ್ರಗಳಿಗೆ ಡಬ್ ಮಾಡುತ್ತಿದ್ದದ್ದು, ಜೇಬಿನಲ್ಲಿ ಕಾಸಿಲ್ಲದೆ 'ನಟರಾಜ್ ಎಕ್ಸ್‌ಪ್ರೆಸ್'ನಲ್ಲಿ ಎಲ್ಲೆಲ್ಲೂ ಓಡಾಡುತ್ತಿದ್ದದ್ದು ಎಲ್ಲವೂ ನನಗೆ ನೆನಪಿದೆ. ಹಾಗೆಯೇ ಖ್ಯಾತ ನಿರ್ದೇಶಕ ಬಾಲಚಂದರ್ ಅವರು ಪ್ರಕಾಶನಿಗೆ ಅವಕಾಶ ಕೊಟ್ಟಾಗ ಅದರ ಬಗ್ಗೆ ಊರಿಗೆಲ್ಲ ಡಂಗೂರ ಸಾರಿ ಚೆನ್ನೈಗೆ ಹೋದದ್ದು, ಆನಂತರ ತೆಲುಗು ಸಿನಿಮಾಗಳಲ್ಲೂ ಖ್ಯಾತಿ ಪಡೆದದ್ದು, ಮಣಿರತ್ನಂ ಅವರ 'ಇರುವರ್' ಚಿತ್ರದಲ್ಲಿ ಕರುಣಾನಿಧಿಯ ಪಾತ್ರ ಮಾಡಿ ಜನಪ್ರಿಯತೆ ಪಡೆದದ್ದು, ಅದೆಲ್ಲದರ ಮಧ್ಯೆಯೂ ಕನ್ನಡ ಚಿತ್ರರಂಗದೊಂದಿಗೆ ಸಂಪರ್ಕ ಇಟ್ಟುಕೊಂಡಿರಬೇಕೆಂದು ನಮ್ಮವರು ನೀಡಿದ ಪಾತ್ರಗಳಲ್ಲೂ ನಟಿಸಿದ್ದು, ಗಿರೀಶ್ ಕಾರ್ನಾಡ್ ಬರೆದಿರುವ, ನಾಗಾಭರಣ ನಿರ್ದೇಶನವಿದ್ದ 'ನಾಗಮಂಡಲ'ದಲ್ಲಿ ಅದ್ಭುತವಾಗಿ ನಟಿಸಿದ್ದರೂ ರಾಜ್ಯ ಪ್ರಶಸ್ತಿಯಿಂದ ವಂಚಿತನಾಗಿ ಹುಲುಬಿದ್ದು... ಎಲ್ಲವೂ ನೆನಪಿದೆ. ಅಪ್ಪಟ ಕನ್ನಡಿಗನಾದ ಪ್ರಕಾಶ್ ಇವತ್ತು ಇಲ್ಲಿ ಮಾರುಕಟ್ಟೆ ಹೊಂದಿರದೆ, ತಮಿಳಿನ ಚಿತ್ರಕ್ಕಾಗಿ ರಾಷ್ಟ್ರ ಪ್ರಶಸ್ತಿ ಪಡೆಯುತ್ತಾರೆಂದರೆ ಅದು ಆತನ ಪ್ರತಿಭೆಗೆ ಸಂದ ಗೌರವ ಮಾತ್ರವಲ್ಲ, ಕನ್ನಡ ಚಿತ್ರರಂಗಕ್ಕಾದ ಮುಖಭಂಗವೂ ಹೌದು ಎಂದೇ ಭಾವಿಸಬಹುದು.

ಒಂದು ವಿಪರ್ಯಾಸವನ್ನು ಗಮನಿಸಿ: ಕನ್ನಡ ಚಿತ್ರರಂಗದಲ್ಲಿ ನಟಸಾರ್ವಭೌಮ, ಸಾಹಸಸಿಂಹ, ನವರಸ ನಾಯಕ, ಕಲಾ ಸಾಮ್ರಾಟ್, ಗೋಲ್ಡನ್ ಸ್ಟಾರ್, ರಿಯಲ್ ಸ್ಟಾರ್, ಸೂಪರ್ ಸ್ಟಾರ್, ಚಾಲೆಂಜಿಂಗ್ ಸ್ಟಾರ್ ಇತ್ಯಾದಿ ಬಿರುದಾಂಕಿತ ನಟರಿಗೆ ಯಾವ ಅಭಾವವೂ ಇಲ್ಲ. ಆದರೂ ಇಲ್ಲಿಯವರೆಗೆ ಕನ್ನಡ ಚಿತ್ರದಲ್ಲಿ ನಟಿಸಿ ರಾಷ್ಟ್ರ ಪ್ರಶಸ್ತಿ ಪಡೆದ ಏಕೈಕ ಕನ್ನಡಿಗ ಎಂ.ವಿ. ವಾಸುದೇವ ರಾವ್ ('ಚೋಮನ ದುಡಿ' ಚಿತ್ರಕ್ಕೆ 1976 ರಲ್ಲಿ). ಅವರ ನಂತರ 1987 ರಲ್ಲಿ 'ತಬರನ ಕತೆ' ಚಿತ್ರದ ಪಾತ್ರಕ್ಕೆ ಚಾರುಹಾಸನ್ ಅವರಿಗೆ ರಾಷ್ಟ್ರ ಪ್ರಶಸ್ತಿ ಬಂದಿತ್ತಾದರೂ ಹಾಸನ್ ಅವರು ತಮಿಳರು. ಈಗ ಪ್ರಕಾಶನಿಗೆ ಬಂದಿದೆಯಾದರೂ ಅದು ತಮಿಳು ಚಿತ್ರದಲ್ಲಿನ ನಟನೆಗೆ. ಅಂದರೆ ರಾವ್ ಅವರ ನಂತರ ಕಳೆದ 33 ವರ್ಷಗಳಿಂದ ಯಾವ ಕನ್ನಡಿಗ ನಟನಿಗೂ ಕನ್ನಡ ಚಿತ್ರದಲ್ಲಿನ ನಟನೆಗೆ ರಾಷ್ಟ್ರ ಪ್ರಶಸ್ತಿ ಬಂದಿಲ್ಲ-('ಮೌನಿ' ಚಿತ್ರಕ್ಕೆ ದತ್ತಣ್ಣನವರಿಗೆ ಸಿಕ್ಕಿದ್ದು ಅತ್ಯುತ್ತಮ ಪೋಷಕ ನಟ ಪ್ರಶಸ್ತಿ). ಇದು ನಮ್ಮ ಚಿತ್ರರಂಗದಲ್ಲಿ ಪ್ರತಿಭೆ ಇಲ್ಲ ಎಂಬುದನ್ನು ಸೂಚಿಸುತ್ತದಲ್ಲವೇ?

ಪ್ರಕಾಶ್‌ನಂತೆಯೇ ಪ್ರತಿಭೆ ಹೊಂದಿದ್ದರೂ ಕಷ್ಟಪಟ್ಟು ಮುಂದೆ ಬಂದವರು ಉಮಾಶ್ರೀ. ನಾಟಕರಂಗದಲ್ಲಿ ಸಾಕಷ್ಟು ಖ್ಯಾತಿ ಗಳಿಸಿದ್ದ, ದೇವನೂರು ಮಹಾದೇವರ 'ಒಡಲಾಳ'ದ ಸಾಕವ್ವಳೇ ಆಗಿದ್ದ, ಫ್ರಿಟ್ಜ್ ಬೆನಿವಿಟ್ಸ್, ಬಿ.ವಿ. ಕಾರಂತ್, ಗಿರೀಶ್ ಕಾರ್ನಾಡರಂತಹ ವಿಖ್ಯಾತ ನಿರ್ದೇಶಕರೊಂದಿಗೆ ಕೆಲಸ ಮಾಡಿದ್ದ ಉಮಾಶ್ರೀ ಅವರಿಗೆ ಕನ್ನಡ ಚಿತ್ರರಂಗ ಮೊದಲು ನೀಡಿದ್ದು ವಾಂಪ್ ಪಾತ್ರಗಳನ್ನು, ಆನಂತರ ಕೊಟ್ಟಿದ್ದು ದ್ವಂದ್ವಾರ್ಥವಿರುವ ಕಾಮಿಡಿ ಪಾತ್ರಗಳನ್ನು. ರವಿಚಂದ್ರನ್, ರಾಜೇಂದ್ರ ಸಿಂಗ್ ಬಾಬು ತರಹದವರು ಅಪರೂಪಕ್ಕೊಮ್ಮೆ ಉಮಾಶ್ರೀ ಅವರಲ್ಲಿದ್ದ ಪ್ರತಿಭೆಯನ್ನು ಹೊರ ತೋರುವಂತಹ ಪಾತ್ರಗಳನ್ನು ನೀಡಿದರಾದರೂ ಉಮಾಶ್ರೀಗೆ ದಕ್ಕಿದ್ದು ಸಣ್ಣಪುಟ್ಟ ರೋಲ್‌ಗಳಷ್ಟೇ.

ಉಮಾಶ್ರೀ ಅವರು ನನಗೆ ಪರಿಚಯವಿಲ್ಲವಾದ್ದರಿಂದ ಅವರ ಬಗ್ಗೆ ನಮ್ಮ ಹಿರಿಯ ಸಿನಿಮಾ ವರದಿಗಾರ ಸದಾಶಿವ ಶೆಣೈ ಅವರನ್ನು ಕೇಳಿದೆ. "ಚಿತ್ರರಂಗದಲ್ಲಿ ಗಾಡ್‌ಫಾದರ್‌ಗಳಿಲ್ಲದಿದ್ದರೆ ತುಂಬಾ ಕಷ್ಟ. ಉಮಾಶ್ರೀ ಅವರು ಚಿತ್ರರಂಗಕ್ಕೆ ಬರುವ ಮುನ್ನ ಎಂತಹ ಬಡತನದಲ್ಲಿದ್ದರೆಂದರೆ ರಸ್ತೆ ಬದಿ ಇಡ್ಲಿಗಳನ್ನು ಮಾರುತ್ತಿದ್ದರು. ಸಿನಿಮಾಗಳಲ್ಲಿ ನಟಿಸಲಾರಂಭಿಸಿದ ಮೇಲೂ ಅವರು ಹೆಜ್ಜೆಹೆಜ್ಜೆಗೆ ಅವಮಾನಗಳನ್ನು ಎದುರಿಸುತ್ತಲೇ ಬಂದರು. ಆದರೆ ಅವರು ಎಂದೂ ವಾದವಿವಾದಗಳಲ್ಲಿ ಸಿಕ್ಕಿ ಹಾಕಿಕೊಳ್ಳಲಿಲ್ಲ, ಗಲಾಟೆ ಮಾಡಲಿಲ್ಲ, ಬದಲಾಗಿ ವೃತ್ತಿಪರತೆಯಿಂದ ತಮಗೆ ನೀಡಿದ ಪಾತ್ರವನ್ನು ಮಾಡುತ್ತಾ ಬಂದರು" ಎಂದರು ಶೆಣೈ.

ಉಮಾಶ್ರೀ ಅವರ ವೈಯಕ್ತಿಕ ಬದುಕು ದುರಂತದಿಂದ ಕೂಡಿದ್ದರಿಂದಲೇ ಅವರು ಸಿಕ್ಕ ಎಲ್ಲಾ ತರಹದ ಪಾತ್ರಗಳಲ್ಲಿ ನಟಿಸಲು ಒಪ್ಪುತ್ತಿದ್ದರು. ಕೇವಲ ಹತ್ತನೇ ತರಗತಿ ತನಕ ಓದಿರುವ ಅವರು ಇಪ್ಪತ್ತು ವರ್ಷ ತುಂಬುವ ಹೊತ್ತಿಗೆ ಇಬ್ಬರು ಮಕ್ಕಳನ್ನು ಹಡೆದಿದ್ದರಲ್ಲದೆ ಅವರ ಗಂಡ ಆಕೆಯನ್ನು ತೊರೆದು ಇನ್ನೊಬ್ಬರನ್ನು ಮದುವೆಯಾಗಿದ್ದರು. ಆಗ ತಮ್ಮ ಇಬ್ಬರು ಮಕ್ಕಳನ್ನು ಪೋಷಿಸುವ ಜವಾಬ್ದಾರಿ ಉಮಾಶ್ರೀಯವರ ಹೆಗಲಿಗೇರಿತು. 80 ರ ದಶಕದ ಆರಂಭದಲ್ಲಿ ಗ್ರಾಮೀಣ ರಂಗತಂಡಗಳೊಂದಿಗೆ ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಲಾರಂಭಿಸಿದ ಉಮಾಶ್ರೀ ಆನಂತರ ಆಧುನಿಕ ನಾಟಕ ತಂಡಗಳ ಸಂಪರ್ಕ ಪಡೆದು ಆ ನಾಟಕಗಳಲ್ಲೂ ನಟಿಸಲಾರಂಭಿಸಿದರು. ಸಂದರ್ಶನವೊಂದರಲ್ಲಿ



ಉಮಾಶ್ರೀ ಅವರು "ಹೊಟ್ಟೆಪಾಡಿಗಾಗಿ ನಾನು ನಟಿಸಲಾರಂಭಿಸಿದೆ. ಬದುಕಿನ ಕಷ್ಟಗಳೇ ನನಗೆ ಪಾಠಗಳಾದವು. ಗೆಲುವು ಮತ್ತು ಸೋಲುಗಳು ಜೀವನದ ಅಂಗಗಳು. ನಾನು ಹಲವು ಬಾರಿ ಗೆದ್ದಿದ್ದೇನೆ, ಹಲವು ಬಾರಿ ಸೋತಿದ್ದೇನೆ" ಎಂದು ಹೇಳಿಕೊಂಡಿದ್ದಾರೆ.

ಇಂದು ವೃತ್ತಿ ಬದುಕಿನಲ್ಲಿ ಉನ್ನತ ಸಾಧನೆ ಮಾಡಿರುವ ಉಮಾಶ್ರೀ ಅವರು ನಟನೆಯ ಪ್ರಥಮ ಹೆಜ್ಜೆ ಇಟ್ಟಾಗ ಸೋತಿದ್ದರು ಎಂಬುದೇ ವಿಚಿತ್ರ. ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರು ತಮ್ಮ 'ಅಮೃತ ಘಳಿಗೆ' ಚಿತ್ರದಲ್ಲಿ ಉಮಾಶ್ರೀಗೆ ಒಂದು ಪಾತ್ರ ನೀಡಿದ್ದರಂತೆ. ಆದರೆ ಇವರ ನಟನೆಯನ್ನು ನೋಡಿ "ಈಕೆ ಸಿನಿಮಾಗೆ ಸೂಟ್ ಆಗಲ್ಲ" ಎಂದು ತಿರಸ್ಕರಿಸಿದ್ದರಂತೆ. ಬೇರೆ ಯಾರಾದರೂ ಆಗಿದ್ದರೆ ಕಣಗಾಲ್ ಅವರಿಂದ ತಿರಸ್ಕೃತಗೊಂಡ ನಂತರ ನಟನೆಯ ಉಸಾಬರಿಗೇ ಹೋಗುತ್ತಿರಲಿಲ್ಲ, ಆದರೆ ಉಮಾಶ್ರೀ ಸುಮ್ಮನಾಗಲಿಲ್ಲ. ಇಲ್ಲಿಯವರೆಗೆ ಅವರು 325 ಸಿನಿಮಾಗಳಲ್ಲಿ ನಟಿಸಿದ್ದಾರಲ್ಲದೆ ಆರು ಸಾವಿರಕ್ಕೂ ಹೆಚ್ಚು ನಾಟಕ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಅಷ್ಟೇ ಅಲ್ಲ, ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ ಮತ್ತು ಅಭಿಮಾನಿಗಳನ್ನು ಪಡೆದಿದ್ದಾರೆ.

ಚಿಕ್ಕಪುಟ್ಟ ಪಾತ್ರಗಳಲ್ಲಿ ನಟಿಸುತ್ತಾ ತಮ್ಮ ಮಗಳು ಗಾಯತ್ರಿಯನ್ನು ವೈದ್ಯೆಯನ್ನಾಗಿಸಿದ್ದಾರೆ, ಮಗ ವಿಜಯಕುಮಾರ್‌ನನ್ನು ವಕೀಲನನ್ನಾಗಿಸಿದ್ದಾರೆ, ಸ್ವಂತ ಮನೆ ಕಟ್ಟಿಕೊಂಡಿದ್ದಾರೆ, ರಾಜಕೀಯದಲ್ಲೂ ಪಾಲ್ಗೊಂಡು ಒಮ್ಮೆ ವಿಧಾನ ಪರಿಷತ್ತಿನ ಸದಸ್ಯೆಯೂ ಆಗಿದ್ದಾರೆ.

ಇನ್ನೊಂದು ಸಂದರ್ಶನದಲ್ಲಿ ಉಮಾಶ್ರೀ ಅವರು ಭಾಷಾ ವ್ಯತ್ಯಾಸಗಳ ಬಗ್ಗೆ, ಜನರ ಹಾವಭಾವಗಳ ಬಗ್ಗೆ, ಪರಿಸರ ಜನರ ಮೇಲೆ ಬೀರುವ ಪ್ರಭಾವದ ಬಗ್ಗೆ ತಾನು ಅಪಾರ ಆಸಕ್ತಿ ಹೊಂದಿರುವುದರಿಂದ ವಿವಿಧ ಪಾತ್ರಗಳಿಗೆ ಜೀವ ತುಂಬುವುದು ತನ್ನಿಂದ ಸಾಧ್ಯ ಎಂದಿದ್ದಾರೆ. ಅಷ್ಟೇ ಅಲ್ಲ, "ಇವತ್ತಿನ ನಟಿಯರಿಗೆ ಕಲಾಕ್ಷೇತ್ರದ ಬಾತ್‌ರೂಂನಲ್ಲಿ ಬಟ್ಟೆ ಬದಲಾಯಿಸಿ ಎಂದೋ, ರಂಗದ ಹಿಂಭಾಗದಲ್ಲಿ ವಿಶ್ರಾಂತಿ ಪಡೆಯಿರಿ ಎಂದೋ ಹೇಳಿನೋಡಿ. ನಾಟಕ ರಂಗ ನಟರ ತಲೆ ತಿರುಗದಂತೆ ಮಾಡುತ್ತದೆ; ಕಾಲ್ಪನಿಕ ಥಳುಕುಬಳುಕಿಗಿಂತ ನಟನೆ ಮುಖ್ಯ ಎಂದು ಹೇಳಿಕೊಡುತ್ತದೆ" ಎಂದೂ ಹೇಳಿದ್ದಾರೆ. ಬದುಕೆಂಬ ಪಾಠಶಾಲೆಯಲ್ಲಿ ಈ ನಟಿ ಎಂತಹ ಜ್ಞಾನವನ್ನು, ಪ್ರತಿಭೆಯನ್ನು ಕಲಿತಿದ್ದಾರೆ ಅನ್ನಿಸುತ್ತದಲ್ಲವೆ.

ಇಂತಹ ಅದ್ಭುತ ನಟಿ ಕೂಡ ಕನ್ನಡದ 300 ಕ್ಕೂ ಹೆಚ್ಚು ಚಿತ್ರಗಳಲ್ಲಿ ಮೂರು ದಶಕಗಳ ಕಾಲ ನಟಿಸಿದ ನಂತರ ನಿರ್ಮಾಪಕ ಬಸಂತ್‌ಕುಮಾರ್ ಪಾಟೀಲ್, ನಿರ್ದೇಶಕ ಗಿರೀಶ್ ಕಾಸರವಳ್ಳಿ ಮತ್ತು ಲೇಖಕಿ ವೈದೇಹಿಯವರ ಪ್ರಯತ್ನವಾದ 'ಗುಲಾಬಿ ಟಾಕೀಸ್' ಎಂಬ ಚಿತ್ರಕ್ಕಾಗಿ ಕಾದಿದ್ದು ತನ್ನ ಪ್ರತಿಭೆಯನ್ನು ಪ್ರದರ್ಶಿಸುವಂತಾಗಿದ್ದು ಕನ್ನಡ ಚಿತ್ರರಂಗದ ಬಗ್ಗೆ ಏನನ್ನು ಹೇಳುತ್ತದೆ?

ಅಮೆರಿಕ, ಇಂಗ್ಲೆಂಡಿನ ಮಾತು ಬದಿಗಿರಲಿ, ಹಿಂದಿಯ ಬಾಲಿವುಡ್‌ನಲ್ಲಿ ಉಮಾಶ್ರೀಯವರಷ್ಟೇ ಪ್ರತಿಭಾವಂತೆಯಾದ ಶಬಾನಾ ಆಜ್ಮಿಯವರಿಗೆ ಈಗಾಗಲೇ ಹಲವಾರು ರಾಷ್ಟ್ರಪ್ರಶಸ್ತಿಗಳು ಮತ್ತು ಅಂತರರಾಷ್ಟ್ರೀಯ ಕೀರ್ತಿಗಳು ಸಿಕ್ಕಿವೆ. ಹಲವಾರು ಪ್ರತಿಷ್ಠಿತ ಚಿತ್ರೋತ್ಸವಗಳು ಶಬಾನಾ ಅವರು ನಟಿಸಿರುವ ಸಿನಿಮಾಗಳ ರೆಟ್ರಸ್ಪೆಕ್ಟಿವ್ ಪ್ರದರ್ಶನಗಳನ್ನು ಏರ್ಪಡಿಸಿವೆ. ಶಬಾನಾ ಅವರಿಗಿಂತ ಪ್ರತಿಭೆಯಲ್ಲಿ ಕಡಿಮೆ ಇಲ್ಲದ ನಮ್ಮ ಉಮಾಶ್ರೀ ನಟಿಸಿರುವ ಸಿನಿಮಾಗಳ ರೆಟ್ರಸ್ಪೆಕ್ಟಿವ್ ಪ್ರದರ್ಶನವನ್ನು ಏರ್ಪಡಿಸಲು ಸಾಧ್ಯವೇ?

ಕನ್ನಡ ಚಿತ್ರರಂಗ ಈಗಲಾದರೂ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ಅದೆಲ್ಲ ಬದಿಗಿರಲಿ, ಗೆಳೆಯ ಪ್ರಕಾಶ್ ರೈಗೂ, ನಾನು ಅಭಿಮಾನಿಸುವ ಉಮಾಶ್ರೀ ಅವರಿಗೂ ತುಂಬು ಹೃದಯದ ಅಭಿನಂದನೆಗಳು.

ಕಾಶ್ಮೀರವಾಗುತ್ತಿರುವ ಗುಜರಾತ್



ಇಶ್ರತ್ ಕುಟುಂಬ...... ಒಳಚಿತ್ರದಲ್ಲಿ ಇಶ್ರತ್

ಪ್ರಶಸ್ತಿಗಾಗಿ, ಪ್ರಮೋಶನ್‌ಗಾಗಿ ಪೊಲೀಸ್ ಅಧಿಕಾರಿಗಳು ಎಂಥ ಹೀನ ಕೃತ್ಯಕ್ಕೂ ಇಳಿಯಬಲ್ಲರು ಎಂದು ಗುಜರಾತ್ ಪೊಲೀಸರು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ. ಅಮಾಯಕರನ್ನು ಹಿಡಿದು ತಂದು, ಅವರಿಗೆ ಭಯೋತ್ಪಾದಕರು ಎಂಬ ಹಣೆಪಟ್ಟಿ ಕಟ್ಟಿ, ನಂತರ ಪಾಯಿಂಟ್ ಬ್ಲಾಂಕ್ ರೇಂಜಿನಲ್ಲಿ ಕೊಂದು ಹಾಕಿ, ಅದಕ್ಕೆ 'ಎನ್‌ಕೌಂಟರ್' ಎಂದು ನಾಮಕರಣ ಮಾಡಿ ತಮ್ಮ ಪೌರುಷವನ್ನು ಮೆರೆದಿರುವುದನ್ನು ನ್ಯಾಯಾಂಗ ತನಿಖೆಯ ವರದಿ ಬಹಿರಂಗಗೊಳಿಸಿದೆ. ಈ ಮೂಲಕ ಗುಜರಾತ್ ಪೊಲೀಸರ ಅಸಲೀ ರಾಕ್ಷಸೀ ಮುಖವನ್ನು ಹೊರಜಗತ್ತಿಗೆ ತೋರ್ಪಡಿಸಿದೆ.


2004ರ ಜೂನ್ ತಿಂಗಳಲ್ಲಿ ಮುಂಬೈ ನಿವಾಸಿಯಾಗಿದ್ದ ಇಶ್ರತ್ ಜಹಾನ್ ಎಂಬ ಹತ್ತೊಂಭತ್ತು ವರ್ಷದ ವಿದ್ಯಾರ್ಥಿನಿಯನ್ನು ಆಕೆಯ ಮೂವರು ಸ್ನೇಹಿತರೊಂದಿಗೆ ಅಹ್ಮದಾಬಾದ್‌ನ ಹೊರವಲಯದಲ್ಲಿ ಗುಜರಾತ್ ಪೊಲೀಸರು ಕೊಂದು ಹಾಕಿದರು. ನಂತರ ಈ ನಾಲ್ವರು ಲಷ್ಕರ್-ಇ-ತೊಯ್ಬಾ ಭಯೋತ್ಪಾದಕ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದರೆಂದೂ, ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಕೊಲ್ಲುವುದಕ್ಕಾಗಿ ಅಹ್ಮದಾಬಾದ್‌ಗೆ ಬಂದಿದ್ದರೆಂದೂ, ಅವರ ಈ ಜಾಲವನ್ನು ಭೇದಿಸಿ ಬಂಧಿಸಲು ಹೋದಾಗ ಪೊಲೀಸರ ಮೇಲೆಯೇ ದಾಳಿ ಮಾಡಿದರೆಂದೂ, ಅದಕ್ಕೆ ಪ್ರತಿಯಾಗಿ ಪೊಲೀಸರು ನಡೆಸಿದ ದಾಳಿಯಲ್ಲಿ ಎಲ್ಲಾ ನಾಲ್ವರು ಕೊಲ್ಲಲ್ಪಟ್ಟರೆಂದೂ ಹಸಿಕತೆಗಳನ್ನು ಹರಿಬಿಟ್ಟರು. ತನ್ನನ್ನು ಭಯೋತ್ಪಾದಕರ ದಾಳಿಯಿಂದ ರಕ್ಷಿಸಿದರೆಂದು ಈ ಪೊಲೀಸರನ್ನು ಮೋದಿ ಕೂಡ ಹಾಡಿ ಹೊಗಳಿದರು. ಭಯೋತ್ಪಾದಕರ ಜಾಲವನ್ನು ಭೇದಿಸಿ ಅವರ ದುಷ್ಕೃತ್ಯ ನಡೆಯದಂತೆ ತಡೆದೆವೆಂದು ಇಡೀ ಗುಜರಾತ್ ಪೊಲೀಸ್ ಇಲಾಖೆ ತನ್ನ ಬೆನ್ನನ್ನು ತಾನೇ ತಟ್ಟಿಕೊಂಡಿತು.

ಆದರೆ, ಅಸಲೀಯತ್ತು ಮಾತ್ರ ಬೇರೆಯೇ ಇತ್ತು. ಮೇಲ್ನೋಟಕ್ಕೆ ಕಾಣುವಂತೆ ಒಟ್ಟಾರೆ ಈ ಪ್ರಕರಣದಲ್ಲಿ ಏನೋ ಗೋಲ್‌ಮಾಲ್ ನಡೆದಿದೆಯೆಂದು ರಾಜ್ಯಾದ್ಯಂತ ಭಾರಿ ಪ್ರತಿರೋಧವೆದ್ದಿತು. ಈ ಹಿನ್ನೆಲೆಯಲ್ಲಿ ಗುಜರಾತ್ ಹೈಕೋರ್ಟು ನ್ಯಾಯಾಂಗ ತನಿಖೆಗೆ ಆದೇಶಿಸಿತು. ಎಸ್.ಪಿ.ತಮಾಂಗ್ ಎಂಬುವವರ ನೇತೃತ್ವದಲ್ಲಿ ನಡೆದ ಈ ತನಿಖೆಯ ವರದಿಯೀಗ ಹೊರಬಿದ್ದಿದೆ. 243 ಪುಟಗಳ ಈ ವರದಿಯಲ್ಲಿ ಪ್ರಶಸ್ತಿಗಾಗಿ, ಪ್ರಮೋಶನ್‌ಗಾಗಿ ಹಾಗೂ ಮುಖ್ಯಮಂತ್ರಿಯಿಂದ ಶಹಬ್ಬಾಸ್‌ಗಿರಿ ಪಡೆಯುವುದಕ್ಕಾಗಿ ಇಶ್ರತ್ ಜಹಾನ್ ಮತ್ತು ಇನ್ನಿತರ ಮೂವರನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಲಾಯಿತು ಎಂದು ವಿವರಿಸಲಾಗಿದೆ. ಈ ವರದಿಯ ಪ್ರಕಾರ 2004ರ ಜೂನ್ 12ರಂದು ಮುಂಬೈನಿಂದ ಈ ನಾಲ್ವರನ್ನು ಅಪಹರಿಸಿಕೊಂಡು ಅಹ್ಮದಾಬಾದಿಗೆ ಕರೆತಂದು, ಜೂನ್ 14ರಂದು ಪೊಲೀಸ್ ಕಸ್ಟಡಿಯಲ್ಲೇ ಪಾಯಿಂಟ್ ಬ್ಲಾಂಕ್ ರೇಂಜಿನಲ್ಲಿ ಕೊಂದು ಹಾಕಿ ನಂತರ ಅವರ ಶವಗಳನ್ನು ಅಹ್ಮದಾಬಾದ್‌ನ ಹೊರವಲಯದಲ್ಲಿ ಬಿಸಾಡಿ ಅದಕ್ಕೆ 'ಎನ್‌ಕೌಂಟರ್' ಹಣೆಪಟ್ಟಿ ಕಟ್ಟಲಾಯಿತು. "ತಮ್ಮ ಎನ್‌ಕೌಂಟರ್ ಕಟ್ಟು ಕತೆಯನ್ನು ಜನ ನಂಬುವಂತೆ ಮಾಡುವುದಕ್ಕಾಗಿ ಈ ಶವಗಳಿಗೂ ಗುಂಡು ಹಾರಿಸಲಾಯಿತು, ಕೊಲ್ಲಲ್ಪಟ್ಟವರು ಮುಂಬೈನಿಂದ ಅಹ್ಮದಾಬಾದಿಗೆ ಕಾರಿನಲ್ಲಿ ಸ್ಫೋಟಕಗಳನ್ನು ತುಂಬಿಕೊಂಡು ಹೋಗುತ್ತಿದ್ದರು ಎಂದು ಪೊಲೀಸರು ಹೇಳಿರುವುದೆಲ್ಲಾ ಸುಳ್ಳು, ಆ ಸ್ಫೋಟಕಗಳೆಲ್ಲವನ್ನೂ ಪೊಲೀಸರೇ ಇಟ್ಟಿದ್ದರು. ಕೊಲ್ಲಲ್ಪಟ್ಟವರಿಗೂ ಪಾಕಿಸ್ತಾನಿ ಮೂಲದ ಲಷ್ಕರ್-ಇ-ತೊಯ್ಬಾ ಭಯೋತ್ಪಾದಕ ಸಂಘಟನೆಗೂ ಯಾವುದೇ ಸಂಪರ್ಕವಿರಲಿಲ್ಲ" ಎಂದು ತನಿಖಾ ವರದಿಯಲ್ಲಿ ತಿಳಿಸಲಾಗಿದೆ.




ಇಶ್ರತ್ ಜಹಾನ್

ಆಗ ಅಹ್ಮದಾಬಾದ್ ಪೊಲೀಸ್ ಕಮೀಷನರ್ ಆಗಿದ್ದ ಕೆ.ಆರ್.ಕೌಶಿಕ್, ಕ್ರೈಮ್ ಬ್ರಾಂಚ್‌ನ ಮುಖ್ಯಸ್ಥರಾಗಿದ್ದ ಪಿ.ಪಿ.ಪಾಂಡೆ, ಎನ್‌ಕೌಂಟರ್ ಸ್ಪೆಷಲಿಸ್ಟ್ ತರುಣ್ ಬಾರೋಟ್, ಎನ್.ಕೆ.ಅಮೀನ್, ವಂಜಾರಾ ಮುಂತಾದ ಪೊಲೀಸ್ ಅಧಿಕಾರಿಗಳೇ ಈ ಕೊಲೆಗಳಿಗೆ ನೇರ ಹೊಣೆಗಾರರು ಎಂದು ವರದಿಯಲ್ಲಿ ತಿಳಿಸಲಾಗಿದೆ.



ವಂಜಾರಾ

ಈ ಪೊಲೀಸ್ ಅಧಿಕಾರಿಗಳಲ್ಲಿ ಎನ್.ಕೆ.ಅಮೀನ್ ಮತ್ತು ವಂಜಾರಾ ಎಂಬಿಬ್ಬರು ಉನ್ನತ ಅಧಿಕಾರಿಗಳು 2007ರಲ್ಲಿ ಇದೇ ರೀತಿಯಲ್ಲಿ ಪ್ರಶಸ್ತಿ ಮತ್ತು ಪ್ರಮೋಶನ್‌ಗಾಗಿ ಸೊಹ್ರಾಬುದ್ದೀನ್ ಎಂಬ ಅಮಾಯಕನನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿದ್ದರು. ಇದು ತನಿಖೆಯಲ್ಲಿ ದೃಢಪಟ್ಟಿದ್ದರಿಂದ ಸುಪ್ರೀಂ ಕೋರ್ಟಿನಲ್ಲಿ ಖುದ್ದು ಗುಜರಾತ್ ಸರ್ಕಾರವೇ ತನ್ನ ತಪ್ಪು ಒಪ್ಪಿಕೊಂಡಿತ್ತು, ಪರಿಣಾಮವಾಗಿ ಈಗ ಇವರಿಬ್ಬರೂ ಜೈಲಿನಲ್ಲಿದ್ದಾರೆ. ಈಗ 2004ರಲ್ಲಿ ನಡೆದ ಇಶ್ರತ್ ಎನ್‌ಕೌಂಟರ್ ಕೂಡ ಪ್ರಶಸ್ತಿ ಮತ್ತು ಪ್ರಮೋಶನ್‌ಗಾಗಿ ನಡೆದ ನಕಲಿ 'ಎನ್‌ಕೌಂಟರ್' ಎಂಬುದು ಸಾಬೀತಾಗುವ ಮೂಲಕ ಶಾಂತಿ, ನೆಮ್ಮದಿ, ಪ್ರಜಾತಂತ್ರವನ್ನು ಬಯಸುವ ಪ್ರತಿಯೊಬ್ಬ ನಾಗರಿಕನನ್ನು ದಂಗು ಬಡಿಸಿದೆ. ಗುಜರಾತ್ ಯಾವ ದಿಕ್ಕಿನತ್ತ ಹೋಗುತ್ತಿದೆ ಎಂಬ ಆತಂಕ ಸೃಷ್ಟಿಸಿದೆ. ಇವು ಬೆಳಕಿಗೆ ಬಂದ ಪ್ರಕರಣಗಳಷ್ಟೆ. ಕೆದಕುತ್ತಾ ಹೋದರೆ ಇನ್ನೆಷ್ಟು ಅಮಾಯಕ ಬಲಿಪಶುಗಳು ಗೋರಿಯಿಂದೆದ್ದು ಬರುತ್ತಾರೋ ಗೊತ್ತಿಲ್ಲ.



ಮೋದಿ

ಪ್ರಶಸ್ತಿ ಮತ್ತು ಪ್ರಮೋಶನ್‌ಗಾಗಿ ಅಮಾಯಕರನ್ನು ನಕಲಿ ಎನ್‌ಕೌಂಟರ್‌ಗಳಲ್ಲಿ ಕೊಂದು ತಮ್ಮ ಪೌರುಷವನ್ನು ಮೆರೆಯುವ ಸಂಸ್ಕೃತಿ ಕಾಶ್ಮೀರ ಮತ್ತು ನಕ್ಸಲ್ ಚಳವಳಿ ಬಲವಾಗಿರುವ ರಾಜ್ಯಗಳಿಗೆ ಮಾತ್ರ ಸೀಮಿತವಾಗಿತ್ತು, ಈಗ ಅದು ಗುಜರಾತ್‌ನಂತಹ ರಾಜ್ಯಕ್ಕೂ ವಿಸ್ತರಣೆಯಾಗಿದೆ. ●

ಸುತ್ತ ಮುತ್ತ



▸▸ಕುಮಾರ್ ಬುರಡಿಕಟ್ಟಿ

ಕತ್ತಲಿನಿಂದ ಕಗ್ಗತ್ತಲಿಗೆ ಶ್ರೀಲಂಕಾ




ತಿಸ್ಸಾನಾಯಗಂ

ಶ್ರೀಲಂಕಾ ಎಂಬ ಪುಟ್ಟ ದ್ವೀಪರಾಷ್ಟ್ರ ಕತ್ತಲಿನಿಂದ ಕಗ್ಗತ್ತಲಿನೆಡೆಗೆ ಸಾಗುತ್ತಿದೆ. ಸಿಂಹಳೀಯ ದುರಭಿಮಾನಿಗಳ ಹಿಡಿತದಲ್ಲಿರುವ ಈ ಸರ್ಕಾರ ಕಳೆದ ಅರವತ್ತು ವರ್ಷಗಳಲ್ಲಿ ತಮಿಳರ ಮಾರಣ ಹೋಮ ನಡೆಸಿದ್ದು, ಎಲ್‌ಟಿಟಿಈಯನ್ನು ಸದೆಬಡಿಯುವ ಉತ್ಸಾಹದಲ್ಲಿ ಅಮಾಯಕ ಜನರ ನರಮೇಧ ನಡೆಸಿದ್ದು ಈಗ ಜಗತ್ತಿಗೆ ಗೊತ್ತಿರುವ ಇತಿಹಾಸ. ಆದರೆ, ಎಲ್‌ಟಿಟಿಈ ಸಂಪೂರ್ಣವಾಗಿ ಸರ್ವನಾಶವಾದ ಮೇಲೂ ಅಧ್ಯಕ್ಷ ಮಹಿಂದ ರಾಜಪಕ್ಸೆಯ ರಕ್ತದಾಹ ಇನ್ನೂ ಇಂಗಿದಂತ[illegible] ಎಲ್‌ಟಿಟಿಈಯೊಂದಿಗಿನ ಅಂತಿಮ ಯುದ್ಧದಲ್ಲಿ ಮನೆಮಠ ಕಳೆದುಕೊಂ[illegible] ನಿರಾಶ್ರಿತರಾದ ಲಕ್ಷಾಂತರ ತಮಿಳರು ಹಂದಿಗೂಡುಗಳಂಥ ನಿರಾಶ್ರಿ[illegible] ಶಿಬಿರದಲ್ಲಿ ನರಕಮಯಜೀವನ ನಡೆಸುತ್ತಿದ್ದಾರೆ. ಎಲ್‌ಟಿಟಿಈಯ ಬೆಂಬಲಿಗ[illegible] ಎಂದು ಸಂಶಯ ಬಂದವರನ್ನೆಲ್ಲಾ ಲಂಕಾ ಸೈನಿಕರು ಬಟ್ಟೆ ಬಿಚ್ಚಿ ಪಾಯಿಂ[illegible] ಬ್ಲಾಂಕ್ ರೇಂಜಿನಲ್ಲಿ ಕೊಂದು ಹಾಕುತ್ತಿದ್ದಾರೆ. ಇದು ಲಂಕಾ ಸರ್ಕಾ[illegible] ಒಂದು ಮುಖ.



ಲಸಂತ

ಅದೇ ವೇಳೆಯಲ್ಲಿ ತಮಿಳರ ಪರವಾಗಿಯಾಗ[illegible] ಅಥವ ಸಿಂಹಳೀಯ ಸರ್ಕಾರದ ವಿರುದ್ಧವಾಗ[illegible] ದನಿಯೆತ್ತುವ ಯಾರನ್ನೂ ಕೂಡ ಲಂಕಾ ಸರ್ಕಾ[illegible] ಬಿಡುತ್ತಿಲ್ಲ. ಆತ ತಮಿಳನಾಗಿರಲಿ ಅಥವ ಸಿಂಹಳೀ[illegible]ನಾಗಿರಲಿ ತನ್ನ ವಿರುದ್ಧ ಅಪಸ್ವರವೆತ್ತಿದವರನ್ನು ಹಿಂ[illegible] ಮುಂದು ನೋಡದೆ ಹೊಸಕಿ ಹಾಕುತ್ತಿದೆ. ಇ[illegible] ವರ್ಷದ ಜನವರಿಯಲ್ಲಿ ಲಸಂತ ವಿಕ್ರಮತುಂಗೆ ಎಂ[illegible] ಜಾತ್ಯತೀತವಾದಿ ಪತ್ರಕರ್ತರನ್ನು ಅಧ್ಯಕ್ಷ ಮಹಿಂ[illegible] ರಾಜಪಕ್ಸೆಯ ಗೂಂಡಾಗಳು ಕೊಂದು ಹಾಕಿದರು. ಲಸಂತ ತಮಿಳರಾಗಿರಲಿ[illegible] ಸಿಂಹಳೀಯರಾಗಿದ್ದರು. ಆದರೆ ತಮಿಳರ ವಿರುದ್ಧ ಲಂಕಾ ಸರ್ಕಾರ ನಡೆಸುತ್ತಿರು[illegible] ದೌರ್ಜನ್ಯಗಳನ್ನು ತಮ್ಮ ಪತ್ರಿಕೆಯಲ್ಲಿ ಯಾವುದೇ ಮುಚ್ಚುಮರೆಯಿಲ್ಲ[illegible] ಬರೆಯುತ್ತಿದ್ದರು. ಅಧ್ಯಕ್ಷ ಮಹಿಂದ ರಾಜಪಕ್ಸೆ ತನ್ನ ಬಾಲ್ಯದ ಸ್ನೇಹಿತನಾಗಿದ್ದ[illegible] ಆತನ ರಕ್ತಪಿಪಾಸುತನವನ್ನು ಬಯಲಿಗೆಳೆಯುತ್ತಿದ್ದರು. ತಮ್ಮ ಸಾವು ಸನ್ನಿಹಿತವಾಗಿದೆಯೆಂದು ಅವರಿಗೆ ಗೊತ್ತಾಗಿತ್ತು, ಆದ್ದರಿಂದಲೇ ತಮ್ಮ ಮರಣದ ತರುವಾಯ ಪ್ರಕಟವಾಗಬೇಕಾದ ಮರಣೋತ್ತರ ಸಂಪಾದಕೀಯವನ್ನು ಮೊದಲೇ ಬರೆದಿಟ್ಟಿದ್ದರು. ನಿರೀಕ್ಷೆಯಂತೆಯೇ ರಾಜಪಕ್ಸೆಯ ಗೂಂಡಾಗಳೇ ಅವರನ್ನು ಜನವರಿಯಲ್ಲಿ ಕೊಂದು ಹಾಕಿದರು.



ರಾಜಪಕ್ಸೆ

ಇದಕ್ಕೂ ಮೊದಲು 2008ರ ಮೇನಲ್ಲಿ ಪಿ.ದೇವ ಕುಮಾರನ್ ಅವರನ್ನು, 2006ರ ಏಪ್ರಿಲ್‌ನಲ್ಲಿ ಸಂಪತ್ ದಿ'ಸಿಲ್ವ ಅವರನ[illegible] 2005ರಲ್ಲಿ ತಾರಕಿ ಶಿವರಾಮ್‌ರನ್ನು ಇದ[illegible] ರೀತಿಯಲ್ಲಿ ಕೊಂದು ಹಾಕಲಾಗಿತ್ತು. 2009[illegible]ಲ್ಲಂತೂ ಲಸಂತ ಅವರನ್ನೂ ಒಳಗೊಂಡಂ[illegible] ಹತ್ತಾರು ಪ್ರಜಾತಂತ್ರ ಪರವಾಗಿ ದನಿಯೆತ್ತು[illegible] ಪತ್ರಕರ್ತರು ರಾಜಪಕ್ಸೆಯ ರಕ್ತದಾಹಕ್ಕೆ ಬ[illegible]ಯಾದರು.

ಪ್ರಜಾತಂತ್ರವಾದಿ ಪತ್ರಕರ್ತರ ಮೇಲಿ[illegible] ಈ ದಾಳಿಯ ಮುಂದುವರೆದ ಭಾಗವಾ[illegible] ಮೊನ್ನೆ ಮೊನ್ನೆ ಶ್ರೀಲಂಕಾದ ನ್ಯಾಯಾಲಯವೊಂದು ಜೆ.ಎಸ್.ತಿಸ್ಸಾನಾಯಗ[illegible] ಎಂಬ ಪತ್ರಕರ್ತನಿಗೆ 20 ವರ್ಷಗಳ ಸೆರೆವಾಸ ಶಿಕ್ಷೆ ವಿಧಿಸಿದೆ. ಅದ[illegible] ಕೋರ್ಟು ಕೊಟ್ಟ ಕಾರಣ ತಿಸ್ಸಾ ಅವರು ಕೆಲಸ ಮಾಡುತ್ತಿದ್ದ ಪತ್ರಿಕೆಯನ[illegible] ಎಲ್‌ಟಿಟಿಈ ಸ್ಥಾಪಿಸಿತ್ತು ಎಂಬುದು. ತಿಸ್ಸಾ ಅವರು *North Easter[illegible] Herald* ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ತಮಿಳು ಜನಸಮುದಾಯ[illegible] ಪ್ರಧಾನವಾಗಿರುವ ಲಂಕಾ ದ್ವೀಪದ ಉತ್ತರ ಮತ್ತು ಪೂರ್ವ ಭಾಗಗಳ[illegible] ಸರ್ಕಾರ ತಮಿಳರ ಮೇಲೆ ನಡೆಸುತ್ತಿರುವ ದೌರ್ಜನ್ಯಗಳ ಬಗ್ಗೆ ರಾಜಧಾ[illegible] ಕೊಲಂಬೊ ಮೂಲದ ಯಾವ ಪತ್ರಿಕೆಗಳೂ ಬರೆಯುತ್ತಿರಲಿಲ್ಲ. ಆ ಕೆಲಸವ[illegible] ತಿಸ್ಸಾ ಮಾಡುತ್ತಿದ್ದರು. ಅದೇ ವೇಳೆಯಲ್ಲಿ ಎಲ್‌ಟಿಟಿಈಯ ಬಗ್ಗೆ ವಿಮರ್ಶಿಸು[illegible] ಅದರ ಕಠೋರ ನಿಲುವುಗಳನ್ನು ಖಂಡತುಂಡವಾಗಿ ಖಂಡಿಸುತ್ತಿದ್ದರು. ಉತ್ತ[illegible] ಮತ್ತು ಪೂರ್ವ ಭಾಗಗಳಲ್ಲಿ ತಮಿಳರ ಜೊತೆಗೆ ಮುಸ್ಲಿಮರು ಹಾಗ[illegible] ಸಿಂಹಳೀಯರೂ ಇದ್ದು ಅವರ ದಾರುಣ ಪರಿಸ್ಥಿತಿಯ ಬಗ್ಗೆಯೂ ಗಮ[illegible] ಸೆಳೆಯುತ್ತಿದ್ದರು. ಮೊದಲೇ ಫ್ಯಾಸಿಸ್ಟ್ ಧೋರಣೆಗೆ ಕುಖ್ಯಾತಿಯಾಗಿರುವ ಅಧ[illegible] ಮಹಿಂದ ರಾಜಪಕ್ಸೆ ಅಂತಿಮವಾಗಿ ತಿಸ್ಸಾ ಅವರನ್ನು ಇಪ್ಪತ್ತು ವರ್ಷಗ[illegible] ಕಾಲ ಜೈಲಿಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಮಹಿಂದ ರಾಜಪಕ್ಸೆ ತನ್ನ ವಿರುದ್ಧ ದನಿಯೆತ್ತುವ ಪತ್ರಕರ್ತರನ್ನು ಹೇ[illegible] ಹೊಸಕಿ ಹಾಕುತ್ತಿದ್ದಾರೆಂಬುದಕ್ಕೆ ಇವು ಒಂದೆರಡು ಉದಾಹರಣೆಗಳಷ್ಟೆ. ಈ[illegible] ಭೀಭತ್ಸ ವಾತಾವರಣದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಸುಮಾರು 40 ಪತ್ರಕರ್ತ[illegible] ಶ್ರೀಲಂಕಾದಿಂದ ಬೇರೆ ದೇಶಗಳಿಗೆ ಓಡಿಹೋಗಿದ್ದಾರೆ. ವಾಸ್ತವದಲ್ಲಿ ತಿಸ[illegible] ಅವರಿಗೆ ಕೊಟ್ಟ ಶಿಕ್ಷೆ ಆ ಪತ್ರಕರ್ತರು ಮತ್ತೆ ಶ್ರೀಲಂಕಾಕ್ಕೆ ಮರಳಿದರೆ ಅವ[illegible] ಗತಿ ಏನಾಗುತ್ತದೆಂಬುದನ್ನು ಸೂಚ್ಯವಾಗಿ ಹೇಳುತ್ತದೆ. ಶ್ರೀಲಂಕಾ ಸರ್ಕಾ[illegible] ನ್ಯಾಯಾಂಗ ವ್ಯವಸ್ಥೆ ಮತ್ತಷ್ಟು ಫ್ಯಾಸಿಸ್ಟ್ ಆಗುತ್ತಾ ಹೇಗೆ ಕತ್ತಲಿನಿಂದ ಕಗ್ಗತ್ತಲಿನೆಡ[illegible] ಮುನ್ನುಗ್ಗುತ್ತಿದೆ ಎಂಬುದನ್ನು ತೋರಿಸುತ್ತದೆ. ●



ಮಧ್ಯಪ್ರದೇಶದಲ್ಲಿ ಮತ್ತೆ ಪಾದಪೂಜೆ!


ಮಧ್ಯಪ್ರದೇಶದ ಬಿಜೆಪಿ ಸರ್ಕಾರ ಈ ಬಾರಿ ಮತ್ತೊಂದು ದುಸ್ಸಾಹಸ ಮಾಡಿದೆ. ಶಿಕ್ಷಕರ ದಿನಾಚರಣೆಯಂದು ರಾಜ್ಯಾದ್ಯಂತ ಶಾಲೆಗಳಲ್ಲಿ ಮಕ್ಕಳು ತಮ್ಮ ಗುರುಗಳ ಪಾದಪೂಜೆ ಮಾಡುವ ಮೂಲಕ ತಮ್ಮ ಗೌರವವನ್ನು ತೋರ್ಪಡಿಸಬೇಕೆಂದು ಆದೇಶ ಹೊರಡಿಸಿ ಬಲವಂತವಾಗಿ ಮಕ್ಕಳಿಂದ ಶಿಕ್ಷಕರ ಪಾದ ತೊಳೆಸಿದೆ. ಈ ಹಿಂದೆ 2007ರಲ್ಲಿ ಅಂದಿನ ಶಿಕ್ಷಣ ಸಚಿವರಾಗಿದ್ದ ಲಕ್ಷ್ಮಣ್ ಸಿಂಗ್ ಗೌರ್ ಇದೇ ರೀತಿಯ ಆದೇಶ ಹೊರಡಿಸಿ ರಾಜ್ಯದ ಒಳಗೂ, ಹೊರಗೂ ಖಂಡನೆಗೆ ಗುರಿಯಾಗಿದ್ದ. ಅದಾದಮೇಲೆ ಒಂದು ವರ್ಷ ಪಾದಪೂಜೆಯ ಈ ಸನಾತನ ಸಂಸ್ಕೃತಿ ಮಧ್ಯಪ್ರದೇಶದ ಶಾಲೆಗಳಿಂದ ಕಣ್ಮರೆಯಾಗಿತ್ತು. ಈಗ ಶಿಕ್ಷಣ ಮಂತ್ರಿಯಾಗಿರುವ ಅರ್ಚನಾ ಚಿಟ್ನಿಸ್ ಮತ್ತೆ ಅಂತಹುದೇ ಆದೇಶ ಹೊರಡಿಸಿ ವಿವಾದ ಸೃಷ್ಟಿಸಿದ್ದಾಳೆ.

ಬಿಜೆಪಿಗಳಿಗೆ ಅಧಿಕಾರ ಕೊಟ್ಟರೆ ಏನೆಲ್ಲಾ ಅಧ್ವಾನ ಮಾಡಿ ಹಾಕುತ್ತಾರೆ ಎಂಬುದಕ್ಕೆ ಇದೊಂದು ನಿದರ್ಶನವಷ್ಟೆ. ಮಕ್ಕಳು ಗುರುಹಿರಿಯರಿಗೆ ಗೌರವ ಕೊಡಬೇಕೆಂಬುದೇನೋ ಸರಿ. ಆದರೆ ಪಾದಪೂಜೆಯಂತ ಪುರಾತನ ಫ್ಯೂಡಲ್ ಸಂಸ್ಕೃತಿಯನ್ನು ಪಾಲಿಸುವ ಮೂಲಕ ಮಾತ್ರವೇ ಅದು ಸಾಧ್ಯ ಎಂಬುದು ತರವಲ್ಲ. ನಮ್ಮ ದೇಶವೀಗ ಗುರುಕುಲ ವ್ಯವಸ್ಥೆಯಲ್ಲಿಲ್ಲ. ಆ ಯುಗವನ್ನು ದಾಟಿ ಹಲವಾರು ಶತಮಾನಗಳು ಗತಿಸಿಹೋಗಿವೆ. ನಾವೀಗ ಆಧುನಿಕ ಕಾಲಘಟ್ಟದಲ್ಲಿದ್ದೇವೆ. ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಮೌಲ್ಯಾದರ್ಶಗಳೂ ಬದಲಾಗಿವೆ. ಸಂಸ್ಕೃತಿಯೂ ಬದಲಾಗಿದೆ. ಅದಕ್ಕೆ ತಕ್ಕಂತೆ ತಾವೂ ಬದಲಾಗುವುದನ್ನು ಬಿಟ್ಟು ಪುರಾತನ ಗೊಡ್ಡು ಸಂಸ್ಕೃತಿಗೆ ಬಿಜೆಪಿಗಳು, ಸಂಘಪರಿವಾರಿಗಳು ಅಂಟಿಕೊಂಡಿವೆ. ತಮ್ಮಂತೆ ಇತರರೂ ಬದುಕಬೇಕೆಂದು ಒತ್ತಡ ಹೇರುತ್ತಿವೆ.

ಶಿಕ್ಷಕರೇ ಮಹಿಳಾ ವಿದ್ಯಾರ್ಥಿಗಳ ಮೇಲೆ ಲೈಂಗಿಕ ದೌರ್ಜನ್ಯವೆಸಗುತ್ತಿರುವುದನ್ನು, ದನಕ್ಕೆ ಬಡಿಯುವಂತೆ ಬಡಿದು ಮಕ್ಕಳು ಶಾಲೆ ಬಿಡುವುದಕ್ಕೆ ಕಾರಣವಾಗುತ್ತಿರುವುದನ್ನು, ಮದ್ಯಪಾನ ಮಾಡಿ ಶಾಲೆಗೆ ಬರುತ್ತಿರುವುದನ್ನು ನೋಡುತ್ತಿದ್ದೇವೆ. ಅಂತಹ ಶಿಕ್ಷಕರ ಪಾದ ತೊಳೆದು ನಿಮ್ಮ ಗೌರವ ತೋರ್ಪಡಿಸಿ ಎಂದರೆ ಮಕ್ಕಳಿಗೆ ಏನನ್ನಿಸುತ್ತದೆ? ಇದರರ್ಥ ಎಲ್ಲಾ ಶಿಕ್ಷಕರೂ ಕೆಟ್ಟವರೆಂದಾಗಲೀ, ಗುರು ಹಿರಿಯರಿಗೆ ಮಕ್ಕಳು ಗೌರವ ಕೊಡಬಾರದೆಂದಾಗಲೀ ಅರ್ಥವಲ್ಲ. ಆದರೆ ಅದನ್ನು ಇಂಥ ಗೊಡ್ಡು ಸಂಪ್ರದಾಯಗಳಿಂದ ಸಾಧಿಸುವ ಅಗತ್ಯವಿಲ್ಲ. ಮೇಷ್ಟ್ರು ಎಂದರೆ ಭಯಪಡುವ ಅಪ್ರೆಸ್ಸಿವ್ ವಾತಾವರಣ ಬದಲಾಗಬೇಕು. ಶಾಲೆಯಲ್ಲಿ ಗುರುಗಳು ಮತ್ತು ಮಕ್ಕಳ ನಡುವೆ ಅನ್ಯೋನ್ಯ ಬಾಂಧವ್ಯವೇರ್ಪಡುವಂಥ ವಾತಾವರಣ ಸೃಷ್ಟಿಯಾಗಬೇಕು. ಆಗ ತನ್ನಿಂದ ತಾನೆ ಗುರುಗಳು ಮಕ್ಕಳಿಗೂ, ಮಕ್ಕಳು ಗುರುಗಳಿಗೂ ಗೌರವ ಕೊಡುತ್ತಾರೆ. ಬಿಜೆಪಿಗಳಿಗಾಗಲೀ, ಸಂಘಪರಿವಾರಿಗಳಿಗಾಗಲೀ ಇದು ಅರ್ಥವೂ ಆಗುವುದಿಲ್ಲ. ಅದನ್ನವರು ಮಾಡುವುದೂ ಇಲ್ಲ. ಪ್ರಜ್ಞಾವಂತರು ಅದನ್ನು ಪ್ರತಿರೋಧಿಸುವ ಮೂಲಕವಷ್ಟೇ ಅವರನ್ನು ಸರಿದಾರಿಗೆ ತರಬೇಕು. ●



ಅರ್ಚನಾ ಚಿಟ್ನಿಸ್



ಅಶೋಕ್

ಆಟೋಗಳಿಗೆ ಬಣ್ಣ ಬದಲು

ಮಂತ್ರಿ ಅಶೋಕ್ ತಿಂದಿದ್ದೆಷ್ಟು?


ಅಡ್ಡಾದಿಡ್ಡಿಯಾಗಿ ಬೆಳೆದಿರುವ ಬೆಂಗಳೂರು ನಗರದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಬಿಟ್ಟರೆ ಸದ್ಯಕ್ಕೆ ಸಾರ್ವಜನಿಕರು ಪ್ರಯಾಣಕ್ಕಾಗಿ ಬಳಸುತ್ತಿರುವ ಎರಡನೇ ಅತಿದೊಡ್ಡ ವ್ಯವಸ್ಥೆ ಎಂದರೆ ಆಟೋರಿಕ್ಷಾಗಳು. ನಗರದಲ್ಲಿ ಏನಿಲ್ಲವೆಂದರೂ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚು ಆಟೋರಿಕ್ಷಾಗಳಿವೆ. ಸುಮಾರು ಐದು ಲಕ್ಷ ಜನರಿಗೆ ಈ ಆಟೋಗಳೇ ಜೀವನಾಧಾರವಾಗಿವೆ. ಇಲ್ಲಿಯತನಕ ಬಂದ ಎಲ್ಲಾ ಸರ್ಕಾರಗಳು ಆಟೋರಿಕ್ಷಾ ಮಾಲೀಕರು, ಚಾಲಕರು ಇಟ್ಟ ನ್ಯಾಯಬದ್ಧವಾದ ಯಾವುದೇ ಬೇಡಿಕೆಯನ್ನು ಈಡೇರಿಸುವ ಗೊಡವೆಗೆ ಹೋಗಿಲ್ಲ. ಬದಲಿಗೆ ಅವರಿಗೆ ಏನೆಲ್ಲಾ ಕಿರುಕುಳ ಕೊಡಬೇಕೋ ಅದನ್ನೆಲ್ಲಾ ಮಾಡಿಕೊಂಡು ಬಂದಿವೆ. ಈಗ ಅದರ ಮುಂದುವರೆದ ಭಾಗವಾಗಿ ಆಟೋಗಳ ಬಣ್ಣ ಬದಲಾಯಿಸುವ ಈ ಆದೇಶವನ್ನು ಬಿಜೆಪಿ ಸರ್ಕಾರ ಹೊರಡಿಸಿದೆ.



...ಸುಮ್ಮನೆ ಕುಳಿತುಕೊಳ್ಳಲಾಗದೆ ಕುರುಡ ...ಕೊಂಡು ಹುಣ್ಣು ಮಾಡಿಕೊಂಡ' ಎಂಬ ಗಾದೆ ...ಕೊಂದಿದೆ. ನಮ್ಮ ಹಿರಿಯರು ತಮ್ಮ ಜೀವನಾನುಭವ ...ಕಂಡುಕೊಂಡ ಈ ಮಾತು ಯಾರಿಗೆ ಎಷ್ಟು ...ತ್ತದೋ ಗೊತ್ತಿಲ್ಲ, ಆದರೆ ನಮ್ಮ ಸರ್ಕಾರಗಳಿಗಂತೂ ...ಚಿತವಾಗಿ ಹೇಳಿ ಮಾಡಿಸಿದ ಮಾತು. ತಮ್ಮ ...ಾರಾವಧಿಯಲ್ಲಿ ಏನೆಲ್ಲಾ ಮಾಡಿದೆವು ಎಂದು ಬೆನ್ನು ...ಕೊಳ್ಳುವುದಕ್ಕಾಗಿ ಸುಮ್ಮನೇ ಕೆಲಸಕ್ಕೆ ಬಾರದ ...ನಿಯಮಗಳನ್ನು ಜಾರಿಗೆ ತರುತ್ತಾರೆ. ಇನ್ನು ಕೆಲವು ...ಮಹೋದಯರು, ಸರ್ಕಾರದ ಉನ್ನತ ಅಧಿಕಾರಿಗಳು ...ವ ನಿಯಮ ಜಾರಿಗೆ ತಂದರೆ ಎಷ್ಟು ದುಡ್ಡು ...ತ್ತೆ ಎಂಬುದನ್ನು ಲೆಕ್ಕ ಹಾಕಿ ಹೊಸ ಆದೇಶ, ...ನಿಯಮಗಳನ್ನು ಜಾರಿ ಮಾಡುತ್ತಾರೆ. ಆದರಿಂದ ...ಮವಾಗಿ ಕತ್ತರಿ ಬೀಳುವುದು ಜನಸಾಮಾನ್ಯನ ಜೇಬಿಗೆ. ...ರಿ ತುಂಬುವುದು ಡೀಲ್‌ನಲ್ಲಿ ಭಾಗಿಯಾದ ಮಂತ್ರಿಗೆ, ...ಾರಿಗೆ ಹಾಗೂ ಡೀಲ್ ಕುದುರಿಸಿಕೊಂಡ ಕಂಪೆನಿಗೆ.

ರಾಜ್ಯ ಬಿಜೆಪಿ ಸರ್ಕಾರ ಇಂತಹುದೇ ಒಂದು ...ಬ್ಯಾಗ್ ಡೀಲ್ ಕುದುರಿಸಿಕೊಂಡಿದೆ. ಅದರ ಪರಿಣಾಮ ...ಯೇ ಬೆಂಗಳೂರಿನಲ್ಲಿರುವ ಎಲ್ಲಾ ನಾಲ್ಕು ಸ್ಟ್ರೋಕ್ ...ಪಿಜಿ ಆಟೋ ರಿಕ್ಷಾಗಳಿಗೆ ಬಣ್ಣ ಬದಲಿಸುವ ಆದೇಶ ...ರಬಿದ್ದಿದೆ. ಇದರಿಂದ ಬೆಂಗಳೂರಿನ ಆಟೋ ಚಾಲ ... ಮಾಲೀಕರು ತಮ್ಮ ಪ್ರತೀ ಆಟೋ ರಿಕ್ಷಾಗೆ ...000 ರೂಪಾಯಿ ಖರ್ಚು ಮಾಡಬೇಕಾದ ದುಸ್ಥಿತಿಗೆ ...ಾದ್ದಾರೆ.

ಅಡ್ಡಾದಿಡ್ಡಿಯಾಗಿ ಬೆಳೆದಿರುವ ಬೆಂಗಳೂರು ನಗರದಲ್ಲಿ ...ಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ...ರೆ ಸದ್ಯಕ್ಕೆ ಸಾರ್ವಜನಿಕರು ಪ್ರಯಾಣಕ್ಕಾಗಿ ಬಳಸುತ್ತಿರುವ ...ಡನೇ ಅತಿದೊಡ್ಡ ವ್ಯವಸ್ಥೆ ಎಂದರೆ ಆಟೋರಿಕ್ಷಾಗಳು. ...ದಲ್ಲಿ ಏನಿಲ್ಲವೆಂದರೂ ಸುಮಾರು ಒಂದು ಲಕ್ಷಕ್ಕಿಂತ ...ಆಟೋರಿಕ್ಷಾಗಳಿವೆ. ಸುಮಾರು ಐದು ಲಕ್ಷ ...ಾಗೆ ಈ ಆಟೋಗಳೇ ಜೀವನಾಧಾರವಾಗಿವೆ. ...ಯುತನಕ ಬಂದ ಎಲ್ಲಾ ಸರ್ಕಾರಗಳು ಆಟೋರಿಕ್ಷಾ ...ಲೀಕರು, ಚಾಲಕರು ಇಟ್ಟ ನ್ಯಾಯಬದ್ಧವಾದ ...ವುದೇ ಬೇಡಿಕೆಯನ್ನು ಈಡೇರಿಸುವ ...ವೆಗೆ ಹೋಗಿಲ್ಲ, ಬದಲಿಗೆ ಅವರಿಗೆ ...ಲ್ಲಾ ಕಿರುಕುಳ ಕೊಡಬೇಕೋ ಅದನ್ನೆಲ್ಲಾ ...ಡಿಕೊಂಡು ಬಂದಿವೆ. ಈಗ ಅದರ ...ಂದುವರೆದ ಭಾಗವಾಗಿ ಆಟೋಗಳ ಬಣ್ಣ ...ಲಾಯಿಸುವ ಈ ಆದೇಶವನ್ನು ಬಿಜೆಪಿ ...ರ ಹೊರಡಿಸಿದೆ. ಕಳೆದ ಆಗಸ್ಟ್ 24ರಂದು ...ಬಿದ್ದ ಈ ಆದೇಶದ ಪ್ರಕಾರ ನಾಲ್ಕು ...ಕ್ ಎಲ್‌ಪಿಜಿ ಆಟೋಗಳು ಈಗಿರುವ ...ಹಳದಿ ಬಣ್ಣಕ್ಕೆ ಬದಲಾಗಿ ಹಸಿರು-ಹಳದಿ ...ಬಳಿದು ಕೊಳ್ಳಬೇಕು.



ಶಂಕರ್‌ಲಿಂಗೇ...

...ನಗರದಲ್ಲಿರುವ ಒಟ್ಟು ಒಂದೂಕಾಲು ಲಕ್ಷ ...ಟೋಗಳ ಪೈಕಿ ಸುಮಾರು 40 ಸಾವಿರ ಆಟೋಗಳು ... ಸ್ಟ್ರೋಕ್ ಎಲ್‌ಪಿಜಿ ಆಟೋಗಳಾಗಿವೆ. ಉಳಿ...ಗಳು ಎರಡು ಸ್ಟ್ರೋಕ್ ಆಟೋಗಳಾಗಿವೆ. ಈಗ ...ಕಾಲು ಲಕ್ಷ ಆಟೋಗಳೆಲ್ಲವೂ ಈಗ ಹಳದಿ ...ವ ಮೇಲ್ಭಾವಣಿ ಹಾಗೂ ಕಪ್ಪು ಬಣ್ಣದ ಉಳಿದ ...ಾಗವನ್ನು ಹೊಂದಿವೆ. ನಾಲ್ಕು ಸ್ಟ್ರೋಕ್ ಎಲ್‌ಪಿಜಿ ...ಟೋಗಳು ಎರಡು ಸ್ಟ್ರೋಕ್ ಆಟೋಗಳಿಗಿಂತ ಕಡಿಮೆ ...ಷ್ಟು ಕಡಿಮೆ ಹೊಗೆಯನ್ನು ಹೊರಬಿಡುತ್ತವಾದ್ದರಿಂದ ...ಗಳನ್ನು ಪರಿಸರ ಸ್ನೇಹಿ ಆಟೋಗಳೆಂದು ...ಸಲಾಗಿದೆ. ಆದರೆ ಮೇಲ್ನೋಟಕ್ಕೆ ನೋಡಿದರೆ ...ವುದು ಎರಡು ಸ್ಟ್ರೋಕ್ ಆಟೋ ಹಾಗೂ ಯಾವುದು ... ಸ್ಟ್ರೋಕ್ ಎಲ್‌ಪಿಜಿ ಆಟೋ ಎಂದು ಗೊತ್ತಾಗುವು... ಈ ಕಾರಣವನ್ನೇ ಮುಂದಿಟ್ಟು ಸರ್ಕಾರ ನಾಲ್ಕು ...ಕ್ ಎಲ್‌ಪಿಜಿ ಪರಿಸರ ಸ್ನೇಹಿ ಆಟೋಗಳನ್ನು ...ನ ಎರಡು ಸ್ಟ್ರೋಕ್ ಆಟೋಗಳಿಂದ ಬೇರ್ಪಡಿಸುವ ... ಅವುಗಳ ಕೆಳಭಾಗವನ್ನು ಈಗಿರುವ ಕಪ್ಪು ಬಣ್ಣದಿಂದ ...ಕ ಹಸಿರು ಬಣ್ಣಕ್ಕೆ ಪರಿವರ್ತಿಸಬೇಕೆಂದು ಆದೇಶ ...ಡಿಸಿದೆ.

...ಮೇಲ್ನೋಟಕ್ಕೆ ಇದೊಂದು ರೀತಿಯಲ್ಲಿ ಒಳ್ಳೆಯದೇ ಎನ್ನಿಸುತ್ತದೆ. ಪ್ರಯಾಣಿಕರು ಪರಿಸರಸ್ನೇಹಿ ಆಟೋವನ್ನು ಆಯ್ದುಕೊಳ್ಳುವುದಕ್ಕೆ ಸುಲಭವಾಗುವಂತೆ ಆದೇಶ ಹೊರಡಿಸಲಾಗಿದೆ ಎಂದೆನಿಸುತ್ತದೆ. ಆದರೆ, ಅದನ್ನೇ ಆಟೋ ಮಾಲೀಕನ ದೃಷ್ಟಿಯಿಂದ ನೋಡಿದರೆ ಸರ್ಕಾರ ಅವರಿಗೆ ಮಾಡುತ್ತಿರುವ ಅನ್ಯಾಯ ಅರ್ಥವಾಗುತ್ತದೆ. ಇಂಥ ಆದೇಶವನ್ನು ಹೊರಡಿಸಿರುವ ಮಂತ್ರಿ-ಅಧಿಕಾರಿಗಳ ಹಿಂದಿನ ಕಿಕ್‌ಬ್ಯಾಗ್ ಡೀಲು ಅರಿವಿಗೆ ಬರುತ್ತದೆ.

ಮೊಟ್ಟ ಮೊದಲನೆಯದಾಗಿ, ಈ ಬಣ್ಣ ಬದಲಿಸುವುದಕ್ಕೆ ಪ್ರತೀ ಆಟೋವೊಂದಕ್ಕೆ ಏನಿಲ್ಲವೆಂದರೂ 12,000 ರೂಪಾಯಿ ಖರ್ಚಾಗುತ್ತದೆ. ಬಣ್ಣ ಬದಲಿಸಬೇಕೆಂದರೆ ಸುಮ್ಮನೇ ಬ್ರಷ್ ಹಿಡಿದುಕೊಂಡು ಬಳಿದರಾಗುವುದಿಲ್ಲ. ಇಡೀ ಆಟೋವನ್ನು ಮೊದಲು ಬಿಚ್ಚಬೇಕಾಗುತ್ತದೆ. ಕಂಟ್ರೋಲ್ ಕೇಬಲ್‌ಗಳನ್ನು ಬದಲಿಸಬೇಕಾಗುತ್ತದೆ. ಮೇಲ್ಭಾವಣಿಯನ್ನು ಬದಲಿಸಬೇಕಾಗುತ್ತದೆ. ಟಿಂಕರಿಂಗ್ ಮಾಡಬೇಕಾಗುತ್ತದೆ. ಎಲ್ಲಾ ಸೇರಿ ಹನ್ನೆರಡು ಸಾವಿರ ದಾಟಿದರೂ ಆಶ್ಚರ್ಯವಿಲ್ಲ. ಆದರೆ ಈ ಹಣವನ್ನು ಸರ್ಕಾರ ಭರಿಸುವುದಿಲ್ಲ. ಆಟೋ ಮಾಲೀಕನೇ ತನ್ನ ಸ್ವಂತ ದುಡ್ಡಿನಿಂದ ಇದನ್ನು ಮಾಡಿಕೊಳ್ಳಬೇಕು. ಬೆಂಗಳೂರಿನಲ್ಲಿರುವ ಬಹುತೇಕ ಆಟೋ ಮಾಲೀಕರು ಬ್ಯಾಂಕಿನಲ್ಲಿ ಸಾಲ ಪಡೆದು ಆಟೋ ಖರೀದಿಸಿದ್ದಾರೆ. ಮಾಲೀಕರೇ ಆಟೋ ಚಾಲಕರಾಗಿ ದುಡಿಯುತ್ತಿದ್ದಾರೆ. ಬ್ಯಾಂಕಿನ ಸಾಲದ ಕಂತುಗಳನ್ನು ತೀರಿಸುವುದರಲ್ಲೇ ಅವರ ಅರ್ಧ ಜೀವನ ಕಳೆಯುತ್ತದೆ. ಇಂಥ ಸಂದರ್ಭದಲ್ಲಿ ಸರ್ಕಾರ ಅವರ ಮೇಲೆ ಮತ್ತೆ ಈ ಹೊರೆಯನ್ನು ಹೊರಿಸಿದೆ. ಸರ್ಕಾರ ನಾಲ್ಕು ಸ್ಟ್ರೋಕ್ ಎಲ್‌ಪಿಜಿ ಆಟೋಗಳನ್ನು ಇನ್ನಿತರ ಆಟೋಗಳಿಂದ ಬೇರ್ಪಡಿಸುವುದಕ್ಕೆ, ಆ ಮೂಲಕ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವುದಕ್ಕೆ ಅಷ್ಟೊಂದು ಉತ್ಸುಕನಾಗಿದ್ದರೆ ತಾನೇ ಖುದ್ದಾಗಿ ತನ್ನ ಖರ್ಚಿನಲ್ಲಿ ಅದನ್ನು ಮಾಡಿಸಬಹುದು. ಅದನ್ನು ಬಿಟ್ಟು ಈಗಾಗಲೇ ದಾರುಣ ಪರಿಸ್ಥಿತಿಯಲ್ಲಿರುವ ಆಟೋ ಮಾಲೀಕರ ಹೆಗಲಿಗೆ ಅದನ್ನು ಹೊರಿಸಿರುವುದು ಅನ್ಯಾಯವಲ್ಲದೇ ಮತ್ತೇನಲ್ಲ.

ಅಸಲಿಗೆ ಈ ವಿಚಾರವನ್ನು ಇನ್ನೊಂದು ಮಗ್ಗಲಿನಿಂದ ನೋಡಿದರೆ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವುದಕ್ಕಿಂತ ತಮ್ಮ ಸ್ವಂತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದೇ ಪ್ರಮುಖವಾಗಿದ್ದಂತೆ ಕಾಣುತ್ತದೆ. ಈ ಹಿಂದೆ ಮಹಾನಗರಗಳಲ್ಲಿ ದ್ವಿಚಕ್ರ ವಾಹನ ಚಾಲಕರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕೆಂದು ಆದೇಶ ಹೊರಡಿಸಿದರು. ಮೇಲ್ನೋಟಕ್ಕೆ ಇದೂ ಕೂಡ ಚಾಲಕನ ಹಿತದೃಷ್ಟಿಯಿಂದಲೇ ಹೊರಡಿಸಲಾದ ಆದೇಶ ಎಂಬಂತೆ ಕಂಡರೂ ವಾಸ್ತವದಲ್ಲಿ ಹೆಲ್ಮೆಟ್ ಕಂಪೆನಿಗಳು ತಮ್ಮ ವ್ಯಾಪಾರ ವೃದ್ಧಿಸಿಕೊಳ್ಳುವುದಕ್ಕಾಗಿ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಕೋಟ್ಯಾಂತರ ರೂಪಾಯಿ ಕಿಕ್‌ಬ್ಯಾಗ್ ಕೊಟ್ಟು ಈ ನಿಯಮವನ್ನು ಜಾರಿಗೊಳಿಸಿದ್ದರು. ಈ ಬಾರಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವ ನೆಪದಲ್ಲಿ ಆಟೋಗಳಿಗೆ ಬಣ್ಣ ಬದಲಿಸುವ ಆದೇಶ ಹೊರಡಿಸಲಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿರುವ ಶಂಕರಲಿಂಗೇಗೌಡರಿಗೆ, ಸಾರಿಗೆ ಸಚಿವ ಆರ್.ಅಶೋಕ್‌ಗೆ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಈ ನಿಯಮ ಜಾರಿ ಗೊಳಿಸುವುದಕ್ಕಾಗಿ ಯಾವ್ಯಾವ ಬಣ್ಣ ತಯಾರಿ ಸುವ ಕಂಪೆನಿಯಿಂದ ಎಷ್ಟೆಷ್ಟು ದುಡ್ಡು ಸಂದಾಯವಾಗಿದೆ ಎಂಬುದು ಸದ್ಯಕ್ಕೆ ಬಹಿರಂಗ ಗೊಂಡಿಲ್ಲ. ಆದರೆ ಅಂಥ ಒಂದು ಡೀಲ್ ಆಗಿರುವುದನ್ನು ಖಂಡಿತವಾಗಿಯೂ ತಳ್ಳಿಹಾಕಲಾಗುವು ದಿಲ್ಲ.



ರಾಮಲಿಂಗರೆಡ್ಡಿ


ಶಂಕರಲಿಂಗೇಗೌಡ ಮತ್ತು ಆರ್.ಅಶೋಕ್‌ರ ವರ್ತನೆಗಳೂ ಕೂಡ ಇದನ್ನು ಮತ್ತಷ್ಟು ಪುಷ್ಟೀಕರಿಸುತ್ತಿವೆ. ಏಕೆಂದರೆ, ಇಂಥ ಮಹತ್ವಪೂರ್ಣ ಆದೇಶವೊಂದನ್ನು ಹೊರಡಿಸುವ ಮೊದಲು ಕನಿಷ್ಠ ಆಟೋ ಮಾಲೀಕರ, ಚಾಲಕರ ಸಂಘಟನೆಗಳನ್ನು ಸಂಪರ್ಕಿಸಿ ಚರ್ಚಿಸಬೇಕೆನ್ನುವ ಕನಿಷ್ಠ ಸೌಜನ್ಯವನ್ನೂ ಸರ್ಕಾರ ತೋರಿಲ್ಲ. ಅಷ್ಟರ ಮಟ್ಟಿನ ಅವಸರವೇನಿತ್ತು ಎಂಬ ಪ್ರಶ್ನೆ ಎದ್ದೇ ಏಳುತ್ತದೆ. ಈ ಬಗ್ಗೆ ಆಟೋ ಮಾಲೀಕರು ಶಂಕರಲಿಂಗೇಗೌಡರನ್ನು ಪ್ರಶ್ನಿಸಿದರೆ "ಎಲ್ಲಾ ನಿಮ್ಮನ್ನು ಕೇಳಿಯೇ ಮಾಡುವುದಾದರೆ ಸರ್ಕಾರ ಯಾಕಿರಬೇಕು? ನೀವೇ ಬಂದು ಆಡಳಿತ ನಡೆಸಿ" ಎಂದು ಉಡಾಫೆಯಾಗಿ ಮಾತನಾಡುತ್ತಾರೆ. ಇನ್ನು ಆರ್.ಅಶೋಕ್ ಆಟೋ ಮಾಲೀಕರ ಕೈಗೆ ಸಿಗದೇ ತಲೆಮರೆಸಿಕೊಂಡು ತಿರುಗುತ್ತಿದ್ದಾರೆ. ನಿಜ ಹೇಳಬೇಕೆಂದರೆ ಆರ್.ಅಶೋಕ್ ಈ ಹೊತ್ತು ಉತ್ತರಹಳ್ಳಿಯ ಮೂಲಕ ಪ್ರವರ್ಧಮಾನಕ್ಕೆ ಬಂದು ರಾಜ್ಯ ರಾಜಕಾರಣದಲ್ಲಿ ನಾಯಕರಾಗಿ ಬೆಳೆದಿದ್ದಾರೆಂದರೆ ಅದಕ್ಕೆ ಆಟೋ ಚಾಲಕರು ಮತ್ತು ಮಾಲೀಕರೇ ಪ್ರಧಾನ ಕಾರಣ. ಅವರನ್ನು ಬಳಸಿಕೊಂಡೇ ಅಶೋಕ್ ಚುನಾವಣೆ ಗೆದ್ದಿದ್ದು, ನಾಯಕರಾಗಿ ಬೆಳೆದಿದ್ದು, ಈ ಹೊತ್ತು ಮಂತ್ರಿಯಾಗಿದ್ದು. ಈಗ ತನ್ನನ್ನು ಗೆಲ್ಲಿಸಿದವರೇ ಕಷ್ಟದಲ್ಲಿರುವಾಗ ಅವರ ಸಮಸ್ಯೆಗೆ ಸ್ಪಂದಿಸುವುದಿರಲಿ, ಕನಿಷ್ಠ ಕಾಳಜಿಯನ್ನೂ ತೋರದೆ ತಲೆತಪ್ಪಿಸಿಕೊಂಡು ತಿರುಗುತ್ತಿದ್ದಾರೆಂದರೆ ಏನೆನ್ನಬೇಕು?

ಹಾಗೆ ನೋಡಿದರೆ ಸರ್ಕಾರಕ್ಕೆ, ಟ್ರಾಫಿಕ್ ಪೊಲೀಸರಿಗೆ ಮಾಡುವುದಕ್ಕೆ ಬೇಕಾದಷ್ಟು ಕೆಲಸಗಳಿವೆ. ಅದನ್ನೆಲ್ಲಾ ಬಿಟ್ಟು ಮಾಡಬಾರದ ಇಂಥ ಕೆಲಸಗಳನ್ನು ಮಾಡುತ್ತಿದ್ದಾರೆ. ಎರಡು ಸ್ಟ್ರೋಕ್ ಆಟೋಗಳಿಂದ ವಿಪರೀತ ಶಬ್ದ, ಹೊಗೆ ಬರುತ್ತದೆ, ಇದರಿಂದ ಶಬ್ದಮಾಲಿನ್ಯ, ವಾಯುಮಾಲಿನ್ಯ ಉಂಟಾಗುತ್ತದೆ ಎಂದು ಇದೇ ಟ್ರಾಫಿಕ್ ಪೊಲೀಸರು ಬೊಬ್ಬೆಯಿಡುತ್ತಾರೆ. ವಾಸ್ತವ ಏನೆಂದರೆ, ಹೆಚ್ಚು ಹೊಗೆ ಮತ್ತು ಶಬ್ದ ಹೊರಬೀಳುವುದಕ್ಕೆ ಕೇವಲ ಎಂಜಿನ್ ಕಾರಣವಲ್ಲ. ಅದಕ್ಕಿಂತಲೂ ಹೆಚ್ಚಾಗಿ ಎಂಜಿನ್‌ಗೆ ಹಾಕುವ ಕಳಪೆ ಗುಣಮಟ್ಟದ ಡೂಪ್ಲಿಕೇಟ್ ಆಯಿಲ್ ಕಾರಣ.. ಡೂಪ್ಲಿಕೇಟ್ ಆಯಿಲ್ ಸರಬರಾಜಿನ ಒಂದು ದೊಡ್ಡ ಜಾಲವೇ ಬೆಂಗಳೂರಿ ನಲ್ಲಿದೆ. ಬೆಂಗಳೂರಿನ ಗ್ಯಾರೇಜ್ ಗಳಿಂದ ಉಪಯೋಗಿಸಲ್ಪಟ್ಟ ಆಯಿಲ್ ಕಲಾಸಿಪಾಳ್ಯಕ್ಕೆ ಸರಬರಾಜಾಗುತ್ತದೆ. ನಂತರ ಅಲ್ಲಿ ಅದನ್ನೇ ಶುದ್ಧೀಕರಿಸಿ, ಪ್ಯಾಕ್ ಮಾಡಿ ಅದರ ಮೇಲೆ ದೊಡ್ಡ ದೊಡ್ಡ ಕಂಪೆನಿಗಳ ಲೇಬಲ್ ಹಚ್ಚಿ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತದೆ. ಆಟೋ ಚಾಲಕರಿಗೂ ದುಡ್ಡಿನ ಅಭಾವವಿರುವುದರಿಂದ ಕಡಿಮೆ ಬೆಲೆಯ ಈ ಡೂಪ್ಲಿಕೇಟ್ ಆಯಿಲನ್ನೇ ಬಳಸುತ್ತಾರೆ. ಇದು ಶಬ್ದ ಮಾಲಿನ್ಯಕ್ಕೆ.. ವಾಯು ಮಾಲಿನ್ಯಕ್ಕೆ ಕಾರಣವಾಗುತ್ತದೆ. ಆಟೋ ಮಾಲೀಕರ, ಚಾಲಕರ ಸಂಘಗಳು ಈ ಡೂಪ್ಲಿಕೇಟ್ ಆಯಿಲ್ ಜಾಲವನ್ನು ಮುರಿಯ ಬೇಕೆಂದು ಸರ್ಕಾರಕ್ಕೆ ಎಷ್ಟು ಬಾರಿ ಮನವಿ ಮಾಡಿಕೊಂಡರೂ ಅದರ ಕಡೆ ಗಮನಹರಿ ಸುವುದಕ್ಕೆ ಅಧಿಕಾರಿಗಳ ಬಳಿ, ಪೊಲೀಸರ ಬಳಿ ಸಮಯ ವಿಲ್ಲ. ಆದರೆ, ಆಟೋಗಳಿಗೆ ಬಣ್ಣ ಬದಲಾಯಿಸುವ ಆದೇಶ ಹೊರಡಿಸುವುದಕ್ಕೆ ಮಾತ್ರ ಸಮಯ ವಿರುತ್ತದೆ.

ಬೆಂಗಳೂರಿನಲ್ಲಿರುವ ಸುಮಾರು ಒಂದೂಕಾಲು ಲಕ್ಷ ಆಟೋಗಳ ಪೈಕಿ ಸುಮಾರು 30,000 ಆಟೋಗಳಿಗೆ ಪರ್ಮಿಟ್ಟೇ ಇಲ್ಲ. ಅತ್ಯಂತ ಹಳೆಯ ಮಾದರಿಯ ಆಟೋಗಳನ್ನು ಬೆಂಗಳೂರಿನಲ್ಲಿ ಬಳಸುವಂತಿಲ್ಲ ಎಂಬ ನಿಯಮವಿರುವುದರಿಂದ ಆ ಆಟೋಗಳನ್ನು ಬೇರೆ ಜಿಲ್ಲಾ ಸ್ಥಳಗಳಿಗೆ ವರ್ಗಾಯಿಸಿ, ಬೇರೆ ಹೊಸ ಆಟೋ ಖರೀದಿಸಿ ಪರ್ಮಿಟ್ಟನ್ನು ಅದಕ್ಕನುಗುಣವಾಗಿ ವರ್ಗಾಯಿಸಿಕೊಳ್ಳಬೇಕು. ಆದರೆ, ಅನೇಕ ಡೀಲರ್‌ಗಳು ಹಳೆಯ ವಾಹನಗಳನ್ನು ಖರೀದಿಸಿ, ಅವುಗಳ ನಂಬರ್ ಪ್ಲೇಟ್ ಬದಲಿಸುವ, ನಕಲಿ ದಾಖಲೆ ಸೃಷ್ಟಿಸುವ ಮುಂತಾದ ಗೋಲ್‌ಮಾಲ್‌ಗಳನ್ನು ಮಾಡಿ ಬೆಂಗಳೂರಿನಲ್ಲೇ ಬೇರೆಯವರಿಗೆ ಮಾರುತ್ತಾರೆ. ಇಂಥ ಆಟೋಗಳು ಕಡಿಮೆ ಬೆಲೆಗೆ ಸಿಗುವುದರಿಂದ ಅನೇಕ ಚಾಲಕರು ಅವುಗಳನ್ನು ಖರೀದಿಸಿ ಬೆಂಗಳೂರಿನಲ್ಲೇ ಓಡಿಸುತ್ತಿದ್ದಾರೆ. ಇಂಥ ಆಟೋಗಳಲ್ಲಿ ಪ್ರಯಾಣಿಸುವಾಗ ಏನಾದರೂ ಅಪಘಾತ ಸಂಭವಿಸಿದರೆ ಪರಿಹಾರವೂ ಸಿಗುವುದಿಲ್ಲ, ವಿಮೆಯೂ ಸಿಗುವುದಿಲ್ಲ. ಪರ್ಮಿಟ್ಟಿರದ ಇಂಥ ಅನಧಿಕೃತ ಆಟೋಗಳನ್ನು ಓಡಿಸುತ್ತಿರುವ ತಪ್ಪಿತಸ್ಥರ ಮೇಲೆ ಸೂಕ್ತ ಕಾನೂನುಕ್ರಮ ಜರುಗಿಸಿ ಎಂದು ಆಟೋ ರಿಕ್ಷಾ ಮಾಲೀಕರ, ಚಾಲಕರ ಸಂಘದವರು ಸರ್ಕಾರಕ್ಕೆ, ಟ್ರಾಫಿಕ್ ಪೊಲೀಸರಿಗೆ ಎಷ್ಟೋ ಬಾರಿ ಮನವಿ ಸಲ್ಲಿಸಿದರೂ ಅದಕ್ಕೆ ಯಾರೂ ಕ್ಯಾರೆ ಎನ್ನಲಿಲ್ಲ. ಅದಕ್ಕೆ ಅವರ ಬಳಿ ಸಮಯವೂ ಇಲ್ಲ. ಈಗ ಆಟೋ ಮಾಲೀಕರ ತಲೆ ಮೇಲೆ ಹೊಡೆಯುವ ಆದೇಶ ಹೊರಡಿಸುವುದಕ್ಕೆ ಮಾತ್ರ ಸಮಯವಿರುತ್ತದೆ.

ಯಡಿಯೂರಪ್ಪ, ಶಂಕರಲಿಂಗೇಗೌಡ ಮತ್ತು ಆರ್.ಅಶೋಕ್ ಒಂದು ಮಾತನ್ನು ಚೆನ್ನಾಗಿ ನೆನಪಿಟ್ಟು ಕೊಳ್ಳುವುದೊಳ್ಳೆಯದು. ಒಂದೂಕಾಲು ಲಕ್ಷದಷ್ಟಿರುವ ಆಟೋಗಳು ಬೆಂಗಳೂರು ನಗರದ ಜೀವನಾಡಿಗಳಂತಿವೆ. ಐದು ಲಕ್ಷದಷ್ಟು ಜನ ಈ ಆಟೋಗಳನ್ನೇ ನಂಬಿ ಕೊಂಡಿದ್ದಾರೆ. ಅವರೆಲ್ಲಾ ಬೀದಿಗೆ ಇಳಿದರೆ ಬೆಂಗಳೂರು ಏನಾಗುತ್ತದೆ, ಸರ್ಕಾರ ಎಂಥ ಫಜೀತಿಗೆ ಬೀಳುತ್ತದೆ ಎಂಬುದನ್ನು ಯೋಚಿಸುವುದೊಳಿತು.

● ವರದಿಗಾರ




ಚಿಮೂ ಎಂಬ ಅಪಾಯಕಾರಿ ಆಷಾಢಭೂತಿ

ನೇಪಾಳದ ಪಶುಪತಿ ದೇವಸ್ಥಾನದಲ್ಲಿ ಕನ್ನಡ ಬ್ರಾಹ್ಮಣ ಅರ್ಚಕರ ಮೇಲೆ ಅಲ್ಲಿನ ಮಾವೋವಾದಿಗಳು ದಾಳಿ ಮಾಡಿದ್ದರಿಂದ "ಹಿಂದೂ ಸಂಸ್ಕೃತಿಗೆ ಅಪಾಯ'' ಉಂಟಾಗಿದೆಯೆಂದು ಮಾಜಿ ಸಂಶೋಧಕರಾದ ಚಿದಾನಂದಮೂರ್ತಿಗಳು ಪ್ರಜಾವಾಣಿಯ ವಾಚಕರವಾಣಿಯಲ್ಲಿ ಎಚ್ಚರಿಕೆ ನೀಡಿದ್ದಾರೆ. ಆದರೆ ಅವರ ಕಾಳಜಿ ವ್ಯಕ್ತವಾಗಿರುವುದು ಏಟುತಿಂದ ಆ ನರಪ್ರಾಣಿಗಳ ಬಗ್ಗೆಯಲ್ಲ. ಚಿಮೂಗಳ ಕಾಳಜಿ ಇರುವುದು ಅವರ ಅರ್ಚಕತ್ವದ ಮೇಲೆ ದಾಳಿಯಾಗಿದ್ದರ ಬಗ್ಗೆ! ನರಮನುಷ್ಯನಿಗಿಂತ ಜನಿವಾರದ ಮೇಲೆ ಮತ್ತು ಶಿವದಾರದ ಮೇಲೆ ಅವರಿಗಿರುವ ಅಕ್ಕರೆ ಎಂಥಾ ಅಮಾನವೀಯವಾದದ್ದು ಎಂದು ಇದರಿಂದಲೇ ಅರ್ಥವಾಗುತ್ತದೆ.

ನೇಪಾಳದ ಪಶುಪತಿನಾಥ ದೇವಸ್ಥಾನದಲ್ಲಿ ಮಾಂಸಾಹಾರ, ಪಶುಬಲಿ ಮತ್ತು ಮದ್ಯಪಾನಗಳಂತಹ ಘೋರ ವಾಮಾಚಾರ ಪೂಜಾಪದ್ಧತಿಗಳು ನಡೆಯುತ್ತಿದ್ದು ಅದನ್ನು ಹದಿನೈದನೇ ಶತಮಾನದಲ್ಲಿ ದಕ್ಷಿಣ ಕನ್ನಡದಿಂದ ಹೋದ ಈ ಭಟ್ಟ ಬ್ರಾಹ್ಮಣರು ನಿಲ್ಲಿಸಿ 'ಸಾತ್ವಿಕ ಪೂಜಾಪದ್ಧತಿ'ಯನ್ನು ಪ್ರಾರಂಭಿಸಿದರೆಂದೂ, ಈಗ ಮತ್ತೆ ನೇಪಾಳದವರಿಗೆ ದೇವಸ್ಥಾನವನ್ನು ವಹಿಸಿಕೊಟ್ಟರೆ ಮತ್ತೆ ವಾಮಾಚಾರ ಪ್ರಾರಂಭವಾಗುತ್ತದೆಂಬುದು ಚಿಮೂರವರ 'ಆತಂಕ'!

ಆದರೆ ಮಾಂಸಾಹಾರ ಮತ್ತು ಮದ್ಯಪಾನಗಳ ಮೂಲಕ ಮಾಡುವ ದೈವಾರಾಧನೆ ಸಾತ್ವಿಕವಾದದ್ದಲ್ಲವೆಂದು ಹೇಳುವ ಅಧಿಕಾರವನ್ನು ಇವರಿಗೆ ಕೊಟ್ಟವರು ಯಾರು? ಬೇಡರ ಕಣ್ಣಪ್ಪನಿಂದ ಹಿಡಿದು ಇವತ್ತಿನವರೆಗೂ ಕೋಟ್ಯಂತರ ಜನರ ಆರಾಧನಾ ಪದ್ಧತಿಯಲ್ಲಿ ಮದ್ಯ ಮತ್ತು ಮಾಂಸಾಹಾರಗಳಿಗೆ ಒಂದು ಸ್ಥಾನವಿದ್ದೇ ಇದೆ. ಅಷ್ಟೆಲ್ಲಾ ಏಕೆ? ಈ ಬ್ರಾಹ್ಮಣರು ಬುದ್ಧನಿಗಿಂತ ತಾವು ಶ್ರೇಷ್ಠರೆಂದು ಪ್ರತಿಪಾದಿಸಲು ಏಕಾಏಕಿ ಶಾಖಾಹಾರಿಗಳಾಗುವ ಮುನ್ನ ದೇವರಿಗೆ ನೈವೇದ್ಯವೆಂದು ಇಡುತ್ತಿದ್ದದ್ದು ಎಳೆಗರುವಿನ ಮಾಂಸವನ್ನೇ ಅಲ್ಲವೇ? ಮದ್ಯಪಾನ ಮತ್ತು ಮಾಂಸಾಹಾರದ ಮೂಲಕ ನಡೆಸುವ ದೈವಾರಾಧನೆಯನ್ನು ಘೋರ ವಾಮಾಚಾರವೆಂದು ಬಣ್ಣಿಸುವುದು ಬ್ರಾಹ್ಮಣೀಯ ಪುರೋಹಿತಶಾಹಿ ಸಿದ್ಧಾಂತವೇ ಹೊರತು ಭಾರತೀಯ ಜನರ ಅಭಿಪ್ರಾಯವಲ್ಲ. ಹೀಗಾಗಿ ಚಿಮೂರವರು ಹೀಯಾಳಿಸಿರುವುದು ಕೇವಲ ನೇಪಾಳದ ಸಂಸ್ಕೃತಿಯನ್ನಲ್ಲ, ಬದಲಿಗೆ ಭಾರತದಲ್ಲೇ ಇರುವ ಬಹುಸಂಖ್ಯಾತ ಹಿಂದೂಗಳ, ಅವೈದಿಕ ಶೂದ್ರ ಮತ್ತು ದಲಿತ ಸಂಸ್ಕೃತಿಗಳ ದೈವಾರಾಧನಾ ಪದ್ಧತಿಗಳನ್ನು. ಇದು ಮಡಿ ಮೈಲಿಗೆಯ ಹೆಸರಲ್ಲಿ ಮನುಷ್ಯತ್ವಕ್ಕೆ ಮೈಲಿಗೆ ಅಂಟಿಸಿದ ಘೋರ ಬ್ರಾಹ್ಮಣ್ಯ ಸಿದ್ಧಾಂತ. ಆದ್ದರಿಂದಲೇ ಆಹಾರ ಪದ್ಧತಿಗಳಲ್ಲಿ ಬ್ರಾಹ್ಮಣ್ಯ ಬೋಧಿಸುವ ಇಂಥಾ ಪುರೋಹಿತಶಾಹಿ ಶರಣರ ಆಷಾಢಭೂತಿತನವನ್ನು ದಲಿತ ಕಾಳವ್ವೆಯಂತಹ ಶರಣೆಯರು 12ನೇ ಶತಮಾನದಲ್ಲೂ ಮುಟ್ಟಿ ನೋಡಿಕೊಳ್ಳುವಂತೆ ಲೇವಡಿ ಮಾಡಿದ್ದರು.



ಈಗ ಸದ್ಯಕ್ಕೆ ನೇಪಾಳದ ಮಾವೋವಾದಿಗಳು ಪಶುಪತಿನಾಥನ ದೇವಸ್ಥಾನದಿಂದ ದೇವರನ್ನೇನು ಓಡಿಸುತ್ತಿಲ್ಲ. ಅವರು ಕೇಳುತ್ತಿರುವುದು ನೇಪಾಳದ ದೇವರಿಗೆ ಭಾರತದ ಪೂಜಾರಿ ಏಕೆ ಎಂಬುದು. ಏಕೆಂದರೆ ದೇವರು ಕೊಟ್ಟರೂ ಪೂಜಾರಿ ಕೊಡ ಎಂಬಂತೆ ನೇಪಾಳದಲ್ಲಿ ಎಲ್ಲಾ ಬಗೆಯ ಸಂಪನ್ಮೂಲಗಳಿದ್ದರೂ ಭಾರತ ಅದನ್ನು ನೇಪಾಳದ ಜನತೆಗೆ ಬಿಟ್ಟುಕೊಡುತ್ತಿಲ್ಲ. ಅದರ ಆಧ್ಯಾತ್ಮಿಕ ಅಭಿವ್ಯಕ್ತಿಯಾಗಿ ನೇಪಾಳದ ದೇವರಿಗೆ ಭಾರತದ ಪೂಜಾರಿ ಇದ್ದಾನೆ ಎಂದೆನಿಸಿದ್ದರೆ ಅದರಲ್ಲಿ ತಪ್ಪೇನು?

ಅದೆಲ್ಲಾ ಒತ್ತಟ್ಟಿಗಿರಲಿ. "ಕರ್ನಾಟಕದಲ್ಲಿರಬೇಕಾದರೆ ಕನ್ನಡಿಗನಾಗಿರಬೇಕು'' ಎಂಬ ತಾತ್ವಿಕ ನೆಲೆಯ ಮೇಲೆ ಕನ್ನಡ ಚಳವಳಿ ಇಲ್ಲಿನ ಭಾಷಾ ಅಲ್ಪಸಂಖ್ಯಾತರ ವಿರೋಧಿಯಾಗುವಲ್ಲಿ ಪ್ರಮುಖ ಪಾತ್ರವಹಿಸಿದ ಚಿದಾನಂದಮೂರ್ತಿಗಳಿಗೆ "ನೇಪಾಳದ ದೇವರಿಗೆ ನೇಪಾಳದ ಪೂಜಾರಿ''ಯೇ ಬೇಕೆಂಬ ನೇಪಾಳೀಯರ ತಾತ್ವಿಕ ನಿಲುವನ್ನು ವಿರೋಧಿಸುವ ಯಾವ ನೈತಿಕ ಹಕ್ಕಿದೆ. ಇಲ್ಲಿನ ದೇವಸ್ಥಾನಗಳಲ್ಲಿ ಕನ್ನಡಿಗರಿಗೆ ಅರ್ಥವಾಗದ ಸಂಸ್ಕೃತದಲ್ಲಿ ಪೂಜಾರಾಧನೆಗಳು ನಡೆಯುತ್ತಿದ್ದರೂ ಕಿಮ್ಮೆನ್ನದ ಈ ಚಿಮೂ ಬೆಂಗಳೂರಿನ ಚರ್ಚುಗಳಲ್ಲಿ ಮಾತ್ರ ಕನ್ನಡದಲ್ಲೇ ಆರಾಧನೆ ನಡೆಯಬೇಕೆಂದು ಚಳವಳಿಯನ್ನೇ ಹೂಡಿದ್ದರು. ಆಗಲೂ ಅವರಿಟ್ಟ ವಾದ ಕರ್ನಾಟಕದಲ್ಲಿ ಕನ್ನಡ ಎಂಬುದು. ಈಗ ನೇಪಾಳದಲ್ಲೂ ಮಾವೋವಾದಿಗಳು ನೇಪಾಳ ನೇಪಾಳೀಯರಿಗೆ ಮಾತ್ರ ಎಂದರೆ ಚಿಮೂಗಳಿಗೇಕೆ ಕಣ್ಣುರಿ?

ಮಾವೋವಾದಿಗಳು ನೇಪಾಳದ ಪ್ರಾಚೀನ ಸಂಸ್ಕೃತಿಯನ್ನು ನಾಶ ಮಾಡುತ್ತಾರೆ ಎಂದು ವಾದಿಸುವ ಚಿಮೂಗಳು ಅಲ್ಲಿದ್ದ ಪ್ರಾಚೀನವಾದ ಜನಸಾಮಾನ್ಯರ ಆರಾಧನಾ ಪದ್ಧತಿಗಳನ್ನು 'ಸಾತ್ವಿ[k] ಪೂಜಾ ಪದ್ಧತಿ'ಯ ಹೆಸರಲ್ಲಿ ನಾಶ ಮಾಡಿದ್ದು ಶಂಕರಾಚಾರ್ಯರು ಮತ್ತು 'ಭಟ್ಟ ಬ್ರಾಹ್ಮಣರೇ' ಎಂದು ಪರೋಕ್ಷವಾಗಿ ಒಪ್ಪಿಕೊಂಡಿಲ್ಲವೇ?

ಅಂತಿಮವಾಗಿ ಚಿಮೂಗಳ ಇತ್ತೀಚಿನ ಸಂಶೋಧನೆಗಳ ಬಗ್ಗೆ ಹೇಳಲೇಬೇಕು. ಯಾವು[ದೇ] ಐತಿಹಾಸಿಕ ಸಂಶೋಧನೆಗಳಿಗೆ ಒಂದು ವಿಧಾನ, ಪದ್ಧತಿಗಳು ಇರುತ್ತವೆ. ಸಂಶೋಧನೆಯಿಂದ ಹೊರಬರುವ ಸತ್ಯ ವೈಜ್ಞಾನಿಕವಾಗಿ ಮತ್ತು ವೈಚಾರಿಕವಾಗಿ ಸಾಬೀತಾಗಿರಬೇಕಿರುತ್ತದೆ. ಆದರೆ ಈ ಕನ್ನಡದ ಮಹಾನ್ ಸಂಶೋಧಕನಿಗೆ ಮೆಥಡಾಲಜಿ ಎಂಬುದೇ ಬೇಕಿಲ್ಲ. ಅವರಿವರು ಹೇಳಿದ್ದೇ ಚಾರಿತ್ರಿಕ ಸತ್ಯ. ಅದೇ ಇವರು ಮಾಡುವ ಮಹಾನ್ ಸಂಶೋಧನೆ. ಇತ್ತೀಚೆಗೆ ಬಾಬಾಬುಡನ್‌ಗಿರಿಯ ಬಗ್ಗೆ ಅವರು ಮಾಡಿದ ಸಂಶೋಧನೆಯಲ್ಲಿ ಅಲ್ಲಿ ಇದ್ದದ್ದು ದತ್ತಾತ್ರೇಯನೇ ಹೊರತು ದಾದಾ ಹಯಾತನಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದರು. ಅದಕ್ಕೆ ಅವರು ಯಾ[ವ] ತಾಳೆಗರಿ ಶಾಸನವನ್ನಾಗಲೀ, ಐತಿಹಾಸಿಕ ಪುರಾವೆಯನ್ನಾಗಲೀ ಪರಿಗಣಿಸಲಿಲ್ಲ. ಬದಲಾಗಿ ಸ್ಥಳೀಯರಾದ ಇಬ್ಬರು ಹಳೆಯ 'ಆರೆಸ್ಸೆಸ್ಸಿಗರನ್ನು ಸಂದರ್ಶನ ಮಾಡಿದರು. ಅವರು ಹೇಳಿದ್ದನ್ನೇ ಸಂಶೋಧನೆ ಎಂದು ಪ್ರಕಟಿಸಿದರು. ಎಂಥಾ ಅದ್ಭುತವಾದ ಸಂಶೋಧನಾ ಪದ್ಧತಿಯಲ್ಲವೇ? ಇದೀಗ ನೇಪಾಳದ ಪಶುಪತಿ ದೇವಸ್ಥಾನದಲ್ಲೂ 15ನೇ ಶತಮಾನದಿಂದಲೇ ದಕ್ಷಿಣ ಕನ್ನಡದ ಬ್ರಾಹ್ಮಣ ಅರ್ಚಕರಿದ್ದರು ಎಂಬ ಸಂಶೋಧನೆಗೆ ಅವರು ಅಳವಡಿಸಿದ ವಿಧಾನವೂ ಅಷ್ಟೇ ಅದ್ಭುತವಾಗಿದೆ. 2002ರಲ್ಲಿ ಅವರು ಕಠ್ಮಂಡುವಿ[ಗೆ] ಹೋಗಿ 15 ದಿನಗಳ ಕಾಲ ಪಶುಪತಿ ದೇವಸ್ಥಾನದ ಅರ್ಚಕರನ್ನು ಮಾತಾಡಿಸಿದರಂತೆ. ಅವರ ಹೇಳಿಕೆಯನ್ನೇ ತಮ್ಮ ಅದ್ಭುತ ಸಂಶೋಧ[ನೆ] ಎಂದು ಘೋಷಿಸಿಕೊಂಡಿರುವ ಚಿಮೂಗಳು 15ನೇ ಶತಮಾನದಿಂದಲೂ ಅಲ್ಲಿ ಕನ್ನಡಿಗ ಭಟ್ಟ ಬ್ರಾಹ್ಮಣ ಅರ್ಚಕರಿದ್ದಾರೆಂದು ಹೇಳುತ್ತಿದ್ದಾರೆ. ಅರ್ಚಕರು ಹೇಳಿದ್ದೇ ಇತಿಹಾಸ ಮತ್ತು ಸಂಶೋಧನೆಯಾಗಿ ಬಿಡುವುದು "ಭಟ್ಟ"ಂಗಿಗಳ ಲೋಕದಲ್ಲಷ್ಟೇ ಸಾಧ್ಯ. ಅಲ್ಲವೇ?

● ಶಿವಸುಂದರ




ಕಟ್ಟೆಪುರಾಣದ 25ನೇ ಪ್ರದರ್ಶನ

ಮೊನ್ನೆ 'ಬಯಲುಸೀಮೆ ಕಟ್ಟೆಪುರಾಣ' ನಾಟಕ ಇಪ್ಪತ್ತೈದನೇ ಪ್ರದರ್ಶನ ಕಂಡಿತು. ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಪ್ರದರ್ಶನಗೊಂಡ ನಾಟಕಕ್ಕೆ ಪಾತ್ರಧಾರಿಗಳ ಮನೆಯವರು ಮಾತ್ರ ಬರಬಹುದೆಂದು ಎಣಿಸಿದ್ದೆವು. ಏಕೆಂದರೆ ಸತತವಾಗಿ ಮೂರು ದಿನಗಳಿಂದ ಎಡೆಬಿಡದೆ ಸುರಿಯುತ್ತಿದ್ದ ಮಳೆಯ ದೆಸೆಯಿಂದ ಪಾತ್ರಧಾರಿಗಳು "ನಮಗೆ ನಾವೇ ನಾಟಕ ಮಾಡಿಕೊಳ್ಳೋಣ, ಇನ್ನೇನು ಮಾಡುವುದು" ಎಂದು ಚರ್ಚಿಸುತ್ತಿದ್ದರು. ಆದರೆ ನಾಟಕ ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮೊದಲೇ ನಿಂತ ಮಳೆ ಮತ್ತೆ ಬರಲಿಲ್ಲ, ಆದ್ದರಿಂದ ಕುವೆಂಪು ರಂಗಮಂದಿರ ಭರ್ತಿಯಾಯ್ತು.

ಇಪ್ಪತ್ತೈದು ಪ್ರದರ್ಶನಗಳಲ್ಲಿ ಪಾತ್ರ ಮಾಡಿದವರಿಗೆ ಫಲಕವನ್ನು ಗೌರಿ ಲಂಕೇಶ್ ಕೈಯಿಂದ ಕೊಡಿಸಬೇಕೆಂದು ತೀರ್ಮಾನಿಸಿ ಆಹ್ವಾನಿಸಿದ್ದೆವು. ಅವರ ಜಾಗವನ್ನು ಕಡಿದಾಳು ಶಾಮಣ್ಣನವರು ತುಂಬಿದರು. ಈ ನಾಟಕದ ವಿಶೇಷವೆಂದರೆ ಇದರ ಕಥೆಯನ್ನು ಹಾಗೇ ಉಳಿಸಿಕೊಂಡು ಪ್ರಸ್ತುತ ಬದಲಾವಣೆಗಳನ್ನೆಲ್ಲಾ ಸೇರಿಸುತ್ತಾ ಹೋಗಬಹುದು. ಆದ್ದರಿಂದ ಗಣಿ ರೆಡ್ಡಿಗಳು, 'ಆಪರೇಷನ್ ಕಮಲ' ಇವೆಲ್ಲವೂ ಸಂದರ್ಭೋಚಿತವಾಗಿ ಬಂದು ಹೋಗುತ್ತವೆ. ಪಾತ್ರಧಾರಿಗಳು ಈ ವಿಷಯದಲ್ಲಿ ಪ್ರತಿಭಾವಂತರಾಗಿದ್ದರೆ ಹಾಸ್ಯ ಹುಟ್ಟಿಸಬಹುದು. ಇಲ್ಲವಾದರೆ ಕಷ್ಟ. ನಗಿಸುವುದೇ ನಮ್ಮ ಕೆಲಸವೆಂದು ಭಾವಿಸಿದಾಗ ನಾಟಕ ಒಂದು ನಗೆಕೂಟವಾಗಿ ಬಿಡುತ್ತದೆ. ಅಂತ ಅಪಾಯದಿಂದ ಈ ನಾಟಕವನ್ನ ಪಾರು ಮಾಡಬೇಕಿದೆ.

ಕಾಳ, ಸೀರ, ವಾಟಿಸ್ಸೆ, ಕಲಕಪ್ಪ ಮತ್ತು ನಾಟಕದ ಮೇಷ್ಟ್ರು ಹಾಗು ಲಕ್ಕನ ಪಾತ್ರಗಳು ಇಪ್ಪತ್ತೈದು ಪ್ರದರ್ಶನಗಳಲ್ಲೂ ಭಾಗವಹಿಸಿದ್ದಾರೆ. ಅದರಲ್ಲೂ ಲಕ್ಕನ ಪಾತ್ರಧಾರಿ ಕನ್ನಡ ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಾದ ಹರಿಕುಮಾರ್, ಮೂರು ಮಾತಿನ ಆ ಪಾತ್ರಕ್ಕೆ ನಮ್ಮ ಜೊತೆ ಕೊಟ್ಟರು, ಹಡಗಲಿ, ಕಾಳಮುದ್ದನ ದೊಡ್ಡಿಗೆಲ್ಲ ಬಂದಿದ್ದಾರೆ. ಕೋಳಿ ತುಂಬುವ ವ್ಯಾನಿನಲ್ಲೂ ಕೂಡ ಕಿಂಚಿತ್ತೂ ಬೇಸರಗೊಳ್ಳದೆ ಬಂದು ಭಾಗವಹಿಸಿದ್ದರಿಂದ ನಮಗವರು ಅಪರೂಪದ ಅಧಿಕಾರಿಯಾಗಿ ಕಂಡಿದ್ದಾರೆ. ಅವರಲ್ಲಿರುವ ಉತ್ಸಾಹ ಮತ್ತು ವಹಿಸಿಕೊಂಡ ಜವಾಬ್ದಾರಿ ನಿರ್ವಹಣೆಯ ಬದ್ಧತೆ ಕಂಡು ವಿಸ್ಮಯಗೊಂಡಿದ್ದೇವೆ. ಏಕೆಂದರೆ ಶಿವಮೊಗ್ಗದ ಕುವೆಂಪು ರಂಗಮಂದಿರವನ್ನು ಅವರು ಎಷ್ಟು ಚೆನ್ನಾಗಿ ಇಟ್ಟಿದ್ದಾರೆಂದರೆ, ಮಂಡ್ಯ, ಮೈಸೂರು ಇನ್ನಿತರ ಕಡೆಯ ರಂಗಮಂದಿರಗಳ ಸ್ಥಿತಿ ನೋಡಿದಾಗ ಅದು ನಮ್ಮ ಮುಂದೆ ಬಂತು.



ನಾಟಕದ ನಿರ್ದೇಶಕ ಮತ್ತು ಕಾಳಮಾವನ ಪಾತ್ರಧಾರಿ ಎಸ್.ಆರ್. ಗಿರೀಶ್ ಅಪರೂಪದ ಪ್ರತಿಭಾವಂತ. ಆತನನ್ನು ನೋಡಿದ ಕೂಡಲೇ ಕವಿತಾ ಲಂಕೇಶ್ ತಮ್ಮ 'ಅವ್ವ' ಚಿತ್ರದಲ್ಲಿ ಪಾತ್ರ ಕೊಟ್ಟರು. ಇಡೀ ನಾಟಕದ ಪ್ಲಾಟು ಆತನ ಬಾಯಲ್ಲಿರುವುದರಿಂದ ಯಾರೇ ಹೊಸ ಪಾತ್ರಧಾರಿ ಬಂದರೂ ಆತನ ಮಾತನ್ನು ತಾನೇ ಹೇಳಿಕೊಂಡು ನಿಭಾಯಿಸುವ ವೈಖರಿ ಬೆರಗು ಹುಟ್ಟಿಸುವಂತದ್ದು. ಕಾಳಮಾವ ತನ್ನ ಜೀವನದಲ್ಲಿ ಒಂದು ಹನಿಯನ್ನೂ ಕುಡಿದವನಲ್ಲ, ಆದರೆ ಗಿರೀಶ್‌ಗೆ ಅದೇ ಸ್ಫೂರ್ತಿ! ಸದಾ ಕುಡಿತದಲ್ಲೇ ಇರುವ ವಾಟಿಸ್ಸೆ ಪಾತ್ರ ಮಾಡುತ್ತಿರುವ ಸಾಸ್ವೆಹಳ್ಳಿ ಸತೀಶ್ ಈವರೆಗೆ ಒಂದು ಹನಿಯನ್ನು ಕುಡಿದಿಲ್ಲ. ಇನ್ನ ಸೀರನ ಪಾತ್ರಧಾರಿ ಈರಣ್ಣ ಬೆಳ್ಳುಳ್ಳಿ ಎಂತಹ ಪ್ರತಿಭಾವಂತನೆಂದರೆ ಈಗ ಧಾರಾವಾಹಿ ನಿರ್ದೇಶಕರು ಅವನನ್ನು ಹುಡುಕಿಕೊಂಡು ಬರುತ್ತಿದ್ದಾರೆ. ಮೂರು ಪಾತ್ರ ಮಾಡುವ ಕಲಕಪ್ಪನ ಪಾತ್ರಧಾರಿ ರಾಜಕುಮಾರ್ ಇವರೆಲ್ಲಾ ನಾಟಕದ ಪಿಲ್ಲರ್‌ಗಳು. ಎಲ್ಲರೂ ಹವ್ಯಾ[ಸಿ] ಕಲಾವಿದರಾದ್ದರಿಂದ ಪ್ರದರ್ಶನದ ಬೇಡಿಕೆ ಪೂರೈಸಲಾಗುತ್ತಿಲ್ಲ.

ಹಲವು ಬಾರಿ ಈ ನಾಟಕ ನೋಡಿರುವ ಕಡಿದಾಳು ಶಾಮಣ್ಣನವರು "ಈ ನಾಟಕ ನೂರು ಪ್ರದರ್ಶನ ಕಾಣಲಿ" ಎಂದರು. ಅಷ್ಟರಲ್ಲಿ ಪಾತ್ರಧಾರಿಗಳು ಮುದುಕರಾಗಿ, ಅವರ ಮಕ್ಕಳು ಮುಂದುವರಿಸಿಕೊಂಡು ಹೋಗಬಹುದು. ಪತ್ರಿಕೆಯ 'ಬಯಲುಸೀಮೆ ಕಟ್ಟೆಪುರಾಣ' ಕಾಲಂಗೆ ಹದಿನೈದು ವರ್ಷ ತುಂಬಿದೆ. ನಾಟಕ ಇಪ್ಪತ್ತೈದು ಪ್ರದರ್ಶನ ಕಂಡಿದೆ. ಹಾಗೆಯೇ ನಾಟಕ ತಂಡ 'ನಂ ಟೀಮಿಗೆ' ಹತ್ತು ವರ್ಷ.

ಕಾಲದ ವೇಗ ಅಚ್ಚರಿ ಹುಟ್ಟಿಸುತ್ತದೆ!

ತ್ತೂರಿನ ಬಂಗಲೆ, ಮೀಟರ್ ಬಡ್ಡಿ ರೊಕ್ಕ

ಕೊರಂಗು ಸೊತ್ತು ಪರಾಯಿಪಾಲು



ಕೊರಂಗು

ಪಿ ಸೊತ್ತು ಯಾವತ್ತಿದ್ದರೂ ಪರಾಯಿ ಪಾಲೇ. ಕೊರಂಗು ಆಂಧ್ರದ ಚಿತ್ತೂರಿನಲ್ಲಿ ಕಟ್ಟಿಸಿದ ಐವತ್ತು ಬಂಗಲೆಯನ್ನು ಜಪ್ತಿ ಮಾಡಿಕೊಳ್ಳುವಂತೆ ಕಮಿಷನರ್ ಬಿದರಿ ಆದೇಶಿಸುತ್ತಿದ್ದಂತೆ ಸಿಸಿಬಿಯ ನಿಪ್ಪುರಿ ಹಾದಿಮನಿ ತಂಡ ಚಿತ್ತೂರಿನತ್ತ ಪ್ರಯಾಣ ಬೆಳೆಸಿದೆ. ಕೊರಂಗು ಯಲಹಂಕ ಪೊಲೀಸ್ ಠಾಣೆಯಲ್ಲಿ ಕಂಬ ಎಣಿಸುತ್ತಿದ್ದಾನೆ. ಮೈತುಂಬಾ ಕಾಯಿಲೆ. ಗಿದೆ. ವಿಚಿತ್ರವಾಗಿ ಕೆಮ್ಮುತ್ತಾನೆ. ನ ಮುಂಭಾಗವಿಡೀ ಮಂಗಮಾಯ! ಂಗೈಯನ್ನೇ ಕಳಕೊಂಡು, ನಾನಾ ಗಳನ್ನು ಹೊತ್ತು ಈ ಇಳಿವಯಸ್ಸಿನಲ್ಲೂ ಕಿಡ್ನಾಪುಗಳನ್ನು ಮಾಡುತ್ತ ತನ್ನ ಯ ಬೇಟೆಗೆ ನಿಂತ ಕೊರಂಗು ಬಗ್ಗೆ ರಿಗಾದರೂ ಮರುಕ ಹುಟ್ಟಲೇಬೇಕು.



ಬುಲೆಟ್ ರವಿ

ಲ್ಲಿಗೆ ವಾರದ ಹಿಂದೆ ಸಿಸಿಬಿಯ ಎಸಿಪಿ ನಿ, ಇನ್ಸ್‌ಪೆಕ್ಟರ್‌ಗಳಾದ ಅಶೋಕನ್, ಮಾರ್, ಬಾಳೇಗೌಡ, ಎಸ್.ಐ. ನಾಗಣ್ಣಗೌಡರ ತಮಿಳುನಾಡಿನಲ್ಲಿ ಸಿಕ್ಕುಬಿದ್ದ ಕೊರಂಗು ತನ್ನನ್ನು ರವಿ ಕೊಲೆ ಕೇಸಿಗಷ್ಟೇ ಹಿಡಿದಿದ್ದಾರೆಂದು ದ್ದ. ಹೇಗೂ ಬುಲೆಟ್ ರವಿ ಹತ್ಯೆಯಲ್ಲಿ ತನ್ನ ಲ್ಲವಾದ್ದರಿಂದ ತನಗಂಥಾ ಅಪಾಯವಿಲ್ಲವೆಂದೇ ಕಿದ್ದ. ಆದರೆ ಸಿಸಿಬಿಯ ಎಣಿಕೆಯೇ ಬೇರೆಯಿತ್ತು.

ಕೇವಲ ಬುಲೆಟ್ ರವಿ ಹತ್ಯೆಯಲ್ಲಷ್ಟೇ ಅಲ್ಲ ಕೊರಂಗು ಗ್ಯಾಂಗ್ ಬೆಂಗಳೂರಿನುದ್ದಕ್ಕೂ ಅರ್ಧಡಜನ್ ಕಿಡ್ನಾಪುಗಳನ್ನೆಸಗಿ ಸರಿಸುಮಾರು ಒಂದು ಕೋಟಿಯಷ್ಟು ದೋಚಿತ್ತು.

ರಾಬರಿ, ಕಿಡ್ನಾಪ್, ಸುಲಿಗೆಗಳನ್ನು ಕೊರಂಗು ಆ ಕಾಲದಿಂದಲೂ ಮಾಡಿಕೊಂಡೇ ಬಂದಿದ್ದ. ಯಾವತ್ತು ಚಿತ್ರದುರ್ಗದ ಸಮೀಪದ ಡಾಬಾದ ಮೇಲೆ ಹೆಬ್ಬೆಟ್ಟು ಮಂಜನ ಗ್ಯಾಂಗ್ ದಾಳಿಯಿಟ್ಟು ಕೊರಂಗು ಕೈ ಕತ್ತರಿಸಿತೋ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರು ಆತನ ಅಂಗೈಯನ್ನೇ ಕತ್ತರಿಸಿ ತೆಗೆದರು. ಅಲ್ಲಿಗೆ ಕೊರಂಗು ತಾಕತ್ತು ಉಡುಗಿತೆಂದೇ ಅಂಡರ್ ವರ್ಲ್ಡ್ ಲೆಕ್ಕ ಹಾಕಿತ್ತು.

ಆದರೆ ಕೊರಂಗು ವಿಚಿತ್ರ ಗುಂಡಿಗೆಯ ಅಸಾಧಾರಣ ಮಾತುಗಾರಿಕೆಯ ಪ್ರಚಂಡ. ಕೈತುಂಡಾದರೇನಂತೆ ಬಾಯಿದೆಯಲ್ಲ; ಗೋಲಿ ಆಡುವ ಹುಡುಗನನ್ನೂ ಕ್ಷಣಾರ್ಧದಲ್ಲೇ ರೆಡಿ ಮಾಡಿ ಆತನ ಕೈಯಲ್ಲೊಂದು ಕ್ರೈಮ್ ಮಾಡಿಸುವ ತಾಕತ್ತು ಆತನಿಗಿದೆ. ತನ್ನ ದುಷ್ಮನ್‌ಗಳಾದ ಸೈಕಲ್ ರವಿ ಮತ್ತು ಹೆಬ್ಬೆಟ್ಟು ಮಂಜರನ್ನು ಸಾಕುತ್ತಿರುವುದೇ ಬುಲೆಟ್ ರವಿ ಅಂತ ಗೊತ್ತಿದ್ದೂ ಆತನಿಂದಲೇ ಒಂದಷ್ಟು ದುಡ್ಡು ಕಿತ್ತುಕೊಂಡ. ಜೊತೆಗಿದ್ದೇ ಹೆಬ್ಬೆಟ್ಟು ಮಂಜನನ್ನು ಕೊರಂಗುಗೆ ಹಾಕಿಕೊಡಲು ಬುಲೆಟ್‌ರವಿ ಹವಣಿಸುತ್ತಿದ್ದ.

ತನ್ನನ್ನು ಈ ಗತಿಗೆ ತಂದ ಶತ್ರುಗಳ ಬೇಟೆಗೆ ಕಾಸು ಬೇಕಲ್ಲ; ಅದಕ್ಕೆ ಕೊರಂಗು ಕೈ ಹಾಕಿದ್ದು ಕಿಡ್ನಾಪ್ ದಂಧೆಗೆ. ಮೊದಲು ವೈಯಾಲಿಕಾವಲ್‌ನ ಸುಂದರೇಶ್ ಎಂಬ ರಿಯಲ್ ಎಸ್ಟೇಟ್ ಖದೀಮನ ಮಗ ರಾಜೇಶ್ ಎಂಬಾತನನ್ನು ಚಿತ್ತೂರಿಗೆ ಎಳೆದೊಯ್ದು ಹತ್ತು ಲಕ್ಷ ಕಿತ್ತ. ನಂತರ ಕೊರಂಗು ಕಣ್ಣಿಗೆ ಬಿದ್ದವನು ಯಲಹಂಕದ ಡಾಬಾಗೌಡ ಉರ್ಫ್ ದೇವರಾಜಗೌಡ. ದೇವನಹಳ್ಳಿ ರಸ್ತೆಯಲ್ಲಿ ಡಾಬಾ ನಡೆಸಿಕೊಂಡೇ ರಿಯಲ್ ಎಸ್ಟೇಟ್ ದಂಧೆಗೂ ಕೈಹಾಕಿದ್ದ ಡಾಬಾಗೌಡನನ್ನು ಮೂರು ದಿನಗಳ ಕಾಲ ಚಿತ್ತೂರಿನಲ್ಲಿ ಕೊರಂಗು ಕೂಡಿಟ್ಟಿದ್ದ. ಎಲ್ಲಿ ತನ್ನ ಪ್ರಾಣಕ್ಕೇ ಕುತ್ತಾಗುತ್ತೋ ಎಂದು ಹೆದರಿದ ಗೌಡ ತನ್ನ ಹೆಂಡತಿಗೆ ಫೋನ್ ಮಾಡಿ ಐವತ್ತು ಲಕ್ಷ ತರಿಸಿಕೊಟ್ಟ.

ಇದಕ್ಕೂ ಮೊದಲೇ ಕೊರಂಗು ಕತ್ರಿಗುಪ್ಪೆಯ ಬಿಲ್ಡರ್ ರಾಮಕೃಷ್ಣ ಎಂಬಾತನ ಮಗ ಸಂತೋಷ್ ಗೌಡನನ್ನು ಎಳೆದೊಯ್ದು ಆತನ ಸ್ಯಾಂಟ್ರೋ ಕಾರು ಕಿತ್ತುಕೊಂಡಿದ್ದ. ಅಷ್ಟಕ್ಕೂ ಸಂತೋಷ್ ಗೌಡನಿಗಾಗಲಿ, ಆತನ ತಂದೆ ರಾಮಕೃಷ್ಣನಿಗಾಗಲಿ ಕೊರಂಗುಗಾಗಲಿ ಯಾವುದೇ ಸಂಬಂಧವಿರಲಿಲ್ಲ. ಮೈ ತುಂಬಾ ಚಿನ್ನ ಹಾಕಿಕೊಂಡು ಯಾರೋ ಹುಡುಗನೊಬ್ಬ ಸ್ಯಾಂಟ್ರೋ ಕಾರಿನಲ್ಲಿ ಸುತ್ತುತ್ತಿದ್ದಾನೆಂದು ಯಾರೋ ಮಾಹಿತಿ ಕೊಟ್ಟಿದ್ದಕ್ಕೇ ಕೊರಂಗು ಗ್ಯಾಂಗ್ ಆತನನ್ನು ಎಳೆದೊಯ್ದು ಕಾರು ಕಿತ್ತುಕೊಂಡಿತ್ತು. ಇದಾಗಿದ್ದು ಇಲ್ಲಿಗೆ ವರ್ಷದ ಹಿಂದೆ.

ವಿಚಿತ್ರವೆಂದರೆ ಹೋದರೆ ಹಾಳಾಗಲಿ ಎಂದು ಸಂತೋಷ್‌ಗೌಡನ ತಂದೆ ಪೊಲೀಸರಿಗೆ ಕಂಪ್ಲೇಂಟನ್ನೇ ಕೊಡಲಿಲ್ಲ. ಕಿತ್ತುಕೊಂಡಿದ್ದ ಕಾರನ್ನು ಯಾರೋ ಖರೀದಿಸುತ್ತೇವೆಂಬಂತೆ ಬಂದರೆ ನಯಾಪೈಸೆ ಪಡೆಯದೇ ಅವರಿಗೂ ಸಹಿ ಹಾಕಿಕೊಟ್ಟ. ಕೊರಂಗು ಬಗ್ಗೆ ಜನರಲ್ಲಿ ಆ ಮಟ್ಟದ ಭೀತಿಯಿತ್ತು!

ಡಾಬಾಗೌಡನನ್ನು ಎಳೆದೊಯ್ದು ಐವತ್ತು ಲಕ್ಷ ಕಿತ್ತ ತಿಂಗಳಿಗೇ ಕೊರಂಗು ಕಣ್ಣಿಗೆ ಬಿದ್ದವನು ಕತ್ರಿಗುಪ್ಪೆಯ ಬಿಲ್ಡರ್ ಸುರೇಶ್ ಬಾಬು. ಈತ ಕೂಡ ಆಂಧ್ರಾ ಮೂಲದ ನೆಲಗಳ್ಳನೇ. ಈತನ ತಂದೆ ರಾಮಯ್ಯ ಯಾರ್‍ಯಾರಿಗೋ ಟೋಪಿ ಹಾಕಿದ್ದರಿಂದ ತನ್ನ ಕಡೆಯವರಿಗೂ ವಂಚನೆಯಾಗಿದೆಯೆಂದು ರೈಲು ಬಿಟ್ಟೇ ಸುರೇಶ್ ಬಾಬುವನ್ನು ಎಳೆದೊಯ್ದ ಎರಡೂವರೆ ಲಕ್ಷ ಕಿತ್ತ.

ಹಣೇಕತ್ತೆಂದರೆ ಡಾಬಾಗೌಡನ ಹೊರತಾಗಿ ಕೊರಂಗು ಎಳೆದೊಯ್ದು ಒತ್ತೆ ಹಣ ಕಿತ್ತಿದ್ದ ಬಹುತೇಕರು ಈ ಬಗ್ಗೆ ಪೊಲೀಸರಿಗೆ ದೂರನ್ನೇ ಕೊಟ್ಟಿರಲಿಲ್ಲ. ತನ್ನನ್ನು ಈ ಗತಿಗೆ ತಂದ ಹೆಬ್ಬೆಟ್ಟು ಮಂಜ, ಮುಲಾಮ, ಸೈಕಲ್ ರವಿ ಯಾರು ಸಿಕ್ಕರೂ ಚಾಂಬ್ ಸ್ಪೋಟಿಸಿ ಖತಂ ಮಾಡುತ್ತೇನೆಂದು ಶಪಥ ಗೈದಿದ್ದ ಕೊರಂಗು ಗಮನಕ್ಕೆ ಬಾರದ ಹಾಗೇ ಬುಲೆಟ್ ರವಿ ನಿಕಾಲಿಯಾಗಿದ್ದ. ಸುನೀಲ-ಒಂಟಿ ಗ್ಯಾಂಗ್‌ಗಷ್ಟೇ ಆ ಥರದ ಹೈಟೆಕ್ ಸ್ಕೆಚ್ಚೊಂದನ್ನು ಹಾಕುವ ತಾಕತ್ತಿತ್ತೇ ಹೊರತು ಗೆಡ್ಡನಾಗಲಿಗಾಗಲಿ, ಆತನ ಬಂಟ ಮತ್ತು ಎಮ್ಮೆಲ್ಲೇ ವಿಶ್ವನಾಥ್ ಛೇಲಾ ಅಳ್ಳಾಲಸಂದ್ರದ ಶೇಖರ್‌ಗಾಗಲಿ ಅದು ಸಾಧ್ಯವೇ ಇರಲಿಲ್ಲ.

ಇದು ಗೊತ್ತಿದ್ದೂ ಯಲಹಂಕ ಪೊಲೀಸರು ಗೆಡ್ಡನ ಬೆನ್ನಿಗೆ ಬಿದ್ದು ಹಿಡಿದರು. ಗೆಡ್ಡನ ಜೊತೆ ವಿನಾಕಾರಣ ಸುತ್ತಲು ಹೋಗಿ ಸಿಕ್ಕಿಬಿದ್ದವರು ಮಾರೇನಹಳ್ಳಿಯ ಟೀಸಿ ರಾಜ. ಆದರೆ ಕೊರಂಗು ಕಾಕತಾಳೀಯವಾಗಿ ತಮಿಳುನಾಡಿನಲ್ಲಿ ಪೊಲೀಸ್ ಬಲೆಗೆ ಬಿದ್ದು ಯಡವಟ್ಟು ಮಾಡಿಕೊಂಡ. ಆತನ ಹೆಂಡತಿಯ ತಮ್ಮ ಚರಣ್, ಬದ್ರಿ ಮತ್ತು ರುದ್ರ ಎಂಬುವವರ ಜೊತೆ ಸೆರೆಯಾದ ಕೊರಂಗುವನ್ನು ಎಳೆತಂದ ಎಸಿಪಿ ಹಾದಿಮನಿಗೆ ಅಚ್ಚರಿಯಾಗುವಂತೆ ಕೊರಂಗು ತನ್ನ ಕಿಡ್ನಾಪ್ ಗಾಥೆಯನ್ನು ಬಾಯಿಬಿಟ್ಟ.

ಕಿಡ್ನಾಪಾಗಿದ್ದ ಪ್ರತಿಯೊಬ್ಬರನ್ನೂ ಕರೆಸಿ ವಿಚಾರಿಸಿದ ಹಾದಿಮನಿ 'ವಸೂಲಾದ ದುಡ್ಡೇನು ಮಾಡಿದೆ?' ಎಂದು ಕೊರಂಗು ಬಾಯಿ ಬಿಡಿಸಿದ್ದಾರೆ. ಮೊದಲು ತಾನು ಚಿತ್ತೂರಿನ ಹೊರವಲಯದಲ್ಲೊಂದು ಬಂಗಲೆ ಕಟ್ಟಿಸಿದ್ದೇನೆಂದು ಕೊರಂಗು ಬಾಯಿಬಿಟ್ಟ.

ಚಿತ್ತೂರು ಜಿಲ್ಲೆ ಬಂಗಾರಪಾಳ್ಯ ತಾಲ್ಲೂಕು ತಮ್ಮಗಾನಪಳ್ಳಿಯಲ್ಲಿ ಕೊರಂಗು ಬಂಗಲೆಯಿದ್ದದ್ದೂ ಸತ್ಯ. ಅದು ಐವತ್ತು ಲಕ್ಷದ ಬಂಗಲೆ. ಮಿಕ್ಕಂತೆ ಬೆಂಗಳೂರಿನ ಬೇರೆ ಬೇರೆ ಏರಿಯಾದ ಮೀಟರ್ ಬಡ್ಡಿ ಆಸಾಮಿಗಳ ಬಳಿ ಕೊರಂಗು ಎಂಟು ಲಕ್ಷವನ್ನು ಕೊಟ್ಟು ಬಡ್ಡಿಗೆ ಬಿಟ್ಟಿದ್ದ. ಸದ್ಯ ಆತ ಬಾಯಿಬಿಟ್ಟಿದ್ದು ಇಷ್ಟು ಮಾತ್ರ. ಇನ್ನೆಷ್ಟು ಕಿಡ್ನಾಪ್ ಮಾಡಿದ್ದನೋ, ಏನೆಲ್ಲಾ ಆಸ್ತಿ ಖರೀದಿಸಿದ್ದನೋ ಆತ ಬಾಯಿಬಿಟ್ಟರೆ ತಾನೆ?

ಕೊರಂಗು ಬಂಗಲೆಯನ್ನು ಜಪ್ತಿ ಮಾಡಿಕೊಂಡು ಪೀಡಿತರಿಗೆ ದುಡ್ಡು ತೀರಿಸುವಂತೆ ಕಮೀಷನರ್ ಬಿದರಿ ಆದೇಶಿಸಿದ್ದಾರೆ. ಎಸಿಪಿ ಹಾದಿಮನಿ ತಂಡ ಚಿತ್ತೂರಿನಲ್ಲಿ ಸೊತ್ತಿನ ದಾಖಲೆ ಕಲೆಹಾಕಿ ಮುಟ್ಟುಗೋಲಿಗೆ ಕ್ರಮ ಜರುಗಿಸುತ್ತಿದ್ದಾರೆ. ಬಡ್ಡಿಗೆ ಬಿಟ್ಟಿದ್ದ ಆಸಾಮಿಗಳಿಂದ ದುಡ್ಡು ಕಲೆ ಹಾಕುವುದು ಕಷ್ಟವೇನಲ್ಲ. ಆದರೆ ಐವತ್ತು ಲಕ್ಷದ ಬಂಗಲೆಯನ್ನು ಹೇಗಂಥ ಜಪ್ತಿ ಮಾಡಲು ಸಾಧ್ಯ? ಅದೊಂದು ಸುದೀರ್ಘ ಕಾನೂನು ಪ್ರಕ್ರಿಯೆ.

ಒಂದಂತೂ ಸತ್ಯ. ಕಿಡ್ನಾಪ್ ಮಾಡಿ ಕಿತ್ತ ಪಾಪದ ದುಡ್ಡನ್ನು ಕೊರಂಗು ಇವತ್ತಲ್ಲ ನಾಳೆಯಾದರೂ ಕಕ್ಕಲೇಬೇಕು. ಈ ವಯಸ್ಸಲ್ಲಿ ಏನು ಕರ್ಮವಲ್ಲವೆ?

ಇದು ಬೇಕಿತ್ತಾ?

ರಾ. ಸೋಮನಾಥ್


ಟಿರು ಬಿದ್ದರೂ ಯಾಮಾರದ ಮುಲಾಮ

ತ್ತ ಕೊರಂಗು ಬೋನಿಗೆ ಬಿದ್ದಿದ್ದೇ ತಡ, ಸಿಸಿಬಿಯ ಮತ್ತೊಂದು ತಂಡ ಆತನ-ಕಡುವೈರಿ ಮುಲಾಮನಿಗೆ ಬೀಸಿದೆ. ಕೊರಂಗು ಹೇಗೆ ಮುಲಾಮನ ಬೇಟೆಗೆ ನಿಂತಿದ್ದನೋ ಹಾಗೇ ಮುಲಾಮನ ಗ್ಯಾಂಗ್ ಕೊರಂಗು ಸಲು ಹೊಂಚಿ ಕುಳಿತಿತ್ತು. ಕೊರಂಗು ಚಿತ್ತೂರಿನಲ್ಲಿ ಬಂಗಲೆ ಕಟ್ಟಿಸಿದ ಹಾಗೆ ಮುಲಾಮ ರಾಜರಾಜೇಶ್ವರಿನಗರದಲ್ಲಿ ಊವರೆ ಕೋಟಿಯ ಬಂಗಲೆ ಎಬ್ಬಿಸಿದ್ದ.

ಕೊರಂಗು ಕಿಡ್ನಾಪ್ ಮಾಡಿ ಗಳಿಸಿದ್ದಕ್ಕಿಂತಲೂ ದೊಡ್ಡ ಮೊತ್ತವನ್ನು ಮುಲಾಮ ಲ್ಯಾಂಡ್ ಡೀಲಿನಿಂದ ಯಿಸಿದ್ದ. ಸಾಲದ್ದಕ್ಕೆ ತನ್ನ ರಕ್ಷಣೆಗೆಂದು ಉತ್ತರಪ್ರದೇಶದಿಂದ ಗನ್‌ಮನ್‌ಗಳನ್ನೂ ನೇಮಿಸಿಕೊಂಡ. ಈಗ ಮನ ಇಡೀ ಗ್ಯಾಂಗ್ ಸಿಸಿಬಿಯ ಲಾಕಪ್ಪು ಸೇರಿದೆ. ರಾಜರಾಜೇಶ್ವರಿನಗರದ ಲೋಕಿ, ಲಗ್ಗೆರೆಯ ಮಧು, ಬಾವಿಯ ರವಿ, ಪ್ಯಾಲೇಸ್ ಗುಟ್ಟಳ್ಳಿಯ ಮಹಿ ಜೊತೆಗೆ ಗನ್‌ಮನ್‌ಗಳಾದ ಯುಪಿಯ ಅಶೋಕ್‌ಕುಮಾರ್ ದಯಾನಂದ್ ದುಬೆ ಎಂಬಿಬ್ಬರು ಹಿಂದಿವಾಲಾಗಳೂ ಜೈಲುಪಾಲಾಗಿದ್ದಾರೆ. ಸಿಕ್ಕಿಬಿದ್ದವರ ಪೈಕಿ ಲಗ್ಗೆರೆಯ ಹೆಬ್ಬೆಟ್ಟು ಮಂಜನ ಜೊತೆ ಹಿರಿಯೂರಿನ ದಾಬಾದಲ್ಲಿ ಕೊರಂಗು ಮೇಲೆ ದಾಳಿ ನಡೆಸಿದ್ದ!

ಇಷ್ಟಾಗ್ಯೂ ಮುಲಾಮ ಮಾತ್ರ ಈತನಕ ಸಿಕ್ಕಿಲ್ಲ. ಆತನ ಜೊತೆ ಗುಂಡಾ, ಪ್ರಸನ್ನ, ವಿಜಯನಗರದ ಂದ್ರ ಮುಂತಾದ ರಣಪಾತಕಿಗಳ ಹಿಂಡೇ ಇದೆ. ಮುಲಾಮನೇ ಸಿಗುತ್ತಾನೋ ಅದಕ್ಕೂ ಮುನ್ನ ಆತನ ಲೆ ಜಪ್ತಾಗುತ್ತೋ ಬಲ್ಲವರ್‍ಯಾರು? ●

ಬುರ್ಖಾದೊಳಗಿನ ಪ್ರತಿಭೆ



ಸ್ಥಳೀಯ ಮಟ್ಟದಲ್ಲಿರುವ ಕಲಾ ಪ್ರತಿಭೆಗಳನ್ನು ಸಿ ಪ್ರೋತ್ಸಾಹಿಸುವ ದೃಷ್ಟಿಯಿಂದ ಇತ್ತೀಚೆಗೆ ಮತ್ತು ಸಂಸ್ಕೃತಿ ಇಲಾಖೆಯು ಸ್ಥಳೀಯ ಮಟ್ಟಗಳಲ್ಲಿ ರ್ಧೆಯೊಂದನ್ನು ಏರ್ಪಡಿಸಿತ್ತು. ಈ ಸ್ಪರ್ಧೆಯಲ್ಲಿ ಕಲಾಪ್ರದರ್ಶನದ ಮೂಲಕ ಎಲ್ಲರ ಗಮನ ಕಲಾವಿದರನ್ನು ರಾಜ್ಯ ಮಟ್ಟದ ಸ್ಪರ್ಧೆಗಾಗಿ ಮಾಡಲು ನಿರ್ಧರಿಸಲಾಗಿತ್ತು. ಇಂತಹ ಒಂದು ಕಾರ್ಯಕ್ರಮ ಮೊನ್ನೆ ಶಿವಮೊಗ್ಗ ನಗರದ ಪು ರಂಗಮಂದಿರದಲ್ಲಿ ನಡೆಯಿತು.

ಜಿನ ಮೇಲಿದ್ದವರು ಕಲಾವಿದರ ಹೆಸರನ್ನು ತ್ತಿದ್ದಂತೆಯೇ ಒಬ್ಬೊಬ್ಬರಾಗಿ ಬಂದು ತಮ್ಮ ದರ್ಶನ ಮಾಡುತ್ತಿದ್ದರು. ಅದೇ ರೀತಿಯಲ್ಲಿ ತನ್ನ ಕೂಗುತ್ತಿದ್ದಂತೆಯೇ ಬುರ್ಖಾ ಹಾಕಿಕೊಂಡಿದ್ದ ಮಹಿಳೆಯೊಬ್ಬಳು ಕಂಕುಳಲ್ಲಿ ತನ್ನ ಪುಟ್ಟ ನ್ನು ಅಪ್ಪಿಕೊಂಡು ಸ್ಟೇಜಿನ ಮೇಲೇರಿದಳು. ಇದ್ದ ತನ್ನ ತಾಯಿಗೆ ಮಗುವನ್ನು ಕೊಟ್ಟು, ನೋಡುತ್ತಿದ್ದಂತೆಯೇ ಚಿನ್ನಿಗೆ ಕೈಹಾಕಿ ಚರ್ಮ ತೆ ಬುರ್ಖಾವನ್ನು ಮೇಲೆತ್ತಿ ತೆಗೆದು ಪಕ್ಕದ ಮೇಲಿಟ್ಟು ಸ್ಟೇಜಿನ ಮಧ್ಯಭಾಗಕ್ಕೆ ಬಂದಳು. ಅವಾಕ್ಕಾಗಿ ನೋಡುತ್ತಾ ಕುಳಿತಿದ್ದೆವು. ರಿಚಕರು ನಮ್ಮಷ್ಟೇ ಬೆರಗಿನಿಂದ "ಯಾವ ಪ್ರಸಂಗ ಸುತ್ತೀ?" ಎಂದು ಕೇಳಿದ್ದಕ್ಕೆ, ಆಕೆ ಥಟಕ್ಕನೆ "ದುರ್ಯೋಧನ-ಅಶ್ವತ್ಥಾಮ ಪ್ರಸಂಗ" ಎಂದು ಉತ್ತರಿಸಿದಾಗಲಂತೂ ಎಲ್ಲರಿಗೂ ಬೆರಗು.

ಮುಸ್ಲಿಂ ಮಹಿಳೆಯೊಬ್ಬಳು ಹಿಂದೂ ಧರ್ಮದ ಪ್ರಮುಖ ಗ್ರಂಥಗಳಲ್ಲೊಂದಾಗಿರುವ ಮಹಾಭಾರತದ ಪ್ರಸಂಗವೊಂದನ್ನು ಮಾಡುತ್ತಾಳೆಂಬುದೇ ಅದಕ್ಕೆ ಮೊದಲ ಕಾರಣವಾಗಿತ್ತು. ಎರಡನೆಯದಾಗಿ ಮುಸ್ಲಿಮರೆಂದರೆ ಅವರಿಗೆ ಸರಿಯಾಗಿ ಕನ್ನಡ ಮಾತನಾಡಲು ಬರುವುದಿಲ್ಲ ಎಂಬ ನಂಬಿಕೆಯಿರುವ ಜನರೇ ನೆರೆದಿದ್ದರಿಂದ ಮುಸ್ಲಿಂ ಮಹಿಳೆಯೊಬ್ಬಳು ಹಳಗನ್ನಡದಲ್ಲಿರುವ ಆ ಪ್ರಸಂಗವನ್ನು ಹೇಗೆ ಮಾತನಾಡುತ್ತಾಳೆ, ಹೇಗೆ ಅಭಿನಯಿಸುತ್ತಾಳೆ ಎಂಬುದನ್ನೂ ಕಾತರದಿಂದ ನೋಡಲು ಇಚ್ಛಿಸಿದ್ದರು.

ಆಯ್ಕೆ ಮಾಡಿಕೊಂಡಿದ್ದ ದುರ್ಯೋಧನ-ಅಶ್ವತ್ಥಾಮ ಪ್ರಸಂಗದ ಏಕಪಾತ್ರಾಭಿನಯವನ್ನು ಪ್ರಾರಂಭಿಸುವುದಕ್ಕೆ ಮುನ್ನ ಆಕೆ ತುಂಬಿದ ಸಭೆಯನ್ನೊಮ್ಮೆ ಕಣ್ಣು ತುಂಬ ನೋಡಿದಳು. ನಂತರ ಸ್ಟೇಜಿನ ಮೇಲೆ ತೊಡೆಮುರಿದು ಕುಳಿತಿರುವ ದುರ್ಯೋಧನನಂತೆ ಕುಳಿತುಕೊಳ್ಳುವ ಮೂಲಕ ಬಹಳ ವಿಶ್ವಾಸದಿಂದ ಅಭಿನಯ ಪ್ರಾರಂಭಿಸಿದಳು. ಮೊದಲು ದುರ್ಯೋಧನನ ಮಾತುಗಳನ್ನು ಬಹಳ ಭಾವಪೂರ್ಣ ಅಭಿನಯದ ಮೂಲಕ ಹೇಳಿದಳು. ನಂತರ ಅಲ್ಲಿಂದ ಎದ್ದು ಕೊಂಚ ದೂರ ನಿಂತು ಅಶ್ವತ್ಥಾಮನ ಮಾತುಗಳನ್ನು ಅತ್ಯದ್ಭುತ ಅಭಿನಯದ ಮೂಲಕ ಪ್ರದರ್ಶಿಸಿದಳು. ದುರ್ಯೋಧನನ ಮನವಿಯಂತೆ ಪಾಂಡವರ ತಲೆಗಳನ್ನು ಕತ್ತರಿಸಿಕೊಂಡು ಬಂದು ದುರ್ಯೋಧನನಿಗೆ ತೋರಿಸುವಂತೆ ನಟಿಸಿದಳು. ಆ ತಲೆಗಳನ್ನು ನೋಡಿದ ದುರ್ಯೋಧನ ಅವು ಪಾಂಡವರ ತಲೆಗಳಲ್ಲ, ಉಪಪಾಂಡವರ ತಲೆಗಳು ಎಂಬುದು ಗೊತ್ತಾಗುತ್ತಿದ್ದಂತೆಯೇ ನೋವಿನಿಂದ 'ಶಿಶು ಹತ್ಯೆ ಮಾಡಿದೆಯಲ್ಲೋ ಅಶ್ವತ್ಥಾಮ...' ಎಂದು ಚೀರಿಕೊಂಡ ದೃಶ್ಯವನ್ನು ಪ್ರದರ್ಶಿಸಿದಳು. ಅಶ್ವತ್ಥಾಮನ ಪಾಪಕೃತ್ಯದ ಗೋಳಿನ ನಟನೆ ಆಕೆಯ ಕಣ್ಣುಗಳಲ್ಲಿ ಮಾತ್ರವಲ್ಲ ಇಡೀ ಸಭಿಕರ ಕಣ್ಣುಗಳಲ್ಲಿ ನೀರು ತರಿಸಿದವು. ಅಂತಿಮವಾಗಿ ಅಶ್ವತ್ಥಾಮ ಕಠಾರಿಯಿಂದ ಹೊಟ್ಟೆ ಸೀಳಿಕೊಂಡು ಸಾಯುವ ಮೂಲಕ ತನ್ನ ಪಾಪಕ್ಕೆ ತಾನೇ ಶಿಕ್ಷೆ ವಿಧಿಸಿಕೊಳ್ಳುವುದರೊಂದಿಗೆ ಇಡೀ ಪ್ರಸಂಗ ಮುಕ್ತಾಯಗೊಂಡಿತು. ಅಶ್ವತ್ಥಾಮನ ಪಾತ್ರದಲ್ಲಿ ಸತ್ತಂತೆ ಮಲಗಿದ್ದ ಆ ಮಹಿಳೆ ಕೊಂಚ ಹೊತ್ತು ಹಾಗೆಯೇ ಮಲಗಿದ್ದಳು. ರಂಗಮಂದಿರದ ಕೊನೆ ಸಾಲಿನಲ್ಲಿ ನಿಂತಿದ್ದ ಆಕೆಯ ತಾಯಿಯ ಹತ್ತಿರವಿದ್ದ ಆಕೆಯ ಮಗು ಕೂಡ ಈ ಭಾವುಕ ದೃಶ್ಯಕ್ಕೆ ಕಾಕತಾಳೀಯವೆಂಬಂತೆ ಅಳುತ್ತಿತ್ತು!

ಇಡೀ ರಂಗಮಂದಿರ ಕಿಕ್ಕಿರಿದು ತುಂಬಿದ್ದರೂ ಪಿನ್ ಡ್ರಾಪ್ ಸೈಲೆನ್ಸ್. ಎಲ್ಲರ ಕಣ್ಣಂಚಿನಲ್ಲಿ ಕಣ್ಣೀರ ಹನಿಗಳು ಉದುರುತ್ತಿದ್ದವು. ನಾವೆಲ್ಲರೂ ಕೆಲ ನಿಮಿಷಗಳ ಕಾಲ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿರಲಿಲ್ಲ, ಕುರುಕ್ಷೇತ್ರ ಮಹಾ ಕದನದ ಅಂತಿಮ ಹಂತವನ್ನು ಕಣ್ಣಾರೆ ನೋಡುತ್ತಿದ್ದೆವು. ಅಭಿನಯ ಮುಗಿಸಿ ಮೇಲೆದ್ದಾಗ ಆಕೆಗೆ ಹೇಗೆ ಅಭಿನಂದನೆ ಸಲ್ಲಿಸಬೇಕೆಂಬುದೇ ನಮಗೆ ಅರ್ಥವಾಗಲಿಲ್ಲ. ನಮ್ಮ ನಮ್ಮ ತುಂಬಿದ ಕಣ್ಣುಗಳೇ ಆಕೆಗೆ ಅಭಿನಂದನೆ ಸಲ್ಲಿಸಿಯಾಗಿತ್ತು. ಯಾರ ಬಾಯಿಂದಲೂ ಮಾತು ಹೊರಡ ಲಿಲ್ಲ. ಆಕೆಯ ಸ್ಪಷ್ಟ ಹಳಗನ್ನಡ ಉಚ್ಚಾರಣೆ, ಅಭೂತ ಪೂರ್ವ ಅಭಿನಯ ಎಂಥ ನುರಿತ ಕಲಾವಿದರನ್ನೂ ನಾಚಿಸುವಂತಿದ್ದರಿಂದ ನಿರೀಕ್ಷಿತವಾಗಿ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾದಳು.

ಅಂದಹಾಗೆ ಆಕೆ ವಿವಾಹಿತ ಮಹಿಳೆ. ಆಕೆಯ ಗಂಡ ಒಬ್ಬ ಕೂಲಿ ಕಾರ್ಮಿಕ. ತನ್ನ ಹೆಂಡತಿಯ ಪ್ರತಿಭೆಯ ಬಗ್ಗೆ ಆತನಿಗೂ ಹೆಮ್ಮೆಯಿದ್ದುದರಿಂದ ಪ್ರೋತ್ಸಾಹ ಕೊಟ್ಟು ರಂಗಮಂದಿರಕ್ಕೆ ಕರೆದುಕೊಂಡು ಬಂದಿದ್ದ. ಆಕೆಯ ಅದ್ಭುತ ಅಭಿನಯ, ಸುಲಲಿತ ಹಳಗನ್ನಡ ಉಚ್ಚಾರ, ಆಯ್ಕೆ ಮಾಡಿಕೊಂಡ ಥೀಮ್ – ಎಲ್ಲವೂ ಮುಸ್ಲಿಮರ ಬಗೆಗಿರುವ ಪೂರ್ವಾಗ್ರಹವನ್ನು ಕನಿಷ್ಠ ರಂಗಮಂದಿರದೊಳಗಿದ್ದ ಜನರಿಂದಲಾದರೂ ದೂರ ಮಾಡಿದವು ಎಂದೇ ಭಾವಿಸುತ್ತೇನೆ.

● ಬಿ.ಚಿಂ.

ಆಂಧ್ರದ ಮುರಂತನಾಯಕ ವೈ.ಎಸ್.ಆರ್. ಉತ್ತರಾಧಿಕಾರಿಯಾಗಿ ಮಗ ಜಗನ್‌ಮೋಹನ ರೆಡ್ಡಿಯನ್ನು ತರುವಂತೆ ಅತ್ತ ಒತ್ತಡದ ಮೇಲೆ ಒತ್ತಡ ಶುರುವಾಗುವುದಕ್ಕೂ ಇತ್ತ ಬೆಂಗಳೂರಿನ ರಿಯಲ್ ಎಸ್ಟೇಟ್ ಮಾಫಿಯಾದೊಳಕ್ಕೆ ಅಗೋಚರ ಲೆಕ್ಕಾಚಾರವೊಂದು ಭುಗಿಲೇಳುವುದಕ್ಕೂ ಸಂಬಂಧವಿದೆ.

ಜಗನ್ ಆಂಧ್ರದ ಮುಖ್ಯಮಂತ್ರಿಯಾದನೆಂದರೆ ಬಿಡದಿ ಸಮೀಪದ ವಂಡರ್ ಲಾ ಹಿಂದಿರುವ ಕಂದಾಯ ಮಂತ್ರಿ ಕರುಣಾಕರ ರೆಡ್ಡಿಯ ಆರುನೂರು ಎಕರೆಯ ರೆಸಾರ್ಟಿನ ಪ್ರಾಜೆಕ್ಟು ಕುದುರುತ್ತಾ ಅಥವಾ ಕಣ್ಣುಮುಚ್ಚುತ್ತಾ?

ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತ ಜಗನ್ ಖರೀದಿಸಿಟ್ಟಿದ್ದ ಎರಡು ಸಾವಿರ ಎಕರೆಗಳಷ್ಟು ಬೇನಾಮಿ ಲ್ಯಾಂಡಿನ ಗತಿಯೇನು?


ಸಾಕ್ಷಿ ಟೀವಿಗೆಂದು ಚಿಕ್ಕಜಾಲದ ಬಳಿ ಜಗನ್ ಮತ್ತು ಜನಾರ್ದನ ರೆಡ್ಡಿ ಸೇರಿ ಅಡ್ವಾನ್ಸ್ ಮಾಡಿದ

ಎರಡು ಸಹಸ್ರ ಕೋಟಿಯ ಒಡೆಯ?

ಇನ್ನೂರೋ ಎಕರೆಗಳ ಲೆಕ್ಕದಲ್ಲಿ ಭೂಮಿ ಖರೀದಿಸುತ್ತಿದ್ದಾರೆಂದರೆ ಅದಕ್ಕೆ ಜಗನ್‌ಮೋಹನ ರೆಡ್ಡಿಯೇ ದುಡ್ಡು ಹಾಕುತ್ತಿದ್ದಾನೆಂಬುದು ಬೆಂಗಳೂರಿನ ರಿಯಲ್ ಎಸ್ಟೇಟ್ ದೊರೆಗಳ ಅಚಲ ನಂಬಿಕೆ.

ಅದಕ್ಕೆ ತಕ್ಕಂತೆ ಜಗನ್ ಕರ್ನಾಟದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ತನ್ನ ರಿಯಲ್ ಎಸ್ಟೇಟ್ ಸಾಮ್ರಾಜ್ಯವನ್ನು ವಿಸ್ತರಿಸುತ್ತಲೇ ಬಂದ. ಬೆಂಗಳೂರಿಗೂ ತಂದೆ ರಾಜಶೇಖರ ರೆಡ್ಡಿಗೂ ಹೇಗೆ ಪುರಾತನ ನಂಟಿತ್ತೋ ಅದಕ್ಕಿಂತಲೂ ದೊಡ್ಡ ಮಟ್ಟದಲ್ಲಿ ಬೆಂಗಳೂರಿನಲ್ಲಿ ಬೇರುಬಿಟ್ಟವನು ಜಗನ್. 1998 ರಿಂದಲೇ ಜಗನ್ ಬೆಂಗಳೂರಿನ ಕಾಯಂ ನಿವಾಸಿ. ಅಂದರೆ ತಂದೆ ಮುಖ್ಯಮಂತ್ರಿಯಾಗುವುದಕ್ಕೂ ಮೊದಲೇ ಎಚ್‌ಎಸ್‌ಆರ್ ಲೇಔಟಿನ ಬಿಡಿಎ ಕಾಂಪ್ಲೆಕ್ಸ್ ಪಕ್ಕದ ನಾಲ್ಕನೇ ಕ್ರಾಸಿನಲ್ಲಿ ಜಗನ್ ವಾಸ ಶುರುವಾಗಿತ್ತು.

ನಕ್ಸಲ್ ಬೆದರಿಕೆಯಿಂದು ವೈಎಸ್‌ಆರ್ ತನ್ನ


ಜಗನ್‌ಮೋಹನ್ ರೆಡ್ಡಿ

ನಕ್ಸಲ್ ಬೆದರಿಕೆಯಿಂದು ವೈಎಸ್‌ಆರ್ ತ
ಮಗನನ್ನು ಬೆಂಗಳೂರಿನಲ್ಲಿ ನೆಲೆಗೊಳಿಸಿದ
ರೆಂದು ಜನ ಭಾವಿಸಿದ್ದರೂ ಜಗನ್
ಬೆಂಗಳೂರು ಅಜ್ಞಾತವಾಸಕ್ಕೆ ಬೇರೆಯದ
ಕಾರಣವಿತ್ತು. ಅದು ಪರಿಟಾಲ ರವಿ ಗ್ಯಾಂಗಿ
ಭೀತಿ. ಆಂಧ್ರದ ರೆಡ್ಡಿ-ಕಮ್ಮಾ ವೈಷಮ್ಯ
ಅಂಥದ್ದೊಂದು ಇತಿಹಾಸವಿದೆ. ಹೈದರ
ಬಾದಿನ ನಿಜಾಮ್ ಕಾಲೇಜಿಗೆ ಕಾಟಾಚಾ
ಕ್ಕಷ್ಟೇ ಸೇರಿಕೊಂಡ ಜಗನ್, ಸದ್ದಿಲ್ಲದ
ಬೆಂಗಳೂರು ಸೇರಿಕೊಂಡಿದ್ದು ಸಂಪತ್ತಿನ ಸು
ಕ್ಷತೆಗೆಂದೇ ಎಂಬುದು ಈಗ ಬಯಲಾಗುತ್ತಿದ

ಜಗನ್‌ನ ಬೆಂಗಳೂರು ಸಾಮ್ರಾಜ್ಯ

■ ರಾ. ಸೋಮನಾಥ್

ಇನ್ನೂರೆಕರೆಯ ಪ್ರಾಜೆಕ್ಟ್ ಮುಂದುವರೆಯುತ್ತಾ?

ಯಲಹಂಕ ಎಮ್ಮೆಲ್ಲೇ ವಿಶ್ವನಾಥ್ ಕೈಹಾಕಿದ ಹೆಸರುಘಟ್ಟದ ನೂರೈವತ್ತು ಎಕರೆಯ ಅರಣ್ಯಭೂಮಿಗೆ ಕೈಚಾಚಿದ ಜಗನ್ ಬೇನಾಮಿ ಪಿಚ್ಚಿರೆಡ್ಡಿ ವ್ಯವಹಾರ ಕುದುರಿಸುತ್ತಾನಾ ಅಥವಾ ಕೈ ಎತ್ತುತ್ತಾನಾ?


ಅದೇ ಹೆಸರುಘಟ್ಟಕ್ಕೆ ಹೊಂದಿಕೊಂಡಂತೆ ಉನ್ನತ ಶಿಕ್ಷಣ ಮಂತ್ರಿ ಅರವಿಂದ ಲಿಂಬಾವಳಿ ದೋಚುತ್ತಿರುವ ಐನೂರೆಕರೆಯ ಸರ್ಕಾರಿ ಭೂಮಿಗೆ ಗಿರಾಕಿ ಹುಟ್ಟುತ್ತಾ ಅಥವಾ ಕೈಕಚ್ಚುತ್ತಾ?

-ಹೀಗೆ ಶುರುವಾದ ಬೆಂಗಳೂರಿನ ನೆಲಗಳ್ಳರು, ರಿಯಲ್ ಎಸ್ಟೇಟ್ ಖದೀಮರ ಲೆಕ್ಕಾಚಾರಕ್ಕೆಲ್ಲ ಉತ್ತರ ಸಿಗಬೇಕೆಂದರೆ ಅದು ಆಂಧ್ರದ ಮುಂದಿನ ಮುಖ್ಯಮಂತ್ರಿ ಯಾರಾಗುತ್ತಾರೆಂಬುದು ನಿಕ್ಕಿಯಾಗಬೇಕು. ಈತನಕ ಆಂಧ್ರದ ಮುಖ್ಯಮಂತ್ರಿ ವೈ.ಎಸ್.ಆರ್.ರ ಬೆಂಗಳೂರಿನ ಸಾಮ್ರಾಜ್ಯವನ್ನು ನಿಭಾಯಿಸುತ್ತಿದ್ದದ್ದು ಮಗ ಜಗನ್ ಮೋಹನ್ ರೆಡ್ಡಿ. ಜಗನ್ ಓದಿದ್ದು ಬೆಂಗಳೂರಿನ ಸೆಂಟ್ ಜೋಸೆಫ್ ಕಾಲೇಜಿನಲ್ಲಿ, ಎಲ್ಲಿ ಆಂಧ್ರದ ವಿರೋಧಿಗಳ ಕೆಂಗಣ್ಣು ತನ್ನ ಅಗಣಿತ ಆಸ್ತಿಪಾಸ್ತಿಗಳ ಮೇಲೆ ಬಿದ್ದಿತೋ ಎಂಬ ಅಳುಕಿಗೆ ಬಿದ್ದ ವೈ.ಎಸ್.ಆರ್. ಮಗ ಜಗನ್‌ನನ್ನು ಬೆಂಗಳೂರಿನ ಕಾಯಂ ನಿವಾಸಿಯಾಗಿ ಬೆಳೆಸಿದ್ದು ಒಂದೆಡೆಯಾದರೆ ಮತ್ತೊಂದೆಡೆ ಬೆಂಗಳೂರಿನ ರಿಯಲ್ ಎಸ್ಟೇಟ್ ಮಾಫಿಯಾದಲ್ಲಿ ಜಗನ್ ಹೆಸರಿಗೆ ಬೇರೆಯದೇ ಬೆಲೆಯಿತ್ತು.

ಹೇಳಹೆಸರಿಲ್ಲದ ಆಂಧ್ರದ ರೆಡ್ಡಿಗಳು ಬೆಂಗಳೂರು ಸುತ್ತಮುತ್ತಲ ನೂರಾರು ಎಕರೆ ಭೂಮಿಯನ್ನು ಕೇಳಿದ ರೇಟಿಗೆ ಕೊಂಡುಕೊಳ್ಳುತ್ತಿದ್ದಾರೆಂದರೆ ಅದರ ಹಿಂದೆ ಜಗನ್ ಇದ್ದೇ ಇರುತ್ತಾನೆಂಬುದು ಬೆಂಗಳೂರು ರಿಯಲ್ ಎಸ್ಟೇಟ್ ದಂಧೆಯ ರಹಸ್ಯ ನಂಬಿಕೆಯಾಗಿತ್ತು, ಪಿಚ್ಚಿರೆಡ್ಡಿ, ಕುಮಾರಸ್ವಾಮಿ ರೆಡ್ಡಿ, ಭಾಸ್ಕರ ರೆಡ್ಡಿ, ಮುನಿಸ್ವಾಮಿ ರೆಡ್ಡಿ, ಮೋಹನ ರೆಡ್ಡಿ, ರಾಜಾ ರೆಡ್ಡಿ - ಹೀಗೆ ಯಾರೆಲ್ಲ ಆಂಧ್ರದ ರೆಡ್ಡಿಗಳು ದೇವನಹಳ್ಳಿ ಮತ್ತು ಹೊಸೂರು ರಸ್ತೆ ಸುತ್ತಮುತ್ತ ನೂರೋ

ಮಗನನ್ನು ಬೆಂಗಳೂರಿನಲ್ಲಿ ನೆಲೆಗೊಳಿಸಿದ್ದಾರೆಂದು ಜನ ಭಾವಿಸಿದ್ದರೂ ಜಗನ್‌ನ ಬೆಂಗಳೂರು ಅಜ್ಞಾತವಾಸಕ್ಕೆ ಬೇರೆಯದೇ ಕಾರಣವಿತ್ತು, ಅದು ಪರಿಟಾಲ ರವಿ ಗ್ಯಾಂಗಿನ ಭೀತಿ. ಆಂಧ್ರದ ರೆಡ್ಡಿ-ಕಮ್ಮಾ ವೈಷಮ್ಯಕ್ಕೆ ಅಂಥದ್ದೊಂದು ಇತಿಹಾಸವಿದೆ. ಹೈದರಾಬಾದಿನ ನಿಜಾಮ್ ಕಾಲೇಜಿಗೆ ಕಾಟಾಚಾರಕ್ಕಷ್ಟೇ ಸೇರಿಕೊಂಡ ಜಗನ್ ಸದ್ದಿಲ್ಲದೇ ಬೆಂಗಳೂರು ಸೇರಿಕೊಂಡಿದ್ದು ಸಂಪತ್ತಿನ ಸುರಕ್ಷತೆಗೆಂದೇ ಎಂಬುದು ಈಗ ಬಯಲಾಗುತ್ತಿದೆ.

ಪುಲಿವೆಂದಲದ ಡಾ. ಗಂಗಿರೆಡ್ಡಿಯ ಮಗಳು ಭಾರತಿಯನ್ನು ಮದುವೆಯಾಗಿ ಬೆಂಗಳೂರಿಗೆ ಬಂದ ಜಗನ್ ಎಚ್‌ಎಸ್‌ಆರ್ ಲೇಔಟಿನಲ್ಲಿ ದೊಡ್ಡದೊಂದು ಬಂಗಲೆ ಖರೀದಿಸಿದ. ತಂದೆ ವೈಎಸ್‌ಆರ್ ಮುಖ್ಯಮಂತ್ರಿಯಾಗುತ್ತಿದ್ದಂತೆ ಪತ್ನಿಯ ಹೆಸರಲ್ಲಿ 'ಭಾರತಿ ಸಿಮೆಂಟ್ಸ್' ಎಂಬ ಕಂಪೆನಿ ಶುರುವಾಯಿತು. ಜೊತೆಗೇ ಸಂಡೂರು ಪವರ್ ಕಂಪೆನಿ ಎಂಬ 'ಜಲವಿದ್ಯುತ್' ಉತ್ಪಾದನಾ ಪ್ರಾಜೆಕ್ಟಿಗೂ ಜಗನ್ ಕೈಯಿಟ್ಟ. ಅದು ದಕ್ಷಿಣ ಕನ್ನಡದ ವರಾಹಿ


ವೈ.ಎಸ್.ಆರ್.ಕುಟುಂಬ...


ನದಿಯಿಂದ ಜಲವಿದ್ಯುತ್ ಉತ್ಪಾದಿಸಿ ನಮ್ಮದೇ ಕೆಪಿಟಿಸಿಎಲ್‌ಗೆ ಮಾರುವ ಸಾವಿರದೈನೂರು ಕೋಟಿ ರೂಪಾಯಿಗಳ ರಕ್ಕಸ ಯೋಜನೆ.


ಭಾರತಿ ಸಿಮೆಂಟ್ಸ್ ಮತ್ತು ಸಂಡೂರು ಪವರ್ ಪ್ರಾಜೆಕ್ಟ್ (SPCL) ಕಂಪೆನಿಯ ಕಾರ್ಪೊರೇಟ್ ಕಚೇರಿಯೆಂದು ವಿಳಾಸವಿದ್ದದ್ದು ಜಗನ್‌ನ ಎಚ್‌ಎಸ್‌ಆರ್ ಲೇಔಟ್ ಬಂಗಲೆಯದ್ದೇ!


ಇದಕ್ಕಿಂತಲೂ ದೊಡ್ಡಮಟ್ಟದಲ್ಲಿ ಜಗನ್ ಹೆಸರು ಕೇಳಿಬಂದದ್ದು ಬೆಂಗಳೂರಿನ ರಿಯಲ್ ಎಸ್ಟೇಟ್ ದಂಧೆಯಲ್ಲಿ, ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಬಾಗಲೂರು ಕ್ರಾಸ್‌ನಲ್ಲಿ ಜಗನ್ ಇಪ್ಪತ್ತು ಎಕರೆಯ ಎಸ್ಟೇಟ್ ಖರೀದಿಸಿದ. ಕಮ್ಮಿಯೆಂದರೂ ಅದು ನೂರು ಕೋಟಿಯ ಆಸ್ತಿ. ಅಲ್ಲಿ ತನಗೊಂದು ತನ್ನ ತಂಗಿ ಶರ್ಮಿಳಾಗೊಂದು ಬಂಗಲೆ ಕಟ್ಟಿಸಿಕೊಂಡ. ಜಗನ್‌ನ ಮೂರೂ ಮಕ್ಕಳು ಪಕ್ಕದ ದೆಹಲಿ ಪಬ್ಲಿಕ್ ಸ್ಕೂಲಿಗೆ ಸೇರಿಕೊಂಡರೆ ತಂಗಿ ಶರ್ಮಿಳಾ ಮತ್ತಾಕೆಯ ಪತಿ ಅನಿಲ್‌ಕುಮಾರ್ ಕೂಡ ಬಾಗಲೂರು ಎಸ್ಟೇಟಿನ ಕಾಯಂ ನಿವಾಸಿಗಳಾದರು. ಶರ್ಮಿಳಾ ಗಂಡ ಅನಿಲ್‌ಕುಮಾರ್ ಮೂಲತಃ ಬ್ರಾಹ್ಮಣನಾದರೂ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಧರ್ಮಪ್ರಚಾರಕ್ಕಾಗೇ ಫಾಸ್ಟರ್ ಕಾಯಕಕ್ಕೆ ನಿಂತದ್ದು ರೆಡ್ಡಿ ಕುಟುಂಬದ ಆಸ್ತಿ ಸಂಗ್ರಹಣೆಗೆ ಪೂರಕವಾಗೇ ಇತ್ತು.

ತಿಂಗಳಿಗೆ ಎರಡೋ ಮೂರೋ ಸಾರಿ ಹೈದರಾಬಾದಿಗೆ ಹೋಗಿ ಧರ್ಮಸಭೆಗಳನ್ನು ನಡೆಸುತ್ತಿದ್ದ ಅನಿಲ್‌ಕುಮಾರ್ ಮಿಕ್ಕಂತೆ ಬೆಂಗಳೂರಿನ ರಿಯಲ್ ಎಸ್ಟೇಟ್ ವ್ಯವಹಾರದಲ್ಲೇ ಬಿಜಿಯಾದ. ಜೊತೆಗೆ ಜಗನ್ ಎಸ್ಟೇಟ್‌ಗೆ ಸಮೀಪದಲ್ಲೇ ಅಕ್ಷರ ಮತ್ತು ಬಂಜಾರ ಎಂಬ ಎರಡು ಐಷಾರಾಮಿ ಹೈಸ್ಕೂಲುಗಳನ್ನು ಜಗನ್ ತಂಗಿ ಶರ್ಮಿಳಾ ತೆರೆದಳು. ಇವುಗಳ ಪಕ್ಕದಲ್ಲೇ 'ಬೃಂದಾವನ್ ಕಾಲೇಜ್' ಕೂಡ ಶರ್ಮಿಳಾ ಒಡೆತನದಲ್ಲೇ ಶುರುವಾಯಿತು. ಇವುಗಳ ವಿಸ್ತರಣೆ ಎಂಬಂತೆ ಯಲಹಂಕದ ಕೊಡಿಗೆಹಳ್ಳಿ ಸಮೀಪ ಶರ್ಮಿಳಾ ಮತ್ತು ಅನಿಲ್ ಸೇರಿಕೊಂಡು ಐವತ್ತೆಕರೆಯ ಮತ್ತೊಂದು ಪ್ಲಾಟ್ ಖರೀದಿಸಿದ್ದರು.

ಇದು ವೈಎಸ್‌ಆರ್ ಕುಟುಂಬದ ಬೆಂಗಳೂರು ಮೋಹಕ್ಕೊಂದು ಉದಾಹರಣೆಯಷ್ಟೆ. ಆಂಧ್ರದ ಜಿದ್ದಾಜಿದ್ದಿಗೆ ಸಿಲುಕಿ ತನ್ನ ಮಕ್ಕಳ ವ್ಯವಹಾರ


ಅರವಿಂದ ಲಿಂಬಾವಳಿ


ಕರುಣಾಕರ ರೆಡ್ಡಿ


ವಿಶ್ವನಾಥ್

ಹಾಳಾಗದಿರಲೆಂದು ವೈಎಸ್‌ಆರ್ ಸಾಕಷ್ಟು ಎಚ್ಚರಿಕೆ ವಹಿಸಿಯೇ ಹಣ ಒದಗಿಸುತ್ತಿದ್ದರು. ಪಿಚ್ಚಿರೆಡ್ಡಿ, ಕುಮಾರಸ್ವಾಮಿ ರೆಡ್ಡಿ, ರಾಜಾ ರೆಡ್ಡಿ, ಮಧುಸೂದನ ರೆಡ್ಡಿ ಮುಂತಾದ ಆಂಧ್ರದ ರಿಯಲ್ ಎಸ್ಟೇಟ್ ಖದೀಮರೆಲ್ಲ ಬೆಂಗಳೂರಿನಲ್ಲೇ ಠಿಕಾಣಿ ಹೂಡಿದ್ದು ಜಗನ್‌ನ ಬೇನಾಮಿ ಭೂಖರೀದಿಗೆ ಪೂರಕವಾಗೇ ಇತ್ತು. ಇಲ್ಲಿಗೆ ಎರಡು ವರ್ಷದ ಹಿಂದೆ ಎಚ್‌ಎಸ್‌ಆರ್ ಲೇಔಟ್ ಬಂಗಲೆಯಿಂದ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಬಾಗಲೂರು ಕ್ರಾಸ್‌ಗೆ ಮನೆ ಬದಲಿಸಿದ ಮೇಲಂತೂ ಜಗನ್ ಹೆಸರು ಬೆಂಗಳೂರು ರಿಯಲ್ ಎಸ್ಟೇಟ್ ಮಾಫಿಯಾದಲ್ಲಿ ಮುಂಚೂಣಿಗೆ ಬಂತು.


ದೇವನಹಳ್ಳಿ ಏರ್‌ಪೋರ್ಟ್ ಸುತ್ತಮುತ್ತ ಜಗನ್ ಒಬ್ಬನೇ ಬೇನಾಮಿಯಾಗಿ ಖರೀದಿಸಿದ ಎರಡು ಸಾವಿರ ಎಕರೆ ಭೂಮಿಯಲ್ಲದೇ ಎಚ್‌ಬಿಆರ್ ಲೇಔಟಿನಲ್ಲಿ 25 ಎಕರೆಗಳ ಖಾಸಗಿ ಲೇಔಟ್ ಕೂಡ ತಲೆ ಎತ್ತಿತ್ತು. ರಿಯಲ್ ಎಸ್ಟೇಟ್ ಮೂಲಗಳ ಪ್ರಕಾರ ಜಗನ್‌ನ ರಿಯಲ್ ಎಸ್ಟೇಟ್ ದಂಧೆಯಲ್ಲಿ ಗಣಿ ರೆಡ್ಡಿಗಳ ಪಾಲುದಾರಿಕೆ ಕೂಡ ಇದೆ. ಇದಕ್ಕೆ ಪುಷ್ಟಿಕೊಡುವಂತೆ ಕಂದಾಯ ಮಂತ್ರಿ ಕರುಣಾಕರ ರೆಡ್ಡಿ ಜಗನ್‌ಗೆಂದು ಬಿಡದಿಯ ವಂಡರ್‌ಲಾ ಹಿಂಭಾಗದಲ್ಲಿ ಆರು ನೂರು ಎಕರೆ ಭೂಮಿಗೆ ಅಡ್ವಾನ್ಸ್ ಕೊಟ್ಟು, ಐಷಾರಾಮಿ ರೆಸಾರ್ಟ್ ಒಂದಕ್ಕೆ ಅಡಿಗಲ್ಲಿಟ್ಟ.

ಯಲಹಂಕ ಶಾಸಕ ವಿಶ್ವನಾಥ್ ಹೇಳಿಕೇಳಿ ಪಕ್ಕಾ ಭೂಕಂಟಕ. ಈತ ಹೆಸರಘಟ್ಟದ ಕೆರೆಗೆ ಹೊಂದಿಕೊಂಡಂತಿರುವ ಅರಣ್ಯ ಪ್ರದೇಶವನ್ನೇ ಆಕ್ರಮಿಸಿ ಆ ಪೈಕಿ ನೂರೈವತ್ತು ಎಕರೆಗೆ ನಕಲಿ ದಾಖಲೆ ಸೃಷ್ಟಿಸಿ ಜಗನ್‌ನ ಬೇನಾಮಿ ಮಧುಸೂದನ ರೆಡ್ಡಿಯ ಮುಂದಿಟ್ಟು, ಐದು ಕೋಟಿಯ ಅಡ್ವಾನ್ಸ್ ಜೇಬಿಗಿಳಿಸಿದ. ಸರ್ಕಾರಿ ಅರಣ್ಯ ಭೂಮಿಗೆ ನಕಲಿ ದಾಖಲೆ ಸೃಷ್ಟಿಸುವಲ್ಲಿ

▶▶



ಸಂಡೂರು ಪವರ್ ಕಂಪೆನಿ ಜಗನ್ ಗ್ಯಾಂಗ್ ವರಾಹಿ ನದಿಗೆ ಕನ್ನವಿಕ್ಕಿದ್ದು



ಧರಂ ಜೊತೆ ವೈ.ಎಸ್.ಆರ್

ಉಡುಪಿ ಕರಾವಳಿಯ ವರಾಹಿ ನದಿಗೂ ಗಣಿರೆಡ್ಡಿ ...ಗೂ ಮತ್ತು ವೈಎಸ್‌ಆರ್ ಪುತ್ರ ಜಗನ್‌ಗೂ ಎಲ್ಲಿಂದೆ ...ಯ ಸಂಬಂಧ?

ಅದು ಸಂಡೂರು ಪವರ್ ಕಂಪೆನಿ ಲಿಮಿಟೆಡ್ ...ರ್ಥಾತ್ SPCL. ಜಗನ್ ಈ ಕಂಪೆನಿಯ ...ನಕನಾದರೆ ಜನಾರ್ದನ ರೆಡ್ಡಿ ಮತ್ತು ಕರುಣಾಕರ ರೆಡ್ಡಿ ...ದರ ಪಾಲುದಾರರು. ಪಶ್ಚಿಮಘಟ್ಟ ಸಾಲಿನ ವರಾಹಿ ...ದಿಗೆ ಉಡುಪಿ ಮತ್ತು ಕುಂದಾಪುರದ ಮಧ್ಯೆ ತಡೆಹಾಕಿ ...ಲವಿದ್ಯುತ್ ಉತ್ಪಾದಿಸುವ SPCL ಯೋಜನೆ ...ಂದೇ ಕರ್ನಾಟಕದ ರಾಜಕಾರಣಿಗಳ ಮನೆಮುರುಕು ...ದ್ಧಿಗೆ ಉದಾಹರಣೆಯಂತಿದೆ.

Varahi Tail Race Small Hydro Power Project of SPCL in Karnataka ಎಂಬುದು ಮುನ್ನೂರು ಕೋಟಿಗಳ ಜಲವಿದ್ಯುತ್ ಯೋಜನೆ. ಪ್ರಾರಂಭದಲ್ಲಿ ಸರ್ಕಾರಿ ಕೆಪಿಟಿಸಿಎಲ್ ಇಂಥದೊಂದು ಯೋಜನೆ ಹಮ್ಮಿಕೊಂಡಿತ್ತು, ಸರ್ಕಾರವೇ ವರಾಹಿ ಜಲವಿದ್ಯುತ್ ಉತ್ಪಾದಿಸಿದ್ದರೆ ಈಗದು ಖರೀದಿಸುತ್ತಿರುವ ಅರ್ಧ ರೇಟಿಗೆ ವಿದ್ಯುತ್ ಸಿಗುತ್ತಿತ್ತು, ಆದರೆ ಲಂಚ ಹುಟ್ಟಬೇಕಲ್ಲ, ಧರಂ ಸಿಂಗ್ ಸರ್ಕಾರ 2006 ರಲ್ಲಿ ವರಾಹಿ ನದಿಯನ್ನು ಜಗನ್ ಕಂಪೆನಿಗೆ ಮಾರಿ ಹಾಕಿತು. ಅದರರ್ಥ ವರಾಹಿ ನದಿಗೆ ಸರ್ಕಾರವೇ ಕಟ್ಟಿದ ಅಣೆಕಟ್ಟೆಯಿಂದ ಜಗನ್ ಕಂಪೆನಿ ವಿದ್ಯುತ್ ಉತ್ಪಾದಿಸುತ್ತದೆ. 7.5 ಮೆಗಾವ್ಯಾಟ್ ಸಾಮರ್ಥ್ಯದ ಮೂರು ಯೂನಿಟ್ಟುಗಳಿಂದ SPCL ತಿಂಗಳಿಗೆ 22.5 ಮೆಗಾವ್ಯಾಟ್ ಉತ್ಪಾದಿಸಿ ಅದನ್ನು ದುಬಾರಿ ಬೆಲೆಗೆ ಕೆಪಿಟಿಸಿಎಲ್‌ಗೆ ಮಾರುತ್ತದೆ. ವರ್ಷಕ್ಕೆ ಈ ರೀತಿ 120.0 Gwh ವಿದ್ಯುತ್ತನ್ನು ಕೆಪಿಟಿಸಿಎಲ್ ಜಗನ್ ಕಂಪೆನಿಯಿಂದ ಖರೀದಿಸಬೇಕು. ಅದೂ ಹೇಳಿದ ರೇಟಿಗೆ.



ಇಂಥಾದ್ದೊಂದು ಪವರ್ ಪರ್ಚೇಸಿಂಗ್ ಅಗ್ರಿಮೆಂಟ್ (PPA) ಧರಂಸಿಂಗ್ ಕಾಲದಲ್ಲೇ ಕೆಪಿಟಿಸಿಎಲ್ ಮತ್ತು SPCL ಮಧ್ಯೆ ನಡೆದಿದೆ. ಈಗ ಗಣಿರೆಡ್ಡಿಗಳದೇ ಸರ್ಕಾರವಿರುವುದರಿಂದ ಜಗನ್‌ನ ವರಾಹಿ ಲೂಟಿ ಸಲೀಸಾಗಿದೆ. ಈಗಾಗಲೇ ಒಂದು ಯೂನಿಟ್ ಕಾರ್ಯಾರಂಭ ಮಾಡಿದ್ದು ಇಷ್ಟರಲ್ಲೇ ಇನ್ನೆರಡು ಯೂನಿಟ್ಟುಗಳೂ ಶುರುವಾಗುತ್ತದೆ.


ಕರ್ನಾಟಕದ ನದಿ, ರೈತರ ನೀರು ಮತ್ತು ಸರ್ಕಾರವೇ ಕಟ್ಟಿದ ಅಣೆಕಟ್ಟಿಗೆ ಜನರೇಟರುಗಳನ್ನು ಹಾಕಿ ಜಲವಿದ್ಯುತ್ ಮಾರಲು ಜಗನ್ ಕಂಪೆನಿಯೇ ಬೇಕಿತ್ತೇ? ಇದನ್ನೇ ಕೆಪಿಟಿಸಿಎಲ್ ಮಾಡಬಹುದಿತ್ತಲ್ಲ? ಇನ್ನೂ ದುರಂತವೆಂದರೆ ಜಗನ್ ತಂಗಿ ಗಂಡ ಪಾಸ್ಟರ್ ಅನಿಲ್ ಕೂಡ ಇಂಥದ್ದೇ ಜಲವಿದ್ಯುತ್ ಕಂಪೆನಿಯೊಂದನ್ನು ರಾಯಚೂರಿನಲ್ಲಿ ಹುಟ್ಟುಹಾಕಿದ್ದಾನೆ. ಕೆಪಿಟಿಸಿಎಲ್ ಆತನ ಜೊತೆಗೂ ಒಪ್ಪಂದಕ್ಕೆ ಬರುವಂತೆ ಗಣಿರೆಡ್ಡಿಗಳು ಕೈಚಳಕ ಮೆರೆದಿದ್ದಾರೆ.

ನರಸತ್ತ ರಾಜಕಾರಣಿಗಳು, ನಿಷ್ಕ್ರಿಯ ಜನತೆ ಮತ್ತು ಭ್ರಷ್ಟ ಅಧಿಕಾರಿಗಳಿರುವಾಗ ಗಣಿಯಾದರೇನು? ನದಿಯಾದರೇನು? ಆಂಧ್ರ ಖದೀಮರ ಲೂಟಿಗೆ ಏನಾದರೇನು? ●

▶▶

...ಕರಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ಶಾಸಕ ...ನಾಥ್ ಯಲಹಂಕಕ್ಕೆ ತಹಶೀಲ್ದಾರ್ ಆಗಿದ್ದ ...ವಂತ ಅಧಿಕಾರಿ ಸಿದ್ದಲಿಂಗಪ್ಪನವರನ್ನು ...ರೋರಾತ್ರಿ ಎತ್ತಂಗಡಿ ಮಾಡಿಸಿಬಿಟ್ಟ.

...ಜಗನ್ ಭೂಯಜ್ಞಕ್ಕೆ ಬಿದ್ದು ಕೈಬಾಯಿ ಹೊಲಸು ...ಡಿಕೊಂಡ ಬಿಜೆಪಿ ಸರ್ಕಾರದ ಅತೀ ದೊಡ್ಡ ...ವೆಂದರೆ ಉನ್ನತ ಶಿಕ್ಷಣ ಮಂತ್ರಿ ಅರವಿಂದ ...ಬಾವಳಿ. ಹೆಸರಘಟ್ಟದ ಒಟ್ಟು ಒಂಬೈನೂರು ...ರೆಗಳಷ್ಟು ಸರ್ಕಾರಿ ಭೂಮಿಯಲ್ಲಿ ಮಂತ್ರಿ ...ಬಾವಳಿ ಒಬ್ಬರೇ ಐನೂರೆಕರೆಗೆ ಬೇಲಿ ...ತ್ತಿದ್ದಾರೆ. ಲಿಂಬಾವಳಿ ನಕಲಿ ದಾಖಲೆಗಳನ್ನು



...ಸುತ್ತಿರುವುದಕ್ಕೊ, ಸ್ಪಷ್ಟ ಸಾಕ್ಷ್ಯಾಧಾರಗಳಿವೆ. ...ದ ರಿಯಲ್ ಎಸ್ಟೇಟ್ ದೀಲರ್ ಪಿಚ್ಚಿರೆಡ್ಡಿಗೆ ...ನ್ನು ಲಿಂಬಾವಳಿ ಮಾರುತ್ತಾರಂತೆ. ಪಿಚ್ಚಿರೆಡ್ಡಿ ...ಕೇಳಿ ಜಗನ್ ಬೇನಾಮಿ!

...ಸಾಕ್ಷಿ ಟೀವಿಗೆಂದು ಚಿಕ್ಕಜಾಲದ ಬಳಿ ಜಗನ್ ...ನ್ರಿ ಜನಾರ್ದನ ರೆಡ್ಡಿ ಸೇರಿ ಅಡ್ವಾನ್ಸ್ ಮಾಡಿದ ...ಕರೆಯಲ್ಲಿ 60 ಎಕರೆ ಸರ್ಕಾರಿ ಗೋಮಾಳ. ...ಕ್ಕೆ ನಕಲಿ ದಾಖಲೆ ಸೃಷ್ಟಿಸಿದವನು ಬೇನಾಮಿ ...ಕರ್ ಮಧುಸೂದನ ರೆಡ್ಡಿ. ಈ ಎಲ್ಲಾ ಲ್ಯಾಂಡ್ ...ಂಗಳನ್ನು ಬದಿಗಿಟ್ಟು ನೋಡಿದರೂ ದೇವನಹಳ್ಳಿ ...ರ್ಪೋರ್ಟ್ ಸುತ್ತಮುತ್ತ ಕಮ್ಮಿಯೆಂದರೂ ಜಗನ್ ...ು ಸಾವಿರ ಕೋಟಿ ರೂಪಾಯಿಗಳಷ್ಟು ಬ್ಲಾಕ್ ...ಹಾಕಿದ್ದಾನೆ. ಅಪ್ಪ ವೈಎಸ್‌ಆರ್ ಎರಡನೇ ...ಮುಖ್ಯಮಂತ್ರಿಯಾದ ಮೇಲೆ ಅಂದರೆ ಇಲ್ಲಿಗೆ ...ು ತಿಂಗಳ ಹಿಂದಷ್ಟೇ ಜಗನ್ ಬನ್ನೇರುಘಟ್ಟ

ರಸ್ತೆಯ ಶಾಪರ್ಸ್ ಸ್ಟಾಪ್ ಮಳಿಗೆಯನ್ನು ನೂರೈವತ್ತು ಕೋಟಿಗೆ ಖರೀದಿಸಿದ್ದಾನೆ. ಇದಿಷ್ಟೂ ಮೇಲುನೋಟಕ್ಕೆ ಜಗನ್ ಬೇನಾಮಿಯಾಗಿ ಖರೀದಿಸಿದ ಆಸ್ತಿಪಾಸ್ತಿಗಳಾದರೆ ಬನ್ನೇರುಘಟ್ಟ ರಸ್ತೆಯ ಶಾಪರ್ಸ್ ಸ್ಟಾಪ್‌ನ ಆಜೂಬಾಜಿನ ಕಾಂಪ್ಲೆಕ್ಸುಗಳು, ಎಚ್‌ಎಸ್‌ಆರ್ ಲೇಔಟಿನಲ್ಲಿ ಎರಡು ಬಂಗಲೆಗಳು ಮತ್ತು ಬೆಳ್ಳಂದೂರು ಕೆರೆ ಸುತ್ತಮುತ್ತ ಜಗನ್ ಕೈಯಿಟ್ಟ ಕೆಐಎಡಿಬಿ ಸೊತ್ತುಗಳದೇ ಪ್ರತ್ಯೇಕ ಪಟ್ಟಿಯಾಗುತ್ತದೆ.

ಜಗನ್‌ನ ರಿಯಲ್ ಎಸ್ಟೇಟ್ ದಾಹಕ್ಕೇ ತಕ್ಕಂತೆ ಗಣಿ ದೊರೆ ಕರುಣಾಕರ ರೆಡ್ಡಿಯನ್ನು ಯಡ್ಡಿ ಕಂದಾಯ ಮಂತ್ರಿಯನ್ನಾಗಿ ಮಾಡುತ್ತಾರೆ. ಬೆಂಗಳೂರಿನ ಆಸ್ಪತ್ರೆಗಳಿಂದ ತ್ಯಾಜ್ಯ ಸಂಗ್ರಹಿಸಿ ವಿಲೇವಾರಿ ಮಾಡುವುದಕ್ಕೆಂದೇ ಜಗನ್‌ನ ಮತ್ತೊಂದು ಬೇನಾಮಿ ಕಂಪೆನಿಯಾದ ರಾಮ್ಕೀಸ್‌ಗೆ ಧರಂಸಿಂಗ್ ಸರ್ಕಾರ ದಾಬಸ್‌ಪೇಟೆ ಬಳಿ ಇನ್ನೂರೆಕರೆಯಷ್ಟು ರೈತರ ಭೂಮಿ ಕಿತ್ತು ಕೊಟ್ಟಿದೆ. ಸರ್ಕಾರ ಕಾಂಗ್ರೆಸ್ಸೇ ಆಗಿರಲಿ ಬಿಜೆಪಿಯೇ ಬರಲಿ ವೈಎಸ್‌ಆರ್ ಹಿತಾಸಕ್ತಿಗೆ ಮಾತ್ರ ಯಾವತ್ತೂ ಧಕ್ಕೆ ಬಂದಿಲ್ಲ. ಇನ್ನು ಜಗನ್ ಆಂಧ್ರದ ಮುಖ್ಯಮಂತ್ರಿಯಾದನೆಂದರೆ ಕೇಳಬೇಕಾ?

ಹೇಗೂ ಆಂಧ್ರದಲ್ಲಿ ವಿರೋಧಿಗಳು ಕಣ್ಣಿಟ್ಟಿರುತ್ತಾರಾದ್ದರಿಂದ ಜಗನ್ ಮತ್ತು ಗಣಿರೆಡ್ಡಿ ಗ್ಯಾಂಗ್‌ಗೆ ಬೆಂಗಳೂರೆಂಬುದು ಸಂಪದ್ಭರಿತ ಮಸಾಣಕಾಗುವುದಂತೂ ಗ್ಯಾರಂಟಿ. ಏಕೆಂದರೆ ವೈಎಸ್‌ಆರ್ ಕುಟುಂಬ ಈಗಾಗಲೇ ಬೆಂಗಳೂರಿನಲ್ಲಿ ಬೇರುಬಿಟ್ಟಾಗಿದೆ. ಸಾವಿರಾರು ಕೋಟಿಯನ್ನು ಸುರಿದು ಶುರುವಿಟ್ಟ ರಿಯಲ್ ಎಸ್ಟೇಟ್ ದಂಧೆ ಜಗನ್ ಮುಖ್ಯಮಂತ್ರಿಯಾಗುತ್ತಿದ್ದಂತೆ ಇನ್ನಷ್ಟು ತೀವ್ರಗೊಳ್ಳುತ್ತದೆಯೇ ಹೊರತು ಸೊರಗುವ ಲಕ್ಷಣಗಳಿಲ್ಲ? ●

ಕಮ್ಯುನಿಸ್ಟರು, ಬಿಜೆಪಿಗಳು ಒಂದೇ ಕಂಡ್ರಿ

ಕೃಷ್ಣಯ್ಯ ಶೆಟ್ಟಿ ಎಂಬ ಕರ್ನಾಟಕ ಕಂಡ ಅಪರೂಪದ ಮಂತ್ರಿಗೆ ಹಾಲಿ ದಿಗ್ಭ್ರಮೆಯಾಗಿದೆಯಂತಲ್ಲಾ, ಮನೆಯ ಹತ್ತಿರ ಬಂದು ಮುತ್ತಿಕೊಳ್ಳುತ್ತಿದ್ದ ಜನ, ಎತ್ತ ಹೋದರು. ಕೂಡಲೇ ಬಂದು ಜಮಾಯಿಸುತ್ತಿದ್ದವರು, ಆ ಕಾರಿಗೆ ತಲೆ ಚಚ್ಚಿಕೊಂಡವರು ಮಂತ್ರಿಗಿರಿ ಹೋದ ಮೇಲೆ ಅಡ್ರೆಸ್ ಇಲ್ಲದಂತಾದರಲ್ಲಾ ಎಂದು ಕೊರಗುತ್ತಲೇ ಊಟಕ್ಕಾಗಿ ಜನಾರ್ದನ ಹೋಟೆಲ್‌ಗೆ ನುಗ್ಗಿದರೆ ಅಲ್ಲಿ ಯಾರು ಕೂಡ ಕಣ್ಣೆತ್ತಿಯೂ ನೋಡಲಿಲ್ಲವಂತಲ್ಲಾ, ಇದರಿಂದ ಸಿಟ್ಟಾದ ಶೆಟ್ಟಿ ಮತ್ತೆ ಮತ್ತೆ ಪಲ್ಯ ಹಾಕಿಸಿಕೊಂಡು ತಿಂದುದಲ್ಲದೆ ಮೊಸರನ್ನ ಕಲಸಿಕೊಂಡು ಬಾರಿಸಿ ಮೇಕೆಯಂತೆ ಸುತ್ತಾ ನೋಡಿದರೂ ಜನರೆಲ್ಲಾ ಕೋತಿಗಳಂತೆ ತಮ್ಮಷ್ಟಕ್ಕೆ ತಾವು ಭೋಜನ ಭಾರಿಸುವುದರಲ್ಲೇ ತಲ್ಲೀನರಾಗಿದ್ದರಂತಲ್ಲಾ, ಕೃಷ್ಣಯ್ಯ ಶೆಟ್ಟಿ ಕತೆಯನ್ನು ಕೇಳಿ ತಿಳಿದುಕೊಂಡ ಸುಧಾಕರ ಎಂಬ ಪೋರ್‌ಟ್ವೆಂಟಿ "ನಾನು ಸತ್ತರೂ ರಾಜೀನಾಮೆ ಕೊಡಲ್ಲ, ಅದೆಷ್ಟೇ ಕಷ್ಟವಾದರೂ ಸಿಬಿಐ ಮತ್ತು ಕೋರ್ಟನ್ನು ನಿಭಾಯಿಸಿಕೊಂಡೇ ಮುಂದುವರಿಯುತ್ತೇನೆ" ಎಂದನಂತಲ್ಲಾ, ಆತನ ಹಟವನ್ನು ಮೆಚ್ಚಿಕೊಂಡ ಎಡೂರಪ್ಪ ನಗೆ ನಕ್ಕು "ಆಯ್ತು ಹಾಗೇ ಮಾಡು" ಎಂದರಂತಲ್ಲಾ, ಥೂತ್ತೇರಿ!

*****

ಚೀಣಾ ದೇಶ ಸುತ್ತಿ ಬಂದಿರುವ ನಮ್ಮ ಮುಖ್ಯಮಂತ್ರಿಗಳನ್ನು ಮಾತನಾಡಿಸಿ ಅಭಿನಂದಿಸಬೇಕಾದ್ದು ನಮ್ಮ ಧರ್ಮವಲ್ಲವೆ. ಅದಕ್ಕಾಗಿ ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

ಥೂತ್ತೇರಿ ▸ ಯಾಹೂ

"ಹಲೋ ಸಾರ್ ನಾನು ಯಾಹೂ."

"ಏನೇಳಿ ಯಾಹೂ ಅವರೆ?"

"ಚೀಣಾ ಪ್ರವಾಸ ಹ್ಯಂಗಿತ್ತು ಸಾ?"

"ಮತ್ತೆ ಹೋಗಿ ಬರಬೇಕು ಅನ್ನಸ್ತಾಯಿದೆ."

"ಅಷ್ಟೊಂದು ಚನ್ನಾಗಿದೆಯಾ ಸಾರ್ ಆ ದೇಶ?"

"ಚನ್ನಗಿದೆಯಾ ಅಂತ ಕೇಳ್ತಿರಾ? ಆ ದೇಶ ನೋಡ್ತಾ ನೋಡ್ತ ನಾವು ಯಾವಾಗ ಆ ತರ ಮುಂದುವರಿಯದು ಅನ್ನುಸ್ತು."

"ನಾವು ಆ ತರ ಮುಂದುವರಿಯಕ್ಕೆ ಆಗಲ್ಲ ಸಾರ್."

"ಯಾಕಾಗಲ್ಲ?"

"ಅಲ್ಲಿರೋದು ಕಮ್ಯುನಿಸ್ಟ್ ಸರ್ಕಾರ. ನಮ್ಮದು ಡೆಮಾಕ್ರಸಿ ಸರಕಾರ. ಅಲ್ಲಿ ಸರಕಾರಕ್ಕಾಗಿ ಇಡೀ ದೇಶ ದುಡಿಯುತ್ತೆ, ಇಲ್ಲಿ ತನಗಾಗಿ ದೇಶಾನೆ ಹಾಳು ಮಾಡ್ತ ಅವುರೆ. ಅದ್ರಿಂದ ನಾವು ಆ ತರ ಮುಂದುವರಿಯಕ್ಕಾಗಲ್ಲ."

"ಇನ್ನಾವ ತರ ಮುಂದುವರಿಬವುದು?"

"ಒಂದೊಂದು ಸರಕಾರ ಬಂದಾಗ್ಲು ಮಂತ್ರಿಗಳು, ಎಮ್ಮೆಲ್ಲೆಗಳು ಮಾತ್ರ ಮುಂದುವರಿಯದ್ರಿಂದ ಈ ದೇಶದ ಯಲ್ಲಾರಿಗೂ ಆ ಸರದಿ ಬಂದಾಗ ಮುಂದುವರಿಬವುದು ಸಾರ್."

"ನಿಮ್ಮ ಮಾತು ಸುಳ್ಳು ಕಂಡ್ರಿ ಯಾಹೂ. ಜಿಲ್ಲಾ ಪಂಚಾಯ್ತಿ, ಮಂಡ್ಲು ಪಂಚಾಯ್ತಿ ಮೆಂಬ್ರುಗಳು ಮುಂದುವರದವುರೆ ಗೊತ್ತೆ?"

"ಅಂತೂ ಯಲ್ರೂ ರಾಜಕಾರಣಿಗಳಾದ್ರೆ ಮುಂದುವರಿತರೆ ಅಂದಂಗಾಯ್ತಲ್ಲ ಸಾರ್."

"ಅಂಗೇನು ಇಲ್ಲ ಕಂಡ್ರಿ. ಅಲ್ಲಿ ಮೊದಲಿಂದ್ಲೂ ಕಮ್ಯುನಿಸ್ಟ್ ಸರಕಾರ ಇರದ್ರಿಂದ ಆ ದೇಶ ಮುಂದುವರಿದಿದೆ. ಇಲ್ಲೂ ಬಿಜೆಪಿ ಸರಕಾರ ಇದ್ರೆ ಯಾಕ್ ಮುಂದುವರಿಯಕ್ಕಾಗಲ್ಲ."

"ನಿಮ್ಮ ಮಾತು ಬಿಜೆಪಿ ಪಾರ್ಟಿಗೆ ಮಾತ್ರ ಸೀಮಿತವಾದ ಮಾತು ಸಾರ್. ಬಿಜೆಪಿ ಅಧಿಕಾರದಲ್ಲಿದ್ರೆ ಆ ಪಾರ್ಟಿ ಜನ ಮಾತ್ರ ಮುಂದುವರಿತರೆ ಅನ್ನದು ಈಗ ಸಾಬೀತಾಗಿದೆ. ಆದ್ರೆ ದೇಶ ಇದ್ದಂಗೆ ಇರುತ್ತಲವ ಸಾರ್. ಆದ್ರು ಒಂದು ವಿಷಯದಲ್ಲಿ ಕಮುನಿಸ್ಟರು, ಬಿಜೆಪಿಗಳು ಒಂದೇ ತರ ಸಾರ್."

"ಅದ್ಯಂಗ್ರಿ ಒಂದೇ ತರ?"

"ಅವುರು ಮಾರ್ಕ್ಸ್ ಅಥವಾ ಮಾವ್ರೋವಾದಿಗಳು. ನೀವು ಮನು ಅಥವಾ ಗೋಳವಲ್‌ಕರ್ ವಾದಿಗಳು. ಅವರು ಕಮ್ಯುನಿಸ್ಟರಲ್ಲದವರನ್ನ ಸಹಿಸಲ್ಲ, ಸಾಧ್ಯವಾದ್ರೆ ಕೊಂದೆ ಹಾಕ್ತರೆ. ನೀವು ಬಿಜೆಪಿಗಳಲ್ಲದವರನ್ನ ಸಹಿಸಿಗಳಲ್ಲ, ಕೊಲ್ಲಕ್ಕೆ ಶಕ್ತಿಯಿಲ್ದೆಯಿರದ್ರಿಂದ ಗಲಭೆ ಎಬ್ಬುಸ್ತಿರಿ, ಬೆಂಕಿ ಹಚ್ಚುತಿರಿ. ಆ ದೃಷ್ಟಿಲಿ ಕಮ್ಯುನಿಸ್ಟರು, ನೀವು ಅಣ್ಣತಮ್ಮದಿರು ಸಾರ್."

"ಆ ಮಾತ ವಾಪಸ್ ತಗಳಿ ಯಾಹೂ. ಕಮ್ಯುನಿಸ್ಟರು ನಮ್ಮ ಅಣ್ಣ ತಮ್ಮದೀರಾದ್ರೆ ನಮ್ಮ ಜೊತೆ ಇರತಿದ್ರು. ಕಾಂಗ್ರೆಸ್‌ಗೇಕೆ ಸಪೋರ್ಟು ಮಾಡ್ತರೆ?"

"ಕಮ್ಯುನಿಸ್ಟರು ಮತೀಯವಾದದ ವಿರೋಧಿಗಳು ಸಾರ್ ಅದ್ಕೆ ನಿಮ್ಮ ಜೊತೆ ಸೇರಲ್ಲ, ಆದ್ರೆ ಗುರಿ ಒಂದೆ, ದಾರಿ ಬೇರೆ ಅಷ್ಟೆ. ಅದಿರ್ಲಿ ನೀವು ಗುಜರಾತ್‌ಗೋಗದು ಬುಟ್ಟು ಚೀಣಾಕ್ಯಾಕೋದ್ರಿ ಸಾರ್ಪ್?"

"ಗುಜರಾತ್‌ಗೆ ಯಾವಾಗ್ಲಾದ್ರು ಹೋಗಬವುದು. ಆದ್ರೆ ಚೀಣಾಕ್ಕೆ ಈ ಸಮಯಬಿಟ್ರೆ ಪುನಹ ಹೋಗಕ್ಕಾಗಲ್ಲ, ಅದ್ಕೆ ಹೋದೆ."

"ಏನೇನ್ ತಗೊಂಡ್ರಿ ಸಾರ್?"

"ಶೋಭಾ ಒಳ್ಳೆ ಬಟ್ಟೆ ಕೊಡಿಸಿದ್ಲು, ಇನ್‌ಶರ್ಟ್ ಮಾಡಿ ಗದ್ದೆ ನೋಡಕ್ಕೆ ಕಳಿಸಿದ್ಲು, ಅಲ್ಲಿನ ಗದ್ದೆ ನಮ್ಮ ಶಿಕಾರಿಪುರದ ಗದ್ದೆಗಿಂತ್ಲೂ ಹಸಿರಾಗಿವೆ."

"ಹೌದಾ ಸಾರ್?"

"ಹೌದು, ಅಷ್ಟೊಂದು ಹಸಿರು ನಮ್ಮ ಗದ್ದೆಗಳಿಗ್ಯಾಕ್ ಬರಲ್ಲ ಅಂತ ನಮ್ಮ ರೈತರು ಯೋಚನೆ ಮಾಡಬೇಕು."

"ಟೈಮಿಗೆ ಸರಿಯಾದ ಬಿತ್ತನೆ ಬೀಜ ಸರಿಯಾದ ಸಮಯಕ್ಕೆ ಗೊಬ್ಬರ ಕೊಟ್ರೆ ಆ ತರ ಹಸಿರು ಬತ್ತವೆ ಸಾರ್. ನೀವು ಗೊಬ್ಬರ, ಬೀಜ, ಕರಂಟು ಒಂದುನೂ ಸರಿಯಾಗಿ ಕೊಡ್ತಯಿಲ್ಲ, ಇನ್ನೆಂಗೆ ಹಸುರು ಬಂದತೂ?"

"ಅದ್ಕೆ, ನಮ್ಮ ಅಧಿಕಾರಿಗಳಿಗೆ 'ಉಳುವಾ ಯೋಗಿಯ ನೋಡಲ್ಲಿ' ಅನ್ನೊ ಕವನ ಓದಿ ಅಂತ ಹೇಳಿದ್ದಿನಿ."

"ಅದರಿಂದ ಏನು ಪ್ರಯೋಜನ ಸಾರ್?"


"ಉಳೋ ರೈತನ ಬಗ್ಗೆ ಅವುರಿಗೆ ಒಳ್ಳೆ ಭಾವನೆ ಬರತ್ತೆ ಆತನ ಕೆಲಸಕ್ಕೆ ಸಹಾಯ ಮಾಡಬೇಕು ಅನ್ನುಸುತ್ತೆ. ಆದಕ್ಕೆ ಉಳುವಯೋಗಿ ಪದನ ಹಾಡಿ ಹೇಳೊ ವ್ಯವಸ್ಥೆ ಮಾಡಿದ್ದೀನಿ."

"ಬಹಳ ಒಳ್ಳೆ ವ್ಯವಸ್ಥೆ ಸಾರ್. ಆದ್ರು ಇನ್ನು ಮುಂದೆ ಆ ಹಾಡು ಕೇಳಿದ ರೈತ ಆತ್ಮಹತ್ಯೆ ಕಡೆ ಜಾಸ್ತಿ ಯೋಚನೆ ಮಾಡಬಹುದು ಸಾರ್."

"ಯಾಕ್ರಿ ಹಾಗಂತಿರಿ?"

"ಆ ಅಶ್ವತ್ಥ ಅನ್ನೊ ಗಾಯಕನ ದನಿ ಹಾಗಿದೆ ಸಾರ್. ಅವ್ರುನಾತ್ತಯುದ್ರ 'ಉಳುವವ ಸತ್ತ ನೋಡಲ್ಲಿ' ಅನ್ನಂಗೆ ಕೇಳ್ತದೆ. ಅಂಥ ರೋದನದ ದನಿ ಅದು."

"ಥೂತ್ತೇರಿ!!!"





ತಿಮ್ಮಪ್ಪನಿಂದಲೂ ತೆರಿಗೆ ವಂಚನೆ



ಆದಾಯ ತೆರಿಗೆ ಕಾನೂನಿನ ಮಾತಲ್ಲಿ ಹೇಳಬೇಕೆಂದರೆ ತಿರುಪತಿ ತಿಮ್ಮಪ್ಪನೂ ತೆರಿಗೆ ವಂಚಕನೆ!

ತಲೆ ಕೂದಲು ಮಾರಿ ಬಂದ ನೂರಾರು ಕೋಟಿ ರೂಪಾಯಿಗೆ ಸಂಬಂಧಿಸಿದಂತೆ ಲಾರ್ಡ್ ತಿಮ್ಮಪ್ಪನು ಸರ್ಕಾರಕ್ಕೇ 19 ಕೋಟಿ ರೂ. ಆದಾಯ ತೆರಿಗೆ ಬಾಕಿ ಉಳಿಸಿಕೊಂಡಿದ್ದಾನೆ. ನಿತ್ಯ ಇಪ್ಪತ್ತು ಸಾವಿರ ಜನ ತಲೆ ಬೋಳಿಸಿಕೊಳ್ಳುವ ಕಾರಣ ತಿರುಪತಿಯಲ್ಲಿ ವರ್ಷಕ್ಕೆ ಒಂದೂವರೆ ಲಕ್ಷ ಕೇಜಿ ಕೂದಲ ರಾಶಿ ಬೀಳುತ್ತಿದೆ. ಅದನ್ನು ಟಿಟಿಡಿಯವರಿಂದ ಬೆಂಗಳೂರಿನ ಮಯೂರ್ ಬಲ್ಲಾರ್ ಎಂಬ ಮಾರ್ವಾಡಿ ಹರಾಜಿನಲ್ಲಿ ಕೊಂಡು ಇಟಲಿಗೆ ಕಳುಹಿಸುತ್ತಾನೆ. ಇದೊಂದರಲ್ಲೇ 120 ಕೋಟಿ ರೂಪಾಯಿ ವಾರ್ಷಿಕ ಆದಾಯವಿದೆ ತಿಮ್ಮಪ್ಪನಿಗೆ. ಆದರೆ ಬಂದ ಆದಾಯಕ್ಕೆ ಟ್ಯಾಕ್ಸ್ ಕಟ್ಟದೆ ತಪ್ಪಿಸಿಕೊಂಡಿದ್ದಾನೆ ಈ ದೇವರು.

ಮತ್ತೊಂದೆಡೆ ಈ ಕೂದಲ ಪ್ರಯಾಣದ ಕತೆ ಕೇಳಿ. ಇಲ್ಲಿಂದ ರೋಮ್ ನಗರಕ್ಕೆ ಹೋಗುವ ತರೇವಾರಿ ಕೂದಲನ್ನು ಅಲ್ಲಿ 5 ರೀತಿ ವಿಂಗಡಿಸಿ, ಸಂಸ್ಕರಿಸಿ ಕೇಜಿಗೆ 6 ಸಾವಿರ ರೂ.ನಂತೆ ಮಾರಿ ಅಮೆರಿಕಾ, ಯೂರೋಪ್‌ನ ಬ್ಯೂಟಿ ಸಲೂನ್‌ಗಳಿಗೆ ಸಾಗಿಸುತ್ತಾರೆ. ಅಲ್ಲಿ ಜನ ಕೃತಕ ಕೂದಲಿಗೆ ಒಂದೂವರೆ ಲಕ್ಷ ರೂಪಾಯಿ ತನಕ ಹಣ ತೆತ್ತು ಹೋಗುತ್ತಿದ್ದಾರೆ.

"ಇದೊಂದು ಶುದ್ಧ ಅವಮಾನದ, ನಾಚಿಗೇಡಿನ ಸಂಗತಿ.

ವಿಶ್ವದ ಅತೀ ಶ್ರೀಮಂತ ದೇವರುಗಳಲ್ಲಿ ಒಬ್ಬನಾದ ತಿರುಪತಿ ವೆಂಕಟೇಶ್ವರನ ಕೊರಳಲ್ಲಿರಬೇಕಿದ್ದ ಚಿನ್ನದ ಹಾರವನ್ನೆ ಅಲ್ಲಿನ ಪುರೋಹಿತನೊಬ್ಬ ಕದ್ದು ಸಿಕ್ಕಿಬಿದ್ದಿದ್ದಾನೆ. ಹಾಗೆ ಸಿಕ್ಕಿಬಿದ್ದ ಬ್ರಾಹ್ಮಣ ಪೂಜಾರಿ ವೆಂಕಟರಮಣ ದೀಕ್ಷಿತುಲು "ನಾನೇನು ಮಾಡಲಿ, ನನಗೆ ಮೂವರು ಹೆಣ್ಣು ಮಕ್ಕಳಿದ್ದಾರೆ. ಅವರ ಮದುವೆಗಾಗಿ ಈ ಒಡವೆ ಕದ್ದೆ" ಅಂತ ಭಂಡತನದ ಸಮಜಾಯಿಷಿ ಕೊಟ್ಟರೆ ಇನ್ನೊಂದೆಡೆ ಆಂಧ್ರಪ್ರದೇಶದಾದ್ಯಂತ ಈಗ ಇದರದ್ದೇ ಗದ್ದಲ. ಜನ ತಿರುಪತಿಯ ಒಟ್ಟು ಆಸ್ತಿ ಎಷ್ಟು? ಒಡವೆ ಎಷ್ಟಿದೆ? ಆದಾಯ ಎಷ್ಟು? ಖರ್ಚು ಎಷ್ಟು? ಲೆಕ್ಕ ಎಲ್ಲಿದೆ? ಎಂದು ಪ್ರಶ್ನಿಸುತ್ತಿದ್ದಾರೆ.

ಕೊನೆಗೆ ವೃತ್ತಿನಿರತ ಕಳ್ಳನೂ ಅಲ್ಲ, ಬದಲಾಗಿ ಅದೇ ದೇವಸ್ಥಾನದ ಪೂಜಾರಿ!

ಆಂಧ್ರಪ್ರದೇಶದ ಹೈಕೋರ್ಟಿನ ಆದೇಶವಿರದೇ ಹೋಗಿದ್ದರೆ ಈ ಕಳ್ಳತನವೂ ಬಯಲಿಗೆ ಬೀಳುತ್ತಿರಲಿಲ್ಲ. ಆಂಧ್ರದ ಬೇಜವಾಡ ಗೋವಿಂದ ರೆಡ್ಡಿ ಎಂಬಾತ ಕೆಲ ತಿಂಗಳ ಹಿಂದೆ ಕೋರ್ಟಿಗೆ ಒಂದು ಮನವಿ ನೀಡಿ 'ತಿರುಮಲ ತಿರುಪತಿ ದೇವಸ್ಥಾನದಲ್ಲಿ 12 ಟನ್‌ನಷ್ಟು ಚಿನ್ನ-ವಜ್ರದ ಒಡವೆಗಳಿವೆ, ಆದರೆ ಯಾರೂ ಇದರ ಸರಿಯಾದ ಲೆಕ್ಕ ಇಟ್ಟಿಲ್ಲ, ಈ ಬಗ್ಗೆ ತನಿಖೆ ಮಾಡಿಸಿ ಸರಿಯಾದ ದಾಖಲೆ ಇಡಬೇಕು' ಎಂದು ಕೋರಿದ್ದ. ಇದಕ್ಕೆ ಕೋರ್ಟು ಆಗಲಿ ಎಂದು ಹೇಳಿತ್ತು. ಈ ಗೋವಿಂದ ರೆಡ್ಡಿ ಪ್ರಕಾರ ತಿರುಪತಿ ಹುಂಡಿಯ ದಾಸ್ತಾನಿನಲ್ಲಿರುವ ಒಂದು ಸಾವಿರದ ಇನ್ನೂರು ಕೆ.ಜಿ. ಚಿನ್ನ-ವಜ್ರದ ಇವತ್ತಿನ ಬೆಲೆ ಬರೋಬ್ಬರಿ ಐವತ್ತೆರಡು ಸಾವಿರ ಕೋಟಿ ರೂಪಾಯಿಗಳಂತೆ.

ಸಿಕ್ಕಿಬಿದ್ದ ಕಳ್ಳ ಪೂಜಾರಿ

ತಿರುಮಲ ತಿರುಪತಿ ದೇವಸ್ಥಾನಂ (TTD)ನ

ಕಿಲಾಡಿಯೆಂದರೆ ಈ ಡೀಲ್‌ಗೂ ದೀಕ್ಷಿತನಿಂದ ಮೂರು ಲಕ್ಷ ರೂಪಾಯಿ ಪಡೆದೇ ಒಡವೆ ಕೊಟ್ಟಿದ್ದ. ಈ ಮಧ್ಯೆ ಒಡವೆಗಳ ತಪಾಸಣೆ ಶುರುಮಾಡಿದ್ದ ವಿಜಿಲೆನ್ಸ್ ಕಮಿಟಿಯ ಕೃಷ್ಣರಾವ್ ಎಂಬಾತನಿಗೆ ಪೂಜಾರಿ ವೆಂಕಟರಮಣನ ಅಸಹಜ ನಡವಳಿಕೆ ಬಗ್ಗೆ ಅನುಮಾನ ಬಂದಿತ್ತು. ಇನ್ನಷ್ಟು ವಿಚಾರಿಸಿ ನೋಡಿದಾಗ ಕಳ್ಳತನದ ವಿಷಯವೇ ಆಚೆಗೆ ಬಂತು. ಪರಿಣಾಮವಾಗಿ ದೀಕ್ಷಿತ್ ಈಗ ವಿಷ್ಣುವಿನ ಅವತಾರವಾದ ವೆಂಕಟೇಶ್ವರನ ಸನ್ನಿಧಿಯಿಂದ ವಿಷ್ಣುವಿನ ಇನ್ನೊಂದು ಅವತಾರವಾದ ಶ್ರೀಕೃಷ್ಣನ ಜನ್ಮಸ್ಥಾನ ಸೇರಿಕೊಂಡಿದ್ದಾರೆ.

ತಿರುಪತಿಗೆ ಹೋಗಿ ಹುಂಡಿಗೆ ಕಾಸು, ಒಡವೆ ಹಾಕಿ ಬರುವ ಭಕ್ತರಿಗೆಲ್ಲ ತಾವು ನೀಡಿದ್ದು ದೇವರಿಗೆ ತಲುಪಿತೆಂಬ ಸಮಾಧಾನವಿರುತ್ತದೆ. ಆದರೆ ಈಗ ಬೇಲಿಯೇ ಎದ್ದು ಹೊಲ ಮೇಯ್ದಂತೆ ದೇವಸ್ಥಾನದ ಪೂಜಾರಿಯೇ ಒಡವೆ ಕದ್ದು ಮಾರ್ವಾಡಿಗಳೊಂದಿಗೆ ಡೀಲು ಕುದುರಿಸಿಕೊಂಡಿರುವ ಸುದ್ದಿ ಕೇಳಿ ಲಕ್ಷಾಂತರ ಭಕ್ತರಿಗೆ ಸಿಡಿಲು ಬಡಿದಂತಾಗಿದೆ.

ಪಾಲಾಗುವುದಾದರೆ ಭಕ್ತರೇಕೆ ಅಷ್ಟು ದೂರ ಹೋಗಿ ದಾನ ಮಾಡಿಬರಬೇಕು?

ಒಡವೆಗಳ ರಾಮನ ಲೆಕ್ಕ-ಕೃಷ್ಣನ ಲೆಕ್ಕ

ತಿರುಪತಿಯ ಆದಾಯದ ಮೇಲೆ, ಆಡಳಿತದ ಮೇಲೆ ಈಗ ಆಂಧ್ರ ಸರ್ಕಾರದ ಹತೋಟಿಯಿದೆ. ಎನ್.ಟಿ. ರಾಮರಾವ್ ಮಾಡಿದ ಕಾನೂನು ಅದು. ಅದಕ್ಕೂ ಮುನ್ನ ಎಷ್ಟು ಜನ ಬಂದರು? ಹುಂಡಿಗೆ ಬಿದ್ದ ಹಣ ಎಷ್ಟು ಕೋಟಿ? ಒಡವೆಗಳ ಲೆಕ್ಕ ಇತ್ಯಾದಿ ಏನನ್ನೂ ಸರ್ಕಾರ ಕೇಳುವಂತಿರಲಿಲ್ಲ, ಎಲ್ಲವನ್ನೂ ದೇವಸ್ಥಾನದ ಆಯಕಟ್ಟಿನ ಜಾಗಗಳಲ್ಲಿದ್ದ ಕೆಲವೇ ಕೆಲವು ಬ್ರಾಹ್ಮಣ ಪೂಜಾರಿಗಳೇ ಕಂಟ್ರೋಲ್ ಮಾಡುತ್ತಿದ್ದರು. ಇದನ್ನೆಲ್ಲಾ



ವೆಂಕಟರಮಣ ದೀಕ್ಷಿತುಲು

ತಿರುಪತಿ ಒಡವೆ ಬೆಲೆ 50,000 ಕೋಟಿ!

ಹಾಲಿ ತಿರುಪತಿ ಕ್ಷೇತ್ರದ ಶಾಸಕ ನಟ ಚಿರಂಜೀವಿ "ದೇವರಿಗೆ ರಕ್ಷಣೆ ಇರದ ಮೇಲೆ ಇನ್ನೂ ಸಾಮಾನ್ಯ ಜನರ ಪಾಡೇನು?" ಅಂತ ಅರ್ಭಟಿಸುತ್ತಿದ್ದಾನೆ. ಕರ್ನಾಟಕ, ಆಂಧ್ರ, ತಮಿಳುನಾಡಿನಲ್ಲಿ ಕೋಟ್ಯಂತರ ಭಕ್ತರನ್ನು ಹೊಂದಿರುವ ತಿರುಪತಿಯ ಲಾರ್ಡ್ ವೆಂಕಟೇಶ್ವರ ವಿಶ್ವದ ಅತೀ ಶ್ರೀಮಂತ ದೇವರು. ಇಲ್ಲಿಗೆ ನಿತ್ಯ ನಲ್ವತ್ತು ಸಾವಿರ ಜನ ಬಂದುಹೋಗುತ್ತಿದ್ದಾರೆ. ಕೋಟ್ಯಾಂತರ ರೂಪಾಯಿ ಬೆಲೆಯ ಒಡವೆ, ವಸ್ತ್ರ ನಗದನ್ನು ಹುಂಡಿಗೆ ಸುರಿದುಹೋಗುತ್ತಿದ್ದಾರೆ. ಹೀಗೆ ಕಲೆಕ್ಟ್ ಆಗುವ ದುಡ್ಡೇ ವರ್ಷಕ್ಕೆ ಎಂಟುನೂರು ಕೋಟಿಯಷ್ಟಾಗುತ್ತಿದೆ. ಲಾಡು, ಚಿನ್ನದ ಡಾಲರ್ ಮಾರಾಟದಿಂದಲೂ ನೂರಾರು ಕೋಟಿ ರೂಪಾಯಿ ಬರುತ್ತಿದೆ.

ಈ ಲಾಡು-ಪಾಡು ವಿಚಾರ ಬಿಡಿ. ತಿರುಪತಿಗೆ ಬಂದು ತಲೆಬೋಳಿಸಿಕೊಳ್ಳುವ ಭಕ್ತರ ತಲೆಕೂದಲಿನ ಮಾರಾಟದಿಂದಲೇ ವರ್ಷಕ್ಕೆ ನೂರೈವತ್ತು ಕೋಟಿ ರೂಪಾಯಿಗಳ ಆಮದನಿಯಿದೆ.

ಇಷ್ಟೆಲ್ಲಾ ಶ್ರೀಮಂತ ವ್ಯವಹಾರಗಳಿರುವ ವೆಂಕಟೇಶ್ವರನಿಗೆ, ದೇವಸ್ಥಾನಕ್ಕೆ ಹಾಗೂ ಬಂದುಹೋಗುವ ಲಕ್ಷಾಂತರ ಜನರ ಉಸ್ತುವಾರಿಗೆ ಸೆಕ್ಯೂರಿಟಿ ಸಿಬ್ಬಂದಿಯೇ ಎರಡು ಸಾವಿರದಷ್ಟಿದ್ದಾರೆ.

ಇವರನ್ನೂ ನಂಬಬಾರದೆಂದು ದೇವಸ್ಥಾನದ ಮೂಲೆಮೂಲೆಗಳಲ್ಲೂ ಸಿಸಿ ಕ್ಯಾಮೆರಾಗಳನ್ನು ಹಾಕಲಾಗಿದೆ. ದೇವರ ಹುಂಡಿ, ಒಡವೆಗಳ ಪೆಟ್ಟಿಗೆಯನ್ನು ಯಾರಾದರೂ ಅನಧಿಕೃತವಾಗಿ ಮುಟ್ಟಿದರೆ ತಕ್ಷಣ ಸೈರನ್ ಕೂಗುವ ಸೆಕ್ಯೂರಿಟಿ ವ್ಯವಸ್ಥೆಯೂ ಇಲ್ಲಿದೆ. ಇದೆಲ್ಲದರ ಉಸ್ತುವಾರಿಗೆಂದು 13 ಜನರ ಆಡಳಿತ ಮಂಡಳಿಯೂ ಒಂದಿದೆ. ಜೊತೆಗೆ ಉಗ್ರರ ದಾಳಿ ಇತ್ಯಾದಿ ಅನಾಹುತ ತಡೆಯಲು ಮೊಬೈಲ್ ಜಾಮರ್‌ಗಳು ವಾಚ್‌ಟವರ್‌ಗಳೂ ತಿರುಪತಿಯಲ್ಲಿವೆ.

ಇಷ್ಟೆಲ್ಲಾ ರಕ್ಷಣೆ-ಕಾವಲು ವ್ಯವಸ್ಥೆ ಇದ್ದಾಗಲೂ 'ಹೆಂಡತಿಯೇ ಮನೆಯಲ್ಲಿ ಕಳುವ್ವೊಡೆ' ಎಂಬಂತೆ ಲಾರ್ಡ್ ಗೋವಿಂದನ 10 ಲಕ್ಷ ರೂ. ಬೆಲೆಯ ಒಡವೆಯೊಂದು ಕಳುವಾಗಿದ್ದ ಸಂಗತಿ ಕಳೆದ ವಾರ ಬಯಲಿಗೆ ಬಂತು...

ಇದನ್ನು ಕದ್ದವನು ಉಗ್ರನೂ ಅಲ್ಲ, ಭಕ್ತನೂ ಅಲ್ಲ,

■ ಬಿಳಿದಾಳೆ ಪಾರ್ವತೀಶ



ನಿಯಂತ್ರಣದಲ್ಲಿ ಸರಿಸುಮಾರು 28 ದೇವಸ್ಥಾನಗಳಿವೆ. ಶೇಷಾದ್ರಿ, ನೀಲಾದ್ರಿ, ಗರುಡಾದ್ರಿ, ಅಂಜನಾದ್ರಿ, ವೃಷಭಾದ್ರಿ, ನಾರಾಯಣಾದ್ರಿ, ವೆಂಕಟಾದ್ರಿ ಬೆಟ್ಟಗಳಲ್ಲಿ ಹರಡಿಹೋಗಿರುವ ಈ ದೇವಸ್ಥಾನ ಸಮುಚ್ಚಯಗಳ ಪೈಕಿ ಶೇಷಾಚಲಂ ಅಥವಾ ಶೇಷಾದ್ರಿಗಿರಿಯ ಮೇಲೆ ಲಾರ್ಡ್ ವೆಂಕಟೇಶ್ವರನಿದ್ದಾನೆ. ಈಗ ಒಡವೆ ಕದ್ದಿರುವ ವೆಂಕಟರಮಣ ದೀಕ್ಷಿತನೆಂಬ ಬ್ರಾಹ್ಮಣ ಪುರೋಹಿತನು ಇದೇ ದೇವ ಸಮುಚ್ಚಯದ ಶ್ರೀಕೋದಂಡರಾಮ ದೇವಸ್ಥಾನದ ಮುಖ್ಯ ಅರ್ಚಕನಾಗಿದ್ದ. ಇವನು ಕಳೆದ ವರ್ಷ ಆಗಸ್ಟ್‌ನಲ್ಲಿ ಭಾರೀ ಬೆಲೆಯ ಒಂದೂ ಕಾಲು ಕೆ.ಜಿ. ತೂಕದ ಚಿನ್ನದ ಒಡವೆ ಕದ್ದು ಅದೇ ತಿರುಪತಿಯ ಸಾಗರ್ ಲಾಲ್ ಎಂಬ ಮಾರ್ವಾಡಿಯ ಬಳಿ ಅಡವಿಟ್ಟು 10 ಲಕ್ಷ ರೂ. ಪಡೆದಿದ್ದ. ಹೇಳುವವರು, ಕೇಳುವವರು ಯಾರೂ ಇರಲಿಲ್ಲವಾದ್ದರಿಂದ ಹಣ ಖರ್ಚು ಮಾಡಿದವನೇ ತನ್ನ ಪೌರೋಹಿತ್ಯ ಮುಂದುವರೆಸಿಕೊಂಡು ಹೋಗಿದ್ದ. ಈ ನಡುವೆ ಕೋರ್ಟು ಆದೇಶದಂತೆ ಒಡವೆಗಳ ತಪಾಸಣೆ ಶುರುವಾದಾಗ ಗಾಬರಿಯಾದ ವೆಂಕಟರಮಣ ಪುರೋಹಿತ ಮಾರ್ವಾಡಿ ಹತ್ತಿರ ಓಡಿದ್ದಾನೆ. ತಪಾಸಣೆ ನಡೆಯುವ ಒಂದು ದಿನದ ಮಟ್ಟಿಗೆ ತಾನು ಅಡ ಇಟ್ಟಿದ್ದ ದೇವರ ಒಡವೆ ವಾಪಸ್ ಪಡೆದು ತನಿಖೆ ಮುಗಿದನಂತರ ಮತ್ತೆ ಮಾರ್ವಾಡಿಗೆ ತಂದು ಕೊಡುವುದಾಗಿ ಒಪ್ಪಿಸಿ ಒಡವೆ ತಂದು ಮೊದಲಿದ್ದ ಜಾಗದಲ್ಲೇ ಇರಿಸಿಬಿಟ್ಟಿದ್ದಾನೆ. ಆ ಮಾರ್ವಾಡಿ ಎಂತಾ

ಕಳ್ಳತನ ಮಾಮೂಲು

ಮೆಜೆಸ್ಟಿಕ್‌ನಲ್ಲೋ, ಸಿಟಿ ಮಾರ್ಕೆಟ್‌ನಲ್ಲೋ ಪಿಕ್‌ಪಾಕೇಟಿನವರಿದ್ದರೆ ಅದೇನೂ ಆಶ್ಚರ್ಯಕರ ವಿಚಾರವಲ್ಲ. ಇನ್ನೂ ರಾಜಕಾರಣಿ ಕದಿಯುವುದು, ಪೊಲೀಸರೇ ವಂಚನೆ ಮಾಡುವುದು ಕೂಡಾ ಹೊಸ ವಿಚಾರವೇನಲ್ಲ, ಆದರೆ ದೇವಸ್ಥಾನದಲ್ಲೇ ಕದಿಯುವುದು, ಸ್ವತಃ ದೇವರ ಏಜೆಂಟರಾದ ಪೂಜಾರಿಗಳೇ ದೇವರ ಒಡವೆ-ಹಣ ಲಪಟಾಯಿಸುವುದೆಂದರೆ ಅದಕ್ಕಿಂತ ಅಸಹ್ಯ ಇನ್ನೊಂದಿರಲಾರದು. ಅದು ಭಕ್ತರ ನಂಬಿಕೆಗೆ ಬಗೆಯುವ ದ್ರೋಹ.

ಆದರೇನು? ತಿರುಪತಿ ದೇವಸ್ಥಾನದ ಪುರೋಹಿತರಿಗೆ ಮತ್ತು ದೇವಸ್ಥಾನದ ಸಿಬ್ಬಂದಿಗೆ ಈ ಕಳ್ಳತನದ ಚಟದ ಪರಂಪರೆಯೇ ಇದೆ. ವರ್ಷದಲ್ಲಿ ಇಂತಹ ಕಳ್ಳತನದ ಒಂದೆರಡು ಘಟನೆಗಳಾದರೂ ತಿರುಪತಿಯಲ್ಲಿ ನಡೆಯುತ್ತಲೇ ಇವೆ.

ಈಗ್ಗೆ ಒಂದೆರಡು ವರ್ಷಗಳ ಹಿಂದೆ ನವವಿವಾಹಿತ ದಂಪತಿಗಳಿಬ್ಬರು ತಿರುಪತಿಗೆ 10 ಲಕ್ಷ ರೂಪಾಯಿಗಳನ್ನು ಹುಂಡಿಗೆ ಹಾಕಿಬರಲು ಹೋಗಿದ್ದಾಗ, ಆ ಹಣ ಹುಂಡಿಗೆ ಬೀಳುವ ಮೊದಲೇ ದೇವಸ್ಥಾನದ ಸಿಬ್ಬಂದಿ ಕದ್ದರು. ನಂತರ ಪೊಲೀಸರು ಸ್ಟೋರ್‌ಕೀಪರ್ ಭಾಸ್ಕರರಾವ್ ಹಾಗೂ ರಘುನಾಥ ರೆಡ್ಡಿ ಎಂಬುವವರನ್ನು ಅರೆಸ್ಟ್ ಮಾಡಿದ್ದರು. 2006ರಲ್ಲೊಮ್ಮೆ ದೇವಸ್ಥಾನದ ಅತಿಥಿ ಗೃಹದಲ್ಲಿ ಕಳ್ಳತನವನ್ನೇ ಕಸುಬಾಗಿಸಿಕೊಂಡಿದ್ದ ನಾಲ್ವರು ಸಿಬ್ಬಂದಿ ಸಿಕ್ಕಿಬಿದ್ದಿದ್ದರು. ತೀರಾ ಇತ್ತೀಚೆಗೆ ಹುಂಡಿ ಹಣ ಎಣಿಸುವಾಗ 2 ಸಾವಿರ ರೂಪಾಯಿ ಎತ್ತಿಟ್ಟುಕೊಂಡಿದ್ದ ದಿನಗೂಲಿ ನೌಕರನೊಬ್ಬ ಸಿಕ್ಕಿಹಾಕಿಕೊಂಡ. ಈಗ ಸಾಕ್ಷಾತ್ ದೇವರ ಸೇವಕ ಪುರೋಹಿತ ವೆಂಕಟರಮಣ ದೀಕ್ಷಿತನೇ ಒಡವೆ ಕದ್ದು ಜೈಲು ಪಾಲಾಗಿದ್ದಾನೆ!



ಆದಿಕೇಶವುಲು

ಏನಿದರ ಅರ್ಥ?

ಶ್ರದ್ಧೆ-ಭಕ್ತಿಯಿಂದ ಜನ ಹುಂಡಿಗೆ ಹಾಕುವ ಹಣಕ್ಕೆ ಲೆಕ್ಕವಿಲ್ಲವೇ?

ತಾವು ದೇವರಿಗೆಂದು ನೀಡುವ ಹಣ ಹೀಗೆ ಕಳ್ಳರ

ನೋಡಿ ಸಿಟ್ಟಿಗೆದ್ದ ಮುಖ್ಯಮಂತ್ರಿ ಎನ್.ಟಿ.ಆರ್. ಹೊಸ ಕಾನೂನನ್ನೇ ತಂದು ಎಲ್ಲವನ್ನೂ ಸರ್ಕಾರಿ ನಿಯಂತ್ರಣಕ್ಕೆ ತಂದಿದ್ದರು. ಈಗ ತಿರುಪತಿ ದೇವಸ್ಥಾನದ ವ್ಯವಹಾರ ನಿಭಾಯಿಸಲು 13 ಜನರ ಕಮಿಟಿಯೊಂದಿದೆ. ಸದ್ಯಕ್ಕೆ ಕರ್ನಾಟಕದ ಹೆಂಡದ ದೊರೆ ಆದಿಕೇಶವುಲುನೇ ಅದರ ಅಧ್ಯಕ್ಷ. ಉಳಿದಂತೆ ಕೆಲ ಸರ್ಕಾರಿ ಅಧಿಕಾರಿಗಳು, ಪುರೋಹಿತರೆಲ್ಲ ಕಮಿಟಿಯಲ್ಲಿದ್ದಾರೆ. ಈ ಕಮಿಟಿಗೆ ಕೆಲವು ಕರ್ತವ್ಯವೂ ಜವಾಬ್ದಾರಿಗಳೂ ಇವೆ. ಆದರೇನು ಅಲ್ಲಿ ಕಳ್ಳತನ ದೇವರ ಆಸ್ತಿಯ ದುರುಪಯೋಗ ನಿಂತೇ ಇಲ್ಲ. ಉದಾಹರಣೆಗೆ ಹೇಳಬೇಕೆಂದರೆ ಪ್ರತಿವರ್ಷ ದೇವಸ್ಥಾನದ ಆಸ್ತಿ, ಒಡವೆ ಇನ್ನಿತರೆ ಬೆಲೆಬಾಳುವ ವಸ್ತುಗಳ ಮೌಲ್ಯ ಮಾಪನ ಮಾಡಿ appraiser ಒಬ್ಬರು ತನಿಖಾ ವರದಿ ಕೊಡಬೇಕೆಂಬ ನಿಯಮವಿದೆ. ಈ ವರದಿಯನ್ನು ದೇವಸ್ಥಾನದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಆಫೀಸರ್‌ಗೆ ಕೊಡಬೇಕು...


ಹೀಗೆ ತನಿಖೆ ನಡೆಸುವಾಗ ಕೇಂದ್ರ ಸರ್ಕಾರ ನೇಮಿಸಿರುವ ಹಣಕಾಸು ಸಲಹೆಗಾರನೊಬ್ಬ ಹಾಗೂ ಚೀಫ್ ಅಕೌಂಟ್ಸ್ ಆಫೀಸರನೊಬ್ಬ ಸ್ಥಳದಲ್ಲಿರಬೇಕು. ಇವರ ಜೊತೆಗೆ ಟಿಟಿಡಿಯ ವಿಜಿಲೆನ್ಸ್ ಆಫೀಸರೂ ಹಾಜರಿರಬೇಕಿರುತ್ತದೆ. ಆದರೆ ತಿರುಪತಿಯಲ್ಲಿ ಒಬ್ಬ appraiser ಬಿಟ್ಟರೆ ಉಳಿದ ಸರ್ಕಾರಿ ಅಧಿಕಾರಿಗಳು ಯಾರೂ ನೇಮಕಗೊಳ್ಳದಂತೆ ಮಾಡಲಾಗಿದೆ. ಹಾಗಾಗಿ ಮೂರು ಬೇರೆ ಬೇರೆ ಇಲಾಖೆಗಳಿಂದ ಇರಬೇಕಿದ್ದ ನಾಲ್ವರು ಅಧಿಕಾರಿಗಳ ಬದಲಾಗಿ ದೇವಸ್ಥಾನದ ಕೇವಲ ಇಬ್ಬರೇ ಒಬ್ಬರು ತಪಾಸಣೆ ಮಾಡಿ ಮುಗಿಸುತ್ತಿದ್ದಾರೆ. ಇನ್ನು ಇವರ ತಪಾಸಣೆ ಎಷ್ಟು ತಮಾಷೆಯಾಗಿರುತ್ತದೆಂದರೆ ಯಾವ ದಿನಾಂಕದಂದು ಯಾವ ಯಾವ ಹುಂಡಿ, ತಿಜೋರಿಯ ಚೆಕಿಂಗ್ ಇದೆ ಎಂದು ಮೊದಲೇ ಅನೌನ್ಸ್ ಮಾಡಿರುತ್ತಾರೆ. ಕಳ್ಳ ಪೂಜಾರಿ ವೆಂಕಟರಮಣ ದೀಕ್ಷಿತ್ ಇದನ್ನೇ ಅವಕಾಶವಾಗಿ ಬಳಸಿಕೊಂಡು ತಾನು ವರ್ಷದ ಹಿಂದೆ ಕದ್ದಿದ್ದ ಚಿನ್ನದ ಹಾರವನ್ನು ತಪಾಸಣೆಯ ಒಂದು ದಿನದ ಮಟ್ಟಿಗೆ ವಾಪಸ್ ತಂದಿರಿಸಲು ತಂತ್ರಮಾಡಿದ್ದ.

▶▶▶



ವೆಂಕಟೇಶ್ವರನಿಗೆ ಆಡಳಿತ ಮಂಡಳಿಯವರು, ...ಲ್ಲ ಸೇರಿಕೊಂಡು ಹೇಗೆ ನಾಮ ಎಳೆಯುತ್ತಿದ್ದಾ ...ಲು ಹೊರಟರೆ ಅದೇ ಒಂದು ಹರಿಕತೆಯಾಗುತ್ತದೆ. ...ಕರಣೆಗೆ ಈ appraiser- ಅಂದರೆ ಒಡವೆಗಳ ...ರಿಸುವವ ಇದ್ದಾನಲ್ಲ ಅವನು ಒಂದು ವಂಚಕ ...ತ್ತಾನೆ.

...ಒಡವೆ ಯಾವ ದಿನಾಂಕ, ಇಸವಿಯಲ್ಲಿ ದಾನವಾಗಿ ...ತ್ತು ಎನ್ನುವುದನ್ನು ನೋಡಿ, ತೂಕ ಹಾಕಿ ಒಡವೆಯ ...ನಿಸಿ ದಾಖಲಿಸಿಕೊಳ್ಳುತ್ತಾನೆ. ಆದರೆ ದಿನಕಳೆದಂತೆ ...ಜಾಸ್ತಿಯಾಗುತ್ತದಲ್ಲ. ಅದರ ಆಧಾರದಲ್ಲಿ ಈ ... ಹೊಸ ಮಾರುಕಟ್ಟೆ ಬೆಲೆ ಕಟ್ಟದೆ ಹಳೆಯ ...ಮೌಲ್ಯ ನಿಗದಿ ಮಾಡುತ್ತಾರೆ. ಹಾಗಾಗಿ ದೇವಸ್ಥಾನದ ...ದು ಇಲ್ಲಿರುವ ಒಡವೆಗಳ ಬೆಲೆ ಐನೂರು ಕೋಟಿ ... ಅಷ್ಟೇ ಅನ್ನುತ್ತಿದ್ದಾರೆ.




...ಬಗ್ಗೆ ಕೇಸ್ ಹಾಕಿರುವ ...ಗೋವಿಂದ ರೆಡ್ಡಿ ...ಬೆಲೆ ಐವತ್ತು ಸಾವಿರ ...ರೂಪಾಯಿ ಯಷ್ಟಿದೆ' ...ಳಿಕೆ ಕೊಟ್ಟದ್ದಾನೆ.

...ಉಳಿದಿರೋದೆಷ್ಟು, ...ರೋದೆಷ್ಟು? ಸಾಕ್ಷಾತ್ ...ಗೂ ಗೊತ್ತಿರಲಾರದು

...ಾಗೆ ತಿರುಪತಿ ಶ್ರೀನಿವಾಸ ದೇವರು ಪದ್ಮಾವತಿ ...ರೇಜ್ ಮಾಡಿಕೊಳ್ಳುವಾಗ ಕುಬೇರನಿಂದ ಭಾರೀ ...ದ್ದನಂತೆ. ಈಗ ಭಕ್ತರು ಕೊಡುತ್ತಿರುವ ಹಣವೆಲ್ಲ ... ಸಾಲ ತೀರಿಸುವುದಕ್ಕೆ ಹೋಗುತ್ತಿದೆ ಎಂತಲೂ, ...ಮ್ಮಪ್ಪನ ಸಾಲ ತೀರಿಸಬೇಕೆಂತಲೂ ಬ್ರಾಹ್ಮಣ ...ರು ಕತೆ ಹೊಸೆಯುತ್ತಿರುತ್ತಾರೆ.

...ಃ ನೀವೂ ಈ ಕತೆ ಕೇಳಿರುತ್ತೀರಿ. ಒಂದು ಪಕ್ಷ ...! ಕತೆ ನಿಜ ಅಂತಿಟ್ಟುಕೊಂಡರೂ ತಿಮ್ಮಪ್ಪನ ಸಾಲ ...ೂ ತೀರುವುದಿಲ್ಲ. ಏಕೆಂದರೆ ದೇವರಿಗೆಂದು ಭಕ್ತ ...ಅದನ್ನು ಪೂಜಾರಿ ದೇವರಿಗೆ ಕೊಡದೇ ತಾನೇ ...ತ್ತಾನಲ್ಲ!

... ತಿಮ್ಮಪ್ಪನ ಸಾಲ ತೀರುವುದೆಂತು? ●



ಕಳ್ಳ ಪೂಜಾರಿ ಮಾತ್ರವಲ್ಲ, ಖದೀಮ ಭಕ್ತರೂ ಇದ್ದಾರೆ

ತಿರುಪತಿ ತಿಮ್ಮಪ್ಪನ ...ಗದಲ್ಲಿ ಕಳ್ಳತನ ಮಾಡುವ ಪೂಜಾರಿಗಳು ...ಲ್ಲ ಅಸಂಖ್ಯಾತ ಖದೀಮ ಭಕ್ತರೂ ಇದ್ದಾರೆ. ...ಮುಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿಯೇ ...ಜೀವಂತ ಸಾಕ್ಷಿ. ಹುಟ್ಟಿದಾಗಿನಿಂದಲೂ ವಂಚಕ ...ಕೃಷ್ಣಯ್ಯ ಶೆಟ್ಟಿ ಜೀವನಪೂರ್ತಿ ಜೈಲಲ್ಲಿರ ಬೇಕಾದ ... ಆದರೂ ಎಬಿಸ್ ವೆಂಕಟೇಶ್ವರನ ಭಕ್ತ, ಇವನು ...ದಾಗಿದ್ದಾಗ ತಿರುಪತಿ ಲಾಡು ತರಿಸಿ ಹಂಚಿದ್ದೇನು, ...ಿ ವಿತರಿಸಿದ್ದೇನು, ಮೂರು ದಿನಕ್ಕೊಮ್ಮೆ ... ಯಾತ್ರೆ ಮಾಡಿದ್ದೇನು?

... ಹೌಸಿಂಗ್ ಬೋರ್ಡ್ ಭೂಹಗರಣದಲ್ಲಿ ...ನ್ನಷ್ಟೆ.

...ಷನ ದೈವ ಭಕ್ತಿಗೇನಾದರು ಅರ್ಥವಿದೆಯಾ? ...ಸಂಪತ್ತಿಗೆ ಕ್ಯಾಟಗರಿಯ ಬಳ್ಳಾರಿ ರೆಡ್ಡಿ ಬ್ರದರ್ಸ್ ...?

... [illegible] ...ದ್ದಿಗಳೂ ತಿರುಪತಿ ತಿಮ್ಮಪ್ಪನ ಭಕ್ತರೆ! ಕಳೆದ ... 45 ಕೋಟಿ ರೂಪಾಯಿ ಬೆಲೆಯ ರತ್ನ ...ಕಿರೀಟವೊಂದನ್ನು ಇವರು ತಿಮ್ಮಪ್ಪನಿಗೆ ...ದ್ದಾರೆ.

...ಲ್ಲಾ ಥಳಕು ಒಳಗೆಲ್ಲಾ ಹುಳುಕಿರುವ ... ●

ಮಲಗಿದ ಸ್ವಾಮಿಗೆ ಮಂಚವೇ ಉರುಳಾಯಿತು!



ಮಲಗುವ ಕೋಣೆಗೆ 28 ಲಕ್ಷ ರೂಪಾಯಿ ಖರ್ಚು, ಅತ್ಯುತ್ತಮ ಘಸಲಿನ ಜಮೀನು ಮಾರಿ ಓಡಾಡಲು ವಾಹನ ಖರೀದಿ, ಕುಂತರೂ ನಿಂತರೂ ಮದ್ಯಾರಾಧನೆ, ರಾಜಧಾನಿಗೆ ಹೋದರೂ, ವಿದ್ಯಾನಗರಿಯಲ್ಲಿದ್ದರೂ ಮೈಕೈ ಹಿಸುಕೋಕೆ ಹೆಣ್ಣು ಜೀವಗಳು, ಎಂಟೇ ವರ್ಷಗಳಲ್ಲಿ 15 ಕೋಟಿ ರೂಪಾಯಿ ಆಸ್ತಿ ಗೋವಿ...ಂದ.

ಇದು ಯಾವುದೋ ಸಿನೇಮಾದ ವಿಲನ್‌ನ ಪಾತ್ರ ಪರಿಚಯವಲ್ಲ, ಬದಲಾಗಿ ಧಾರವಾಡ ಮುರುಘಾಮಠದ ಶಿವಯೋಗಿ ಮಹಾಸ್ವಾಮಿಗಳ ಜೀವನ!

ಹೌದು, ಇಡೀ ಕರ್ನಾಟಕ ಬೆಚ್ಚಿಬೀಳುವಂತಹ ಎಡಬಿಡಂಗಿ ಕೆಲಸಗಳನ್ನು ಮಾಡಿದ್ದಾನೆ ಈ ಶಿವಯೋಗಿ ಸ್ವಾಮಿ. ಸೌಹಾರ್ದತೆಯ ಸಾಕಾರ ಮೂರ್ತಿಯಂತಿದ್ದ ಶ್ರೀ ಮೃತ್ಯುಂಜಯ ಸ್ವಾಮಿಗಳ ತಪಸ್ಸಿನ ಫಲವಾಗಿದ್ದ ಮುರುಘಾಮಠವನ್ನು ಅಧ್ವಾನ ಮಾಡಿಟ್ಟಿದ್ದಾನೆ. ಒಂಭತ್ತನೆಯ ತರಗತಿಯಲ್ಲೇ ಫೇಲಾಗಿದ್ದ ಓರ್ವ ಅಪಾಪೋಲಿಯು ಕೋಟ್ಯಂತರ ರೂಪಾಯಿ ಬೆಲೆಬಾಳುವ ಮಠಕ್ಕೆ ಬಂದು ಕೂತರೇ ಏನೆಲ್ಲಾ ಮಾಡಬಹುದು ಎಂಬುದನ್ನ ಈ ಶಿವಯೋಗಿ ತೋರಿಸಿಕೊಟ್ಟಿದ್ದಾನೆ. ಮಠದೊಳಗೆ ಈತ ಆಡದ ಆಟವಿಲ್ಲ, ನೋಡದ ಮಜಗಳು ಇಲ್ಲ.




ಹಿರಿಯ ಸ್ವಾಮಿಗಳಾಗಿದ್ದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳನ್ನ ನಂಬಿದ ಭಕ್ತರು ಜಾತಿ-ಭೇದ ಎಣಿಸದೇ ದಾನ-ಧರ್ಮ ಮಾಡಿದ್ದರು. ಆ ಕಾರಣದಿಂದಲೇ ಮಠ ಭಾವೈಕ್ಯತೆಯ ಬೀಡಾಗಿತ್ತು, ಬಂದುಹೋಗುವ ಎಲ್ಲ ಮತದವರಿಗೂ ಮಠದಲ್ಲಿ ಗೌರವ ಸಿಗುತ್ತಿತ್ತು. ಶ್ರೀ ಮೃತ್ಯುಂಜಯ ಸ್ವಾಮಿಗಳನ್ನ ನೋಡಿದವರು ಇಂದಿಗೂ ಇದ್ದಾರೆ. ಅಷ್ಟೇ ಏಕೆ, ಅವರನ್ನು ನಡೆದಾಡುವ ದೇವರು ಎಂದು ಉವಾಚಿಸುತ್ತಾರೆ.

ಮುಂದೊಂದು ದಿನ ಮೃತ್ಯುಂಜಯ ಮಹಾಸ್ವಾಮಿಗಳು ಕುಂದಗೋಳ ತಾಲೂಕಿನ ಪಶುಪತಿಹಾಳದ ಮಹಾಂತ ಹಿರೇಮಠರನ್ನ ತಮ್ಮ ಮರಿಯನ್ನಾಗಿ ಮಾಡಿಕೊಂಡರು. ಮೃತ್ಯುಂಜಯ ಸ್ವಾಮಿಗಳ ಎಲ್ಲ ಆದರ್ಶಗಳನ್ನು ಅಳವಡಿಸಿಕೊಂಡಿದ್ದ ಮಹಾಂತಪ್ಪ ಮಹಾಸ್ವಾಮಿಗಳ ಕಾಲದಲ್ಲಿ ಭಕ್ತರ ಸಂಖ್ಯೆ ಪ್ರತಿನಿತ್ಯ ಹೆಚ್ಚಾಗತೊಡಗಿತು. ಮುರುಘಾಮಠ ಎಲ್ಲ ಧರ್ಮೀಯರ ಶ್ರದ್ಧಾ ಕೇಂದ್ರವಾಗುತ್ತ ಹೊರಟಿತು. 12 ಎಕರೆ ಪ್ರದೇಶದಲ್ಲಿ ಮಠ, ಶಿವಾನುಭವ ಮಂಟಪ, ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಗದ್ದುಗೆ ಎಲ್ಲವೂ ನಿರ್ಮಾಣಗೊಂಡವು. ಭಕ್ತರೇ ಮುಂದೆ ನಿಂತು ಮಠಕ್ಕೆ ಎಲ್ಲ ಬೆಂಬಲವನ್ನು ನೀಡಿ ಆನಂದಿಸಿದರು.

ಆದರೆ ಅವರ ಆ ಆನಂದ ಬಹಳ ದಿನ ಉಳಿಯಲಾರದು ಎಂಬ ಸತ್ಯ ಮಹಾಂತಪ್ಪಗಳಿಗೆ ಅಂದೇ ಗೊತ್ತಾಗಿದ್ದರೆ 9ನೇ ತರಗತಿಯಲ್ಲಿ ಫೇಲಾಗಿದ್ದ 'ಪೇಲವ' ಶಿವಯೋಗಿ ಹಿರೇಮಠ ಮುರುಘಾಮಠಕ್ಕೆ ಮಹಾಸ್ವಾಮಿ ಆಗುತ್ತಿರಲಿಲ್ಲ. ಅದೊಂದು ತಪ್ಪು ಮಹಾಂತಪ್ಪಗಳಿಂದ ನಡೆದುಹೋಯಿತು. ಬಹುಶಃ ತಮ್ಮ ಅಣ್ಣನ ಮಗನಾಗಿದ್ದ ಈತ ಸ್ವಾಮಿಯಾದ ನಂತರ ಸುಧಾರಿಸಬಹುದು ಎಂದು ಅವರು ಭಾವಿಸಿದ್ದರು.

ಯಾವಾಗ ಈ ಶಿವಯೋಗಿಯು ಮಹಾಸ್ವಾಮಿಯ ಗೆಟಪ್‌ನಲ್ಲಿ ಕಂಗೊಳಿಸತೊಡಗಿದನೋ ಆಗಿನಿಂದಲೇ ಅವನ ಸುತ್ತಲೂ ಘಟನಾಘಟ (?) ಗಳು ಕಾಣತೊಡಗಿದರು. ಬೆಂಗಳೂರಿನ ಬಸವನಗುಡಿಯಲ್ಲಿರುವ ನಿಜಗುಣ ಜಂಗಮ ಮಠದ ಹಾಲಿ ಸ್ವಾಮಿ ಕಾರಿನಲ್ಲಿ ಮುರುಘಾಮಠಕ್ಕೆ ಬಂದುಹೋಗತೊಡಗಿದ. ಆಗಿನ ಕಾಲಕ್ಕೆ ಮಾರುತಿ ಕಾರ್ ಅಂದ್ರೇನೆ ಎಲ್ಲರೂ ಹುಬ್ಬೇರಿಸುತ್ತಿದ್ದರು. ಈ ಶಿವಯೋಗಿಯೂ ಬೆಂಗಳೂರಿನ ಸಹವಾಸಕ್ಕೆ ಬಿದ್ದುಬಿಟ್ಟ. ತಾನು 'ಸಾಧು' ಆಗಿರಬೇಕು ಎಂಬುದನ್ನು ಮರೆತ ಶಿವಯೋಗಿಗೆ ಅದೇ ಕಾರು ಮುಳುವಾಯಿತು. ದಾವಣಗೇರಿ ಸಮೀಪ ರಸ್ತೆ ಅಪಘಾತವಾದಾಗ ಈಗ ಜೀನ್ಸ ಪ್ಯಾಂಟ್, ಟಿ-ಶರ್ಟ್ ಧರಿಸಿದ್ದು ಗೊತ್ತಾಯಿತು. ಅದಕ್ಕೆ ಧಾರವಾಡ ಮಾಳಾಪುರದಲ್ಲಿರುವ ಡಾ.ರಾಮನಗೌಡರೇ ಸಾಕ್ಷಿ. ಈ ಘಟನೆ ಬಗ್ಗೆ ಮೊನ್ನೆ ಉಳವಿ ಚೆನ್ನಬಸವೇಶ್ವರ ದೇವಸ್ಥಾನದಲ್ಲಿ ನಡೆದ ಸಭೆಯಲ್ಲಿ ಹೇಳಿಯೂಬಿಟ್ಟಿದ್ದಾರೆ ಪಾಪ. ಆ ಅಪಘಾತದ ನಂತರ ಶಿವಯೋಗಿ ತನ್ನ ಎರಡು ಕಾಲುಗಳಿಗೂ ರಾಡ್ ಹಾಕಿಕೊಳ್ಳಬೇಕಾಯಿತು. ಹಾಗಂತ ಶಿವಯೋಗಿಯ 'ಯೋಗಾಭ್ಯಾಸ' ನಿಲ್ಲಲಿಲ್ಲ. ದಣಿದ ದೇಹಕ್ಕೆ ಬಹುಶಃ ಶಿವಜ್ಞಾನಕ್ಕಿಂತ ಅದೇ ಸರಿಯೆನಿಸಿರಬೇಕು!

ಮುರುಘಾಮಠದ ಮಾನ-ಮರ್ಯಾದೆ ಬೀದಿಗೆ ಬರಬಾರದು ಎಂಬ ಉದ್ದೇಶದಿಂದ ಸ್ವಾಮಿಯ ಅನೇಕ ರಂಖಲುಗಳನ್ನು ಭಕ್ತರೇ ಮುಚ್ಚತೊಡಗಿದರು. ಆದರೆ ಶಿವಯೋಗಿ ಇದನ್ನೇ ದುರುಪಯೋಗಪಡಿಸಿಕೊಂಡ. ಈತ ಮಠಕ್ಕೆ ಬಂದ ಮೇಲೆ ಮೂರು ಕಾಸಿನ ಆಸ್ತಿ ಮಾಡದಿದ್ದರೂ ಆಗಲೇ ಮಾಡಿದ್ದ ಆಸ್ತಿಪಾಸ್ತಿಯೆಲ್ಲವನ್ನೂ ಒಂದೊಂದಾಗಿ ಗುಟ್ಟಾಗಿ ಮಾರಲಾರಂಭಿಸಿದ.



ಕೋಳಿವಾಡದ ನಾಲ್ಕು ಎಕರೆ, ಮಲ್ಲಿಗ್ವಾಡ ಬಳಿಯ 22 ಎಕರೆ, ಬಸವಕಲ್ಯಾಣದಲ್ಲಿನ ಮೂರು ಎಕರೆ, ರಾಮದುರ್ಗದ ತೋರಣಘಟ್ಟ ಗ್ರಾಮದ ಆರು ಎಕರೆ, ಗೋಕಾಕದಲ್ಲಿನ ಎರಡು ಅಂಗಡಿ, ಹಾವೇರಿ ತಾಲೂಕಿನ ನೀರಲಗಿ ಗ್ರಾಮದ ಆರು ಎಕರೆ ಜಮೀನುಗಳೆಲ್ಲವೂ ಇದೇ ರೀತಿ ಖಾಲಿಯಾದವು. ಧಾರವಾಡ ಯಳಮಲಿ ಜಿನ್ ಮಾರಾಟ, ಯುಕೋ ಬ್ಯಾಂಕನಲ್ಲಿ 15 ಲಕ್ಷ ರೂಪಾಯಿ ಲೀಸ್, ಅದೇ ಬ್ಯಾಂಕಿನಲ್ಲಿ ಎಫ್‌ಡಿ ಸಾಲ, ಪಂಜಾಬ್ ನ್ಯಾಷನಲ್ ಬ್ಯಾಂಕಿನಿಂದ 30 ಲಕ್ಷ ಸಾಲಗಳನ್ನೂ ಮಾಡಿಕೊಂಡ.

ಇದೆಲ್ಲದರ ಜೊತೆಗೆ ಶಿವಯೋಗಿಯ ಅಣ್ಣನ ಮಗಳನ್ನು ಮದುವೆ ಮಾಡಿಕೊಂಡಿರುವ ಮೃತ್ಯುಂಜಯ ವಸ್ತ್ರದನ ಹೆಸರಿನಲ್ಲಿ ಸಾಧನಕೇರಿಯಲ್ಲಿ ಒಂಭತ್ತು ಗುಂಟೆ ಜಾಗವನ್ನ ಪ್ರತಿ ಗುಂಟೆಗೆ ಆರು ಲಕ್ಷದಂತೆ ಖರೀದಿ ಮಾಡಿಕೊಟ್ಟಿದ್ದಾನೆ. ಅಥಣಿಯಲ್ಲಿ ಮೂರಂತಸ್ತಿನ ವಾಣಿಜ್ಯ ಮಳಿಗೆ, ಧಾರವಾಡದ ನಾರಾಯಣಪೂರದಲ್ಲಿ 38 ಲಕ್ಷ ರೂಪಾಯಿ ವೆಚ್ಚದ ಐಷಾರಾಮಿ ಮನೆಯನ್ನ ತನ್ನ 'ಗುಪ್ತ' ಮಡದಿ ವಿಜಯಲಕ್ಷ್ಮಿಗೆ ಕೊಡುಗೆಯಾಗಿ ನೀಡಿದ್ದಾನೆ ಶಿವಯೋಗಿ!

ಶಿವಯೋಗಿ ಇಷ್ಟೆಲ್ಲಾ ಅವ್ಯವಹಾರಗಳನ್ನು ನಡೆಸುತ್ತಿದ್ದರೂ ಬಹುತೇಕ ಭಕ್ತರಿಗೆ ಇದ್ಯಾವುದೂ ಗೊತ್ತಾಗಲೇ ಇಲ್ಲ, ಆದರೆ ಯಾವಾಗ ಮಾಜಿ ಶಾಸಕ ವಿನಯ ಕುಲಕರ್ಣಿ ಅವರ ಮುತ್ತಜ್ಜ ಕರವೀರಪ್ಪ ಕುಲಕರ್ಣಿಯವರು ನೀಡಿದ ಹೊಲದ ಮೇಲೆ ಬೋಜಾ ಕೂಡಿಸಲು ರೆಡಿಯಾದನೋ ಆಗ ಎಲ್ಲವೂ ಹೊರಬಿದ್ದಿದೆ. ಮಹಾನ್ ಕಿಲಾಡಿಯಾದ ಶಿವಯೋಗಿ "ಅಧ್ಯಕ್ಷರು, ಶ್ರೀಮನ್ನ ನಿರಂಜನ ಜಗದ್ಗುರು ಮುರುಘರಾಜೇಂದ್ರ ಫ್ರೀ ಬೋರ್ಡಿಂಗ್ ಮುರುಘಾಮಠ ಧಾರವಾಡ" ಎಂಬುದರ ಹೆಸರು ಬದಲಿಸುವ ಕುತಂತ್ರವನ್ನ ಮಾಡಿದ್ದ. ಇದಕ್ಕೆ ಸಾಥ್ ನೀಡಿದ್ದು ಶಿವಯೋಗಿ ಈ ಮಠಕ್ಕೆ ಕಾಲಿಟ್ಟಾಗಿನಿಂದಲೂ ಆತನ ಜೊತೆಗಿರುವ ನದಿ ಇಂಗಳಗಾಂವದ ಸ್ವಾಮಿ!

ಮುರುಘಾಮಠದ ಸ್ವಾಮಿ ವೇಷದಲ್ಲಿ ಶಿವಯೋಗಿ ಹಿರೇಮಠ ಮಾಡಿದ ಅನಾಚಾರ ಅಷ್ಟಿಷ್ಟಲ್ಲ. ಮೊನ್ನೆ ಮೊನ್ನೆ ಬಿಜೆಪಿಯ ಪಾಲಿಕೆ ಸದಸ್ಯ ಶಿವು ಹಿರೇಮಠನ ಫೈನಾನ್ಸ್‌ನಲ್ಲಿ ಮ್ಯಾನೇಜರ್ ಆಗಿರುವ ಜೋಶಿ ಎಂಬಾತನ ಕೈಯಲ್ಲಿ 59 ಸಾವಿರ ರೂಪಾಯಿ ಮತ್ತು 20 ತೊಲ ಬಂಗಾರದ ಜೊತೆಗೆ ತನ್ನ ಪಾಸ್‌ಪೋರ್ಟ್ ಕೊಟ್ಟು ಶಿವಯೋಗಿ ಕಳುಹಿಸಿದ್ದ. ಆದರೆ ಆತನ ದುರಾದೃಷ್ಟ ಜೋಶಿ ಸಿಕ್ಕಿಬಿದ್ದ. ಹೀಗೆ ರೆಡ್‌ಹ್ಯಾಂಡ ಆಗಿ ಸಿಕ್ಕಿಬಿದ್ದಿದ್ದರೂ ಶಿವಯೋಗಿ 'ಹ್ಯಾಪನಂತೆ' ಬಡಬಡಾಯಿಸಿದ್ದಾನೆ, "ವಿನಯ್, ನೀವ್ ಬರಲೇ ಇಲ್ಲ ಅಲ್ರೀ.. ಅದಕ್ಕ ಅವರ್ ಕಡೆ ಕೊಟ್ಟು ಕಳಿಸಿದೆ" ಎಂದು ಸುಳ್ಳುಹೇಳಲು ನೋಡಿದ್ದಾನೆ. ಶಿವಯೋಗಿಯು ಹೀಗೆ ಕದ್ದು ಕಳುಹಿಸುತ್ತಿದ್ದ ಬಂಗಾರವನ್ನ ಮಹಾಂತಪ್ಪಗಳು ಬಳಕೆ ಮಾಡುತ್ತಿದ್ದರು ಎಂಬುದು ನಿಮಗೆ ತಿಳಿದಿರಲಿ.

ಮನ್ಮಥನೂ ಆದ ಶಿವಯೋಗಿಯು ಶಿವಾನುಭವ ಮಂಟಪದ ರೂಪುರೇಷೆಯನ್ನೇ ಬದಲಿಸಿದ್ದಾನೆ. ಸಾವಿರಾರು ಭಕ್ತರಿಗೆ ಧರ್ಮದ, ಮಾನವೀಯತೆಯ ಪಾಠ ಹೇಳುತ್ತಿದ್ದ ಮಂಟಪವನ್ನೇ ತನ್ನ 'ತಕಧಿಮಿತಾ'ಗೆ ಬಳಸಿಕೊಂಡಿದ್ದಾನೆ. ಶಿವಾನುಭವದ ಮುಂಭಾಗವನ್ನ ಮುಚ್ಚಿಸಿ, ಹಿಂದಿನ ಬಾಗಿಲನ್ನ ತೆರೆಸಿದ್ದಾನೆ. ಇಡೀ ಕೋಣೆಯಲ್ಲಿ ಒಂದೇ ಒಂದು ಬೆಡ್ ರೂಂ, ಪಕ್ಕದಲ್ಲೇ ಶವರ್ ಇರುವ ಬಾತ್‌ರೂಂ...! ಪಾಪ, ಸ್ವಾಮಿಗಳು 'ಮುಂಗಾರು ಮಳೆ'ಯ ನೆನಪು ಬಂದಾಗ ಬಾತ್‌ರೂಂನಲ್ಲಿ ಶವರ್ ಮೂಲಕ ಮಳೆಯಲ್ಲಿ ನೆನೆಯುತ್ತಿದ್ದರೇನೋ! ಶಿವಾನುಭವ ಮಂಟಪವನ್ನು ಇಂತಹ ನೀಚಕೃತ್ಯಗಳಿಗೆ ಬಳಕೆ ಮಾಡಿದ ಈ ಸ್ವಾಮಿ ಬಗ್ಗೆ ಏನನ್ನಬೇಕು? ಇದೆಲ್ಲ ಜನರಿಗೆ ಗೊತ್ತಾಗಿದ್ದರಿಂದ ಶಿವಾನುಭವ ಮಂಟಪ ಈಗ ಭಕ್ತರ ಪಾಲಾಗಿದೆ. ಹಾಗೇಯೇ ಸ್ವಾಮಿಯ 'ತಕಧಿಮಿತಾ'ಗೆ ಬ್ರೇಕ್ ಬಿದ್ದಿದೆ.

ಮುರುಘಾಮಠಕ್ಕೆ ಪೊಲೀಸರು ಎಂದೂ ಡ್ಯೂಟಿಗೆ ಬರುತ್ತಿರಲಿಲ್ಲ, ಅವರೂ ಇಲ್ಲಿನ ಭಕ್ತರಾಗಿದ್ದು ಜಾತ್ರೆ ಸಮಯದಲ್ಲಿ ಮಾತ್ರ ಅವರು ಡ್ಯೂಟಿ ಮಾಡುತ್ತಿದ್ದರು. ಆದರೀಗ ಇಲ್ಲಿ ಎರಡು ಪೊಲೀಸ್ ವಾಹನಗಳು ಬೀಡುಬಿಟ್ಟಿವೆ. ವಿನಯ ಕುಲಕರ್ಣಿ ಜೀವನದಲ್ಲಿ ಮಾಡಿದ ಉತ್ತಮ ಕೆಲಸ ಇದು ಎನ್ನುವ ಭಕ್ತರು ಸ್ವಾಮಿಯ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದಾರೆ. ಒಂದು ರೀತಿಯಲ್ಲಿ ಸ್ವಾಮಿ ಇವತ್ತು 'ಮಠ-ಬಂಧನ'ದಲ್ಲಿದ್ದಾನೆ.

ಇಂಥ ಸ್ವಾಮಿ ಧಾರವಾಡದಂತಹ ಸಜ್ಜನರ ನಾಡಿಗೆ ಬೇಕಾ...? ಅದೂ ನಡೆದಾಡುವ ದೇವರು ಕೂತ ಜಾಗದಲ್ಲಿ ಈತ ಕೂರಬೇಕಾ...? ● ವಿನಯ್ ಹುರುಳಿಕುಪ್ಪಿ

'ಡಬಲ್ ಎಂಜಿನ್' ಶಿವಯೋಗಿ

ಕುಂದಗೋಳ ತಾಲೂಕಿನ ಪಶುಪತಿಹಾಳದ ಈ ಶಿವಯೋಗಿ ನೋಡಲೂ ಅತ್ತ ಜಗ್ಗೇಶನೂ ಅಲ್ಲ, ಇತ್ತ ಕೋಮಲನೂ ಅಲ್ಲ, ಇವರಿಬ್ಬರ ಕಲಸು-ಮಲಸುವಿನಂತೆ ಕಾಣುತ್ತಾನೆ. ಇಂತಿಪ್ಪ ಸ್ವಾಮಿಗೆ ಬೆಂಗಳೂರಿನಲ್ಲೊಂದು, ಧಾರವಾಡದಲ್ಲಿ ಇನ್ನೊಂದು 'ಎಂಜಿನ್'ಗಳಿವೆ. ವಿಜಯಲಕ್ಷ್ಮಿ (ಹೆಸರು ಬದಲಾಯಿಸಲಾಗಿದೆ) ಎಂಬಾಕೆ ಧಾರವಾಡದ ಎಂಜಿನ್ ಎಂದೂ, ಗೌರಮ್ಮ ಎಂಬಾಕೆ ಬೆಂಗಳೂರಿನ ಎಂಜಿನ್ ಎಂಬುದು ಜನರ ಮಾತು. ಈ ಕಾರಣಕ್ಕಾಗಿಯೇ ಧಾರವಾಡದ ಜನ ಶಿವಯೋಗಿಯನ್ನು 'ಡಬಲ್ ಎಂಜಿನ್' ಸ್ವಾಮಿ ಎಂದು ಕರೆಯುತ್ತಾರೆ.

ವಿಜಯಲಕ್ಷ್ಮಿಯನ್ನ ಧಾರವಾಡದಲ್ಲೇ ಮದುವೆ ಮಾಡಿಕೊಂಡಿರುವ ಸ್ವಾಮಿ ಆಕೆಗೆ ಮೂರು ಮಕ್ಕಳನ್ನ ಕರುಣಿಸಿದ. ಎರಡನೇ ಬಾರಿ ನೀಡಿದ ಆಶೀರ್ವಾದ ಮೊದಲಿನಷ್ಟು ಸ್ಟ್ರಾಂಗ್ ಇಲ್ಲದ ಕಾರಣ ಅವಳಿ ಮಕ್ಕಳು ಹುಟ್ಟಿ ಕೆಲವೇ ಕ್ಷಣಗಳಲ್ಲಿ ತೀರಿಹೋದವು. ಪಾಪ ಶಿವಯೋಗಿಗೆ ಅವಳಿ ಭಾಗ್ಯ ತಪ್ಪಿಹೋಯಿತು. ಉಳಿದಿರುವ ಮಗಳೊಬ್ಬಳು ಕಾನ್ವೆಂಟ್‌ನಲ್ಲಿ ಎಬಿಸಿಡಿ ಕಲಿಯುತ್ತಿದ್ದಾಳೆ.

ಈಗ ವಿಜಯಲಕ್ಷ್ಮಿ ಹಿಡಬ್ಲ್ಯೂಡಿ ವಸತಿ ನಿಲಯದಿಂದ ನಾರಾಯಣಪೂರಕ್ಕೆ ಶಿಫ್ಟ್ ಆಗಿದ್ದಾಳೆ. ಇವಳ ಅಪ್ಪ ವಾರ್ತಾ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಕೆಲ ಬಾರಿ ಅವನಿಂದ ಅನೇಕ ಸಹಾಯಗಳನ್ನು ಪಡೆದಿದ್ದಾಳೆ. ಈಕೆಯ ಇನ್ನೊಬ್ಬ ತಮ್ಮ ಹುಬ್ಬ...

ಇದೇ ವಿನಯ ಕುಲಕರ್ಣಿ ಜಿಲ್ಲಾ ಪಂಚಾಯತಿಯ ಸದಸ್ಯನಿದ್ದಾಗ ಮುಸುರೆ ಸಂಘದ ಅಧ್ಯಕ್ಷೆ ವಿಜಯಲಕ್ಷ್ಮಿ ಕೆಲವು ಕಾರ್ಯಗಳನ್ನು ಮಾಡಿಸಿಕೊಂಡಿದ್ದಾಳೆ. ಇದು ಧಾರವಾಡ ಎಂಜಿನ್ ಕಥೆಯಲ್ಲ, ಜೀವನಗಾಥೆ.

ಈ ಹಿಂದೆ ಈಕೆ ಮುಸುರೆ ತೊಳೆಯುವವರ ಸಂಘದ ಅಧ್ಯಕ್ಷೆಯಾಗಿದ್ದಾಗಲೂ ಮಠದಲ್ಲೇ ದಿನ ಕಳೆಯುತ್ತಿದ್ದರು. ಯಾವಾಗ ಸ್ವಾಮಿ ಶಿವಾನುಭವ ಮಂಟಪವನ್ನು ಮುಚ್ಚಿ ಅದನ್ನು ಮಂಚ ಮಂಟಪವಾಗಿ ಪರಿವರ್ತಿಸಿದನೋ ಆವಾಗಿನಿಂದ ಇವಳು ಮುಖ್ಯ ದ್ವಾರದ ಬಳಿ ಕಾಣಲೇ ಇಲ್ಲ. ಹೋಗಿವರೂ ಹಿತ್ತಲ ಬಾಗಿಲೇ 'ವಿಜಿ-ಶಿವು'ಗೆ ಮುಖ್ಯವಾಗಿತ್ತಲ್ಲ. ಈಗ ಸ್ವಾಮಿಯೇ ವಿವಾದದಲ್ಲಿ ಸಿಲುಕಿರುವಾಗ ಇವಳೇನು ಸುಮ್ಮನೆ ಕೂತಿಲ್ಲ. ಕಂಡಕಂಡವರಿಗೆ ಫೋನ್ ಮಾಡಿ "ನೀವೇನೇ [illegible] ಸುದ್ದ ಮಾಡಿಕೋಂಡರೀ. ಮುಂದ್ ನನ್ನ ಬದುಕ ಹ್ಯಾಂಗ" ಎಂದು ಅಳತೊಡಗಿದ್ದಾಳೆ. ಸ್ವಾಮಿ ಬಳಿ ಮೊಬೈಲ್ [illegible] ರಿಂಗಣಿಸುತ್ತ, ಹೋಗ್ಲಿ ಬಿಡಿ, ಮಾಡಿದವರ ಪಾಪ ಆಡಿದವರ ಬಾಯಲ್ಲಿ.

ಇನ್ನೂ ಗೌರಮ್ಮ ಎಂಬ ಎರಡನೆ ಎಂಜಿನ್ ಬೆಂಗಳೂರಿನ [illegible] ಮಠದಲ್ಲಿದ್ದಾಳಂತೆ. ಅವಳಿಗೆ ಹೆಚ್ಚಿಗೆ [illegible] ಜನಕ್ಕೆ ಬೆಂಗಳೂರು ಕಾಸ್ಟ್ಲಿ ಅಂತಾ ಗೊತ್ತಿಲ್ಲ [illegible]



ಬೀದರ್ ನಾಗಮಾರಪಳ್ಳಿಯ ನಡುಮುರಿದ ಹರ್ಷಗುಪ್ತ

ಬೀದರ ಎಂಬ ಹೆಸರು ಸ್ಮರಣೆಗೆ ಬರುತ್ತಲೆ ಗುರುಪಾದಪ್ಪ ನಾಗಮಾರಪಳ್ಳಿ ಎಂಬ ಫ್ಯೂಡಲ್ ರಾಜಕಾರಣಿ ನೆನಪಾಗುತ್ತಾನೆ. ತೀರಾ ಇತ್ತೀಚಿಗಂತೂ ಒಂದೆ ಸಮ ಅಂಡುಸುಟ್ಟ ಬೆಕ್ಕಿನಂತೆ ಅಲ್ಲಿನ ಜಿಲ್ಲಾಧಿಕಾರಿ ಹರ್ಷಗುಪ್ತರ ಹೆಸರು ಕೇಳುತ್ತಲೆ "ನನ್ನ ಚುನಾವಣೆಯ ಸೋಲಿಗೆ ಅವರೇ ಕಾರಣ'' ಎಂದು ಬೊಬ್ಬೆ ಹೊಡೆಯುತ್ತಿರುತ್ತಾನೆ. "ನಾನು ಗೆದ್ದು ಬಂದಿದ್ದರೆ ಒಂದು ಕೈ ನೋಡಿಕೊಳ್ಳುತ್ತಿದ್ದೆ'' ಎಂದೂ ಆವಾಜ್ ಹಾಕುತ್ತಾನೆ. ಚುನಾವಣೆಯಲ್ಲಿ ಏನೆಲ್ಲ ಗೋಲ್‌ಮಾಲ್ ಮಾಡಿ ಧರ್ಮಸಿಂಗ್ ಬೀದರ ಲೋಕಸಭಾ ಕ್ಷೇತ್ರದಿಂದ ಗೆದ್ದು ಬಂದಿದ್ದಾರೆ ಎಂದು ಕಿರುಲುತ್ತಾನೆ.

ನಾಗಮಾರಪಳ್ಳಿಯ ಈ ಎಲ್ಲಾ ಕಿರಲುವಿಕೆಗೆ ನಿಜಕ್ಕೂ ಜಿಲ್ಲಾಧಿಕಾರಿ ಕಾರಣ ಎಂದು ಪತ್ರಿಕೆಯೂ ಹೇಳಿದರೆ ಅನೇಕರಿಗೆ ಆಶ್ಚರ್ಯ ಆಗಬಹುದು. ಆದರೆ ಇದು ಸತ್ಯ. ಏಕೆಂದರೆ ಹರ್ಷಗುಪ್ತ ಎಂಬ ಜನಪರವಾಗಿರುವ ಅಧಿಕಾರಿ ಬೀದರ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಬರುವುದಕ್ಕಿಂತ ಮುಂಚೆ ಬಂದ ಎಂತೆಂಥ ಅಧಿಕಾರಿಗಳೆಲ್ಲ ಸಾಲಾಗಿ ನಿಂತು ನಾಗಮಾರ ಪಳ್ಳಿಯ ಪದತಲದಲ್ಲಿ ಕುತ್ತುಸಿರುಬಿಡುತ್ತಿದ್ದವು. ಕಾನೂನು ಹೇಗಿದೆಯೋ ಹಾಗೆ ನಡೆಯುವುದಕ್ಕಿಂತ ನಾಗಮಾರಪಳ್ಳಿ ಹಾಗೂ ಇನ್ನಿತರ ರಾಜಕಾರಣಿಗಳು ಹೇಗೆ ಆಜ್ಞಾಪಿಸುತ್ತಾರೋ ಹಾಗೆ ನಡೆಯುವುದೆ ತಮ್ಮ ಕರ್ತವ್ಯ ಎಂದು ಬಗೆದಿದ್ದರು. ಅಭಿವೃದ್ಧಿಯನ್ನು ಕಡೆಗಣಿಸಿ ರಾಜಕಾರಣಿಗಳು ಹಣಗಳಿಕೆಯಿಂದ ಹೇಗೆ ಡೆವಲಪ್ ಆಗಬೇಕು ಎಂಬ ತತ್ವಗಳನ್ನೆ ಬಹುವಾಗಿ ಕಲಿಸಿಕೊಡುತ್ತಿದ್ದರು. ಹೀಗಾಗಿ ಕೂಳಿಗೂ ಗತಿಯಿಲ್ಲದೆ ಇನ್ನೊಬ್ಬರ ತಟ್ಟೆಯ ಕಡೆಗೆ ಆಸೆಗಣ್ಣಿನಿಂದ ನೋಡುತ್ತ ನಿಲ್ಲುತ್ತಿದ್ದ ಇಲ್ಲಿನ ಬಹುತೇಕ ರಾಜಕಾರಣಿಗಳು ದುಂಡದುಂಡಗಾಗಿದ್ದಾರೆ. ಜಿಲ್ಲಾಧಿಕಾರಿಯಾಗಿ ಬಂದ ಹಲವಾರು ಜನ ಅಧಿಕಾರಿಗಳು ಇಲ್ಲಿಂದ ಹೋಗುವಾಗ ದುಂಡದುಂಡಗೆ ಆಗಿಹೋಗಿದ್ದಾರೆ.



ಹರ್ಷಗುಪ್ತ

ಯಾವಾಗ ಹರ್ಷಗುಪ್ತ ಎಂಬ ಜಿಲ್ಲಾಧಿಕಾರಿ ಇಲ್ಲಿಗೆ ಕಾಲಿಟ್ಟರೊ ಇಡೀ ಬೀದರ್ ಜಿಲ್ಲೆಯ ನಕ್ಷೆಯೆ ಬದಲಾದಂತಿದೆ. ಸೋಂಭೇರಿಯಂತೆ ಕುಳಿತುಕೊಳ್ಳುತ್ತಿದ್ದ ಆಡಳಿತ ಪ್ರಥಮಬಾರಿಗೆ ಚುರುಕುಗೊಂಡಿದೆ. ಸರಕಾರದ ಹಲವಾರು ಸವಲತ್ತುಗಳು ಬಳಿಬಟ್ಟೆಯ ಪುಢಾರಿಗಳಿಗೆ ಮಾತ್ರ ತಲುಪುತ್ತಿರುವ ಅಂಶವನ್ನು ಮನಗಂಡ ಜಿಲ್ಲಾಧಿಕಾರಿ ಮೊಟ್ಟ ಮೊದಲಬಾರಿಗೆ ಅವುಗಳೆಲ್ಲ ನೇರ ಫಲಾನುಭವಿಗಳಿಗೆ ತಲುಪುವಂತೆ ನೋಡಿಕೊಂಡಿದ್ದಾರೆ. ಹೀಗಾಗಿ ಇಡೀ ಜಿಲ್ಲೆಯಾದ್ಯಂತ ಈಗ ಮಧ್ಯವರ್ತಿಗಳೆಂಬ ಪುಢಾರಿಗಳಿಗೆ ಇಂದು ಇಲ್ಲಿ ಕೆಲಸವಿಲ್ಲದಂತಾಗಿದೆ. ಫಲಾನುಭವಿಗಳ ನೆವ ಹೇಳಿಕೊಂಡು ತಮ್ಮ ಗುಡಾಣವನ್ನು ತುಂಬಿಕೊಳ್ಳುತ್ತಿದ್ದ ಖಾದಿಗಳಿಗೆ ಇಂದು ಯಾವ ಖದರು ಇಲ್ಲದಂತಾಗಿದೆ.

ಹೇಳುವ ಅರಸ ಕೇಳುವ ಪ್ರಧಾನಿಗಳನ್ನೆ ಇಷ್ಟು ವರ್ಷಗಳವರೆಗೆ ಕಾಣದಾಗಿದ್ದ ಬೀದರ ಬೇಕಾಬಟ್ಟೆಯಾಗಿ ಬೆಳೆದಿತ್ತು. ಸರಕಾರಿ ಜಾಗಗಳ ಅತಿಕ್ರಮಣವಂತೂ ಎಲ್ಲರೂ ಬಹಿರಂಗವಾಗಿಯೆ ನಾನು ಹೆಚ್ಚೋ - ನೀನು ಹೆಚ್ಚೋ ಎನ್ನುವಂತೆ ಪೈಪೋಟಿಗೆ ಬಿದ್ದು ಮಾಡಿಕೊಂಡಿದ್ದರು. ರಾಜಕಾರಣಿಗಳಲ್ಲಿ ಪ್ರಮುಖವಾಗಿ ಭೀಮಣ್ಣಾ ಖಂಡ್ರೆ, ಗುರುಪಾದಪ್ಪ ನಾಗಮಾರಪಳ್ಳಿ, ಮಾಜಿ ಸಂಸದ ನರಸಿಂಗ್‌ರಾವ್ ಸೂರ್ಯವಂಶಿ ಮುಂತಾದವರೆಲ್ಲ ಸರಕಾರದ ಬೇನಾಮಿ ಆಸ್ತಿಗೆ ಹಕ್ಕುದಾರರಾಗಿದ್ದರು. ಬಹುತೇಕ ಕಡೆ ಗಾರ್ಡನ್ ಜಾಗಗಳನ್ನು ಕಬಳಿಸಿದ್ದಲ್ಲದೆ ಅಲ್ಲೆಲ್ಲ ಬಹು ಅಂತಸ್ತಿನ ಕಟ್ಟಡವನ್ನು ಕಟ್ಟಿದ್ದರು. ಜೊತೆಗೆ ತಮ್ಮ ಮನೆಯ ಮುಂದೆ ತಿರುಗಾಡಲಿಕ್ಕೂ ಬಾರದಷ್ಟು ತಮ್ಮ ಮನೆ ಮುಂದಿನ ರಸ್ತೆಯ ಜಾಗಕ್ಕೂ ಲಗ್ಗೆ ಇಟ್ಟಿದ್ದರು. ಬಹುಶಃ ಬೀದರ ವಾಹನಗಳ ಓಡಾಟಕ್ಕೆ ಸರಿಯಾದ ಜಾಗವಿಲ್ಲದೆ ಅಕ್ಷರಶಃ ಕಿಷ್ಕಿಂಧೆಯಾಗಿತ್ತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಇದನ್ನೆಲ್ಲ ಮನಗಂಡ ಹರ್ಷಗುಪ್ತ ಬೀದರಗೆ ಬಂದು ಜಿಲ್ಲಾಧಿಕಾರಿಯಾಗಿ ಅಧಿಕಾರ ಪಡೆಯುತ್ತಲೆ ರಸ್ತೆ ಅತಿಕ್ರಮಣ ಮಾಡಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಮುಂದಾದರು. ಇದು ನಿಜಕ್ಕೂ ಜೇನುಗೂಡಿಗೆ ಕೈ ಇಕ್ಕುವ ಕೆಲಸ. ಮೊದಮೊದಲು ಇದಕ್ಕೆ ಸಾಕಷ್ಟು ವಿರೋಧಗಳು, ಪ್ರತಿಭಟನೆಗಳು ಬಂದವು. ಅವನ್ನೆಲ್ಲ ಸಾವಕಾಶವಾಗಿ ಯಾವ ಗೊಂದಲ - ಗದ್ದಲಗಳಿಗೂ ಅವಕಾಶವಾಗದಂತೆ, ಈ ಗೊಂದಲದಲ್ಲಿ ರಾಜಕಾರಣಿಗಳು ಲಾಭ ಪಡೆಯ ದಂತೆ ಹರ್ಷಗುಪ್ತ ಬಹುಚೆನ್ನಾಗಿಯೆ ನಿಭಾಯಿಸಿದರು. ಮೊದಮೊದಲು ಜಿಲ್ಲಾಧಿಕಾರಿಗಳ ಅತಿಕ್ರಮಣ ತಡೆಯುವ ಕ್ರಮವನ್ನು ವಿರೋಧಿಸುತ್ತಿದ್ದ ಜನಸಾಮಾನ್ಯರೆ ಬರುಬರುತ್ತ ಅವರ ಕೆಲಸದತ್ತ ಆಸಕ್ತಿ ವಹಿಸಿದರು. ಖುಷಿ ಪಟ್ಟರು. ಜನಸಾಮಾನ್ಯ ಯಾವಾಗ ತಮ್ಮ ಕೆಲಸಕ್ಕೆ ಸಂತೋಷ ವ್ಯಕ್ತ ಪಡಿಸುತ್ತಿದ್ದಾರೆ ಎಂದು ಜಿಲ್ಲಾಧಿಕಾರಿ ಅರಿತುಕೊಂಡರೋ ಆಗ ಮಾಡಿದ ಕೆಲಸವೆಂದರೆ ನಾಗಮಾರಪಳ್ಳಿ, ನರಸಿಂಗ್‌ರಾವ್ ಸೂರ್ಯವಂಶಿ, ಭೀಮಣ್ಣ ಖಂಡ್ರೆ ಥರದ ರಾಜಕಾರಣಿಗಳ ಅತಿಕ್ರಮಣವನ್ನು ಬಹಿರಂಗ ಗೊಳಿಸಿ ಅವರ ಕಟ್ಟಡಗಳನ್ನು ನೆಲಸಮಗೊಳಿಸುವುದು. ಈ ಕೆಲಸ ನಿಜಕ್ಕೂ ಗುರುತರವಾದುದು. ಆದರೆ ಇದನ್ನೂ ಹರ್ಷಗುಪ್ತ ಅತ್ಯಂತ ಸುಲಭವಾಗಿ, ಚಾಣಾಕ್ಷತನದಿಂದ ಮಾಡಿಮುಗಿಸಿದರು. ಹೀಗೆ ಮಾಡುವಾಗ ನಗರದೆಲ್ಲೆಡೆ ಕಟ್ಟೆಚ್ಚರ ವಹಿಸಿ ರಾಜಕಾರಣಿಗಳು ಮಾಡಿಸಬಹುದಾದ ಏನೆಲ್ಲ ಅವಾಂತರಗಳಿಗೆ ಕಡಿವಾಣಹಾಕಿದರು. ಎಲ್ಲರೂ ನೋಡನೋಡುತ್ತಲೆ, ಹಾಡು ಹಗಲೇ ನಾಗಮಾರಪಳ್ಳಿಯ ಬಹುಅಂತಸ್ತಿನ ಅಕ್ರಮ ಕಟ್ಟಡ ನೆಲಸಮವಾಯಿತು. ಸೂರ್ಯ ವಂಶಿ ಎಂಬ ಸಂಸದನ ಕಾಂಪೌಂಡ್ ಧರೆಗುರುಳಿತು. ಖಂಡ್ರೆಯ ಕೆಂಡಾಮಂಡಲದ ಕೋಪಕ್ಕೂ ಕ್ಯಾರೆ ಅನ್ನದೆ ಅಕ್ಕಮಹಾದೇವಿ ಕಾಲೇಜಿನ ಮುಂದುಗಡೆಯ ಅತಿಕ್ರಮಣ ಜಾಗೆ ಸರಕಾರದ ವಶವಾಯಿತು.


ಒಬ್ಬ ಜಿಲ್ಲಾಧಿಕಾರಿ ತಾನು ಸರಕಾರದ ಪ್ರತಿನಿಧಿಯಾಗಿ ಕಾನೂನಿನ ಚೌಕಟ್ಟಿನೊಳಗೆ ಅಧಿಕಾರ ಚಲಾಯಿಸಿ, ಜನ ಸಾಮಾನ್ಯರಿಗೆ ಒಳ್ಳೆಯದು ಮಾಡಬೇಕು ಎಂಬ ತುಡಿತ ಇಟ್ಟುಕೊಂಡು ಹೊರಟರೆ ಏನೆಲ್ಲಾ ಸಾಧಿಸಬಹುದೆಂಬುದನ್ನು ಹರ್ಷಗುಪ್ತ ಬೀದರನಲ್ಲಿ ಮಾಡಿತೋರಿಸಿದ್ದಾರೆ. ಮೊದಮೊದಲು ಅತಿಕ್ರಮಣ ಕಟ್ಟಡಗಳನ್ನು ಕೆಡವುತ್ತಿರುವುದರಿಂದ ಇಡೀ ಬೀದರ ಭೂಕಂಪಕ್ಕೆ ತುತ್ತಾದ ನತದೃಷ್ಟ ಗ್ರಾಮದಂತೆ ಬಗ್ಗಡವಾಗಿತ್ತು. ಆದರೆ ಜಿಲ್ಲಾಧಿಕಾರಿ ಅದನ್ನು ಹಾಗೆ ಬಿಡದೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಹಲವಾರು ಯೋಜನೆಗಳನ್ನು ತಂದು ಬೀದರಗೆ ಹಾಕಿದ್ದಾರೆ. ಇದರಿಂದ ಎಲ್ಲರೂ ನೋಡನೋಡುತ್ತಿರುವಂತೆ ಬೀದರ್ ಸುಂದರವಾಗಿ ಕಂಗೊಳಿಸುತ್ತಿದೆ.

ಸುಂದರ ಉದ್ಯಾನವನ, ಈಜುಕೊಳ ನಿರ್ಮಾಣ, ಸಮರ್ಪಕ ಕ್ರೀಡಾಂಗಣ, ರಂಗಮಂದಿರದ ನವೀಕರಣ, ಪಾಪನಾಶ ಕೆರೆ, ಬೀದರ ಕೋಟೆಯ ಸುಂದರಿಕರಣ, ನರಸಿಂಹ ಝರಣೆಯ ಅಭಿವೃದ್ಧಿ ಮಾಡುವ ಮೂಲಕ ಅಭಿವೃದ್ಧಿಗೆ ಅಡಿಗಲ್ಲು ಹಾಕಿದ್ದಾರೆ. ಇದೆಲ್ಲವೂ ಅವರ ಸಂಕಲ್ಪಶಕ್ತಿ ಯಾವ ಲಾಬಿಗೂ ಮಣಿಯದ ಧೀರತ್ವದಿಂದ ಮಾತ್ರ ಸಾಧ್ಯವಾಗಿದೆ. ಯಾವುದೇ ಅಧಿಕಾರಿ ಸರಕಾರದ ಸವಲತ್ತುಗಳನ್ನು ನೇರವಾಗಿ ಫಲಾನುಭವಿಗೆ ತಲುಪುವಂತೆ ನೋಡಿಕೊಂಡರೆ, ಸಂವಿಧಾನಿಕ ಕಾನೂನುಗಳನ್ನು ಪಾಲಿಸುತ್ತ ಮುನ್ನಡೆದರೆ ಅಭಿವೃದ್ಧಿ ತಂತಾನೆ ಆಗುತ್ತದೆ ಎಂಬುದಕ್ಕೆ ಹರ್ಷಗುಪ್ತ ಒಂದು ಮಾದರಿಯಾಗಿದ್ದಾರೆ.

ಜಿಲ್ಲಾಧಿಕಾರಿಯ ಈ ಎಲ್ಲಾ ಒಳ್ಳೆಯ ಅಂಶಗಳಿಂದ ಸಹಜವಾಗಿಯೆ ಪುಢಾರಿಗಳ ನಡಮುರಿದು ಹೋಗಿದೆ. ನಾಗಮಾಪಳ್ಳಿಯಂತಹ ಫ್ಯೂಡಲ್ ಮನುಷ್ಯ ಸಹಜವಾಗಿ ನೆಲಕಚ್ಚಿದ್ದಾನೆ. ಹೀಗಾಗಿ ಆತ ಕಂಡಕಂಡಲೆಲ್ಲ "ನನ್ನ ಸೋಲಿಗೆ ಜಿಲ್ಲಾಧಿಕಾರಿಯೆ ಕಾರಣ'' ಎಂದು ಹೇಳುತ್ತ ಹೊರಟರೆ ಅದು ಸುಳ್ಳೆಂದು ಹೇಳುವುದಾದರೂ ಹೇಗೆ? ಈಗ ನೀವೇ ಇದಕ್ಕೆ ಉತ್ತರ ಹೇಳಬೇಕು.

● ವಿಶ್ವಾರಾಧ್ಯ ಸತ್ಯಂಪೇಟೆ

ಬಾಗಲಕೋಟೆ ಜಿ.ಪಂ. ಆಪರೇಷನ್ ಕಮಲಕ್ಕೆ ಬಲಿಯಾಗಲು ಹೊರಟ ಕಾಂಗ್ರೆಸ್ಸು



ವಿಜಯ[illegible]



ಹುಲ್ಲಪ್ಪ ಮೇಟಿ



ತಾಳಿಕೋಟಿ



ಚಿಮ್ಮನಕಟ್ಟಿ

ಬನ್ನಿ, ಬನ್ನಿ, ಆಪರೇಷನ್ ಕಮಲ ಸ್ಟಾರ್ಟ್‌ಮಾಡಿ, ಜಿ.ಪಂ. ಅಧ್ಯಕ್ಷಪಟ್ಟ ಬಿಜೆಪಿ ಮಡಿಲಿಗೆ ಹಾಕಿ ಎಂದು ಸ್ವಯಂಬಲಿಗೆ ಸಿದ್ಧರಾಗಿದ್ದಾರೆ ಬಾಗಲಕೋಟೆ ಜಿಲ್ಲೆಯ ಕಾಂಗ್ರೆಸ್ಸಿಗರು.

ಮೊನ್ನೆ ಸೆಪ್ಟೆಂಬರ್ ಒಂದರಂದು ಜಿ.ಪಂ. ಅಧ್ಯಕ್ಷರ ಆಯ್ಕೆ ನಡೆಯಬೇಕಿತ್ತು. ಹನ್ನೊಂದು ಜನ ಸದಸ್ಯರಿರುವ ಬಿಜೆಪಿಯಿಂದ ನಾಲ್ಕು ನಾಮಪತ್ರ ಬಂದವು. ಹತ್ತೊಂಬತ್ತು ಜನರಿರುವ ಕಾಂಗ್ರೆಸ್ಸು ಮಾತ್ರ ಅಭ್ಯರ್ಥಿಯನ್ನು ಫೈನಲೈಸ್ ಮಾಡದೇ ಜಾತಿಜಗಳದಲ್ಲಿ ಮುಳುಗಿಹೋಗಿತ್ತು. ಕೊನೆಗೆ ಕೋರಂ ಇಲ್ಲದೇ ಚುನಾವಣೆ ರದ್ದಾಗಿ ಸೆಪ್ಟೆಂಬರ್ 14ಕ್ಕೆ ಮುಂದೂಡಲ್ಪಟ್ಟಿದ್ದು, ಇದು ಬಿಜೆಪಿಗೆ 'ಆಪರೇಷನ್ ಕಮಲ' ನಡೆಸಲು ಅವಕಾಶ ಮಾಡಿಕೊಟ್ಟಂತಾಗಿದೆ.

ಈ ಸಲ ಅಧ್ಯಕ್ಷ ಸ್ಥಾನ ಸಾಮಾನ್ಯವರ್ಗಕ್ಕೆ ಮೀಸಲಿರುವುದರಿಂದ, ಲಿಂಗಾಯತರಿಗೆ ನೀಡುವ ಮೂಲಕ ಕಳೆದುಹೋಗಿರುವ ಲಿಂಗಾಯತರ ಬೆಂಬಲವನ್ನು ಮರಳಿ ಪಡೆಯಬೇಕೆಂದು ಕಾರ್ಯಕರ್ತರು ಹೇಳುತ್ತಿದ್ದರೆ, ಸೋತು ಸುಣ್ಣವಾಗಿರುವ ಚಿಮ್ಮನಕಟ್ಟಿ, ಹುಲಪ್ಪ ಮೇಟಿಗಳು ಕುರುಬ ಜಾತಿಗೆ ಅಧ್ಯಕ್ಷ ಸ್ಥಾನ ಕೊಡಿಸುವುದನ್ನು ಪ್ರತಿಷ್ಠೆ ಮಾಡಿಕೊಂಡಿದ್ದಾರೆ.

ಇವರಿಗೆ ಕುರುಬರ ಯಕ್ಕಪ್ಪ ಎಂಬ ಬಾಲಂಗೋಚಿಯನ್ನು ಅಧ್ಯಕ್ಷನನ್ನಾಗಿ ಮಾಡುವ ಆಸೆ. ಇನ್ನೊಂದು ಕಡೆ ಮಾಜಿಗಳಾದ ಅಜಯಕುಮಾರ್ ಸರನಾಯಕ್, ತಿಮ್ಮಾಪೂರ, ನಂಜಯ್ಯನಮಠ, ಸಿದ್ದು ನ್ಯಾಮಗೌಡರಿಗೆ ಲಿಂಗಾಯತನನ್ನು ಅಧ್ಯಕ್ಷ ಮಾಡುವ ಇರಾದೆ. ಲಿಂಗಾಯತರಲ್ಲಿ ಪ್ರಮುಖವಾಗಿ ಪಂಚಮಸಾಲಿ ಜನಾಂಗದ ಸುಭಾಷ್ ತಾಳಿಕೋಟಿ ಹೆಸರು ಕೇಳಿಬರುತ್ತಿದೆ. ಆದರೆ ತನ್ನದೇ ಹುನಗುಂದದ ತಾಳಿಕೋಟಿಯನ್ನು ಬೆಳೆಯುವುದನ್ನು ವಿಜಯ್ ಕಾಶಪ್ಪನವರ ಸಹಿಸಲಾಗುತ್ತಿಲ್ಲ.

ಮಾಜಿ ಅಧ್ಯಕ್ಷ ಸೌದಾಗರ್ ಕೂಡಾ ತಾಳಿಕೋಟಿಯ ಬೆಂಬಲಕ್ಕಿದ್ದಾರೆ. ಹಿಂದೆಲ್ಲ ಕುರುಬರು ಹಲವಾರು ಸಲ ಅಧ್ಯಕ್ಷರಾಗಿರುವುದರಿಂದ ಈಗ ಲಿಂಗಾಯತರಿಗೆ ನೀಡಿ ಮತ್ತೆ ಕಾಂಗ್ರೆಸ್ ಜನಪ್ರಿಯತೆಯನ್ನು ಮರಳಿ ತರುವ ಯತ್ನ ಮಾಡುವಂತೆ ಕಾರ್ಯಕರ್ತರು ಒತ್ತಾಯಿಸುತ್ತಿರುವುದನ್ನು ನಾಯಕ ಮಹಾಶಯರು ಗಮನಿಸುತ್ತಿಲ್ಲ.

ಇದರ ಲಾಭ ಪಡೆಯಲು ಹೊಂಚು ಹಾಕಿರುವ ಬಿಜೆಪಿ ಹತ್ತು ಕಾಂಗ್ರೆಸ್ ಸದಸ್ಯರನ್ನು ಖರೀದಿಸಲು ತಯಾರಾಗಿ ಕುಳಿತಿದೆ. ಕಾಂಗ್ರೆಸ್‌ನ ಹನುಮಂತ ಮಾವಿನಮರದ ಅಧ್ಯಕ್ಷನಾಗಲು ಬಿಜೆಪಿಯನ್ನು ಸೇರಲು ಕಾತುರನಾಗಿದ್ದಾನೆ.

ಹತ್ತೊಂಬತ್ತು ಸದಸ್ಯರಿದ್ದೂ ಅಧ್ಯಕ್ಷಗಾದಿಯನ್ನು ಬಿಜೆಪಿಗೆ ತಟ್ಟೆಯಲ್ಲಿ ಇಟ್ಟುಕೊಡಲು ತಯಾರಾಗಿರುವ ಕಾಂಗ್ರೆಸ್ ನಾಯಕರಿಗೆ ಬುದ್ಧಿ ಬರುವುದು ಯಾವಾಗ?


● ಮೇಘರಾಜ

ಜಾಫರ್ ಷರೀಫ್ ಬಚಾವಾದದ್ದು

[illegible] ... ಪರಿವರ್ತನೆಗೊಳ್ಳುತ್ತಿದ್ದವು. ಇದರ ಬಗ್ಗೆ ವಿಶೇಷ ಮುತುವರ್ಜಿ ವಹಿಸಿದ್ದ ಸಿ.ಕೆ. ಜಾಫರ್ ಷರೀಫರು ಅಂದು ಮಂಗಳೂರಿನಿಂದ ಗೋವಾಕ್ಕೆ [illegible]ಲಿಕಾಪ್ಟರ್‌ನಲ್ಲಿ ಹೊರಟಿದ್ದರು. ಆದರೆ ಹೆಲಿಕಾಪ್ಟರ್ ಇದ್ದಕ್ಕಿದ್ದಂತೆ ಬಲವಂತವಾಗಿ ಭೂಮಿಯ ಕಡೆಗೆ ... [illegible]




... ಮರುಜೀವ ಪಡೆದಂತೆ ಷರೀಫರು ಹೆಲಿಕಾಪ್ಟರ್‌ನಿಂದ ನೆಗೆದು ಆ ಊರಿನ ಶಾಲೆಯತ್ತ ನಡೆದರು. ಜನ ಓಡಿಬಂದರು. ಅಲ್ಲಿಂದ ಯಾವುದೇ ಸುದ್ದಿ ಹೊರಜಗತ್ತಿಗೆ ಹೋಗದಂತಹ ಊರದು. ಆದ್ದರಿಂದ ಪೈಲಟ್ ಮಂಗಳೂರಿಗೆ ಹೋಗುವ ದಾರಿ ಕೇಳಿದ. ಹಳ್ಳಿಯಿಂದ ಕೂಗಳತೆ ದೂರದಲ್ಲಿ ರೈಲ್ವೇ ಹಳಿ ಹಾದುಹೋಗಿದೆ, ಅದರ ಪಕ್ಕದಲ್ಲೇ ಹೋದರೆ ಯಾವುದಾದರೂ ಊರು ಸಿಗಬಹುದು ಎಂದು ಸ್ಥಳೀಯರು ಹೇಳಿದರು. ಪೈಲಟ್ ಹಾಗೇ ಮಾಡಿದ. ಆತ ಮಂಗಳೂರಿಗೆ ... [illegible]



ವೈ.ಎಸ್.ಆರ್

[illegible] ... ಮಾಡಿದರು. ಗ್ರಾಮಸ್ಥರು ತಮ್ಮ ... ಟೈರ್ ಹಾಕಿ ನವೀಕರಿಸಿಕೊಂಡು ಷರೀಫರನ್ನು ಹೊಗಳಿ ... ಇಡೀ ಘಟನೆ ಹೊರಜಗತ್ತಿಗೆ ಗೊತ್ತಾಗದೇ ಹೋಗಲಿ, ಜಿಲ್ಲಾಡಳಿತದ ಗಮನಕ್ಕೂ ಬರಲಿಲ್ಲ! ಅಕಸ್ಮಾತ್ ಏನಾದರೂ ದುರಂತ ಸಂಭವಿಸಿದ್ದರೆ, ನಮ್ಮ ರಾಜ್ಯದ ರೈಲ್ವೇ ಕಾಮಗಾರಿ ಗತಿಯೇನಾಗುತ್ತಿತ್ತೋ ... [illegible]



ದಸರಾ ಅಲ್ಲ 'ಶೋಭಾ'ಯಾತ್ರೆ ಪತ್ರಕರ್ತರಿಗೆ ಜಾತ್ರೆಯೋ ಜಾತ್ರೆ

ಈ ಸಲ ಮೈಸೂರು ದಸರಾ ಸಂಪೂರ್ಣ ಚೆಡ್ಡಿ ಮಯವಾಗುತ್ತಿದೆ. ಇದೊಂದು ರೀತಿಯಲ್ಲಿ ಶೋಭಾ ಯಾತ್ರೆಯೂ ಹೌದು. ಮಾಧ್ಯಮಗಳ ಕೆಲವರಿಗೆ ಲಾಭದ ಸಮಯೂ ಹೌದು. ಹೀಗಾಗಿ ಅಲ್ಲಿ ದಸರಾ ಹೆಸರಲ್ಲಿ ...ಮ್ಮನ ಜಾತ್ರೆ; ಯಾರದೋ ದುಡ್ಡಲ್ಲಲ್ಲ, ಸರ್ಕಾರದ ...ಜೋಟಿಯಲ್ಲಿ... ಜೊತೆಗಿಲ್ಲಿ ಮುಡಾದ ಕೆಲಸಗಳಲ್ಲಿ ...ದುಡಾಮೋಚುವುದು. ಕೇಂದ್ರದ ...ನರ್ಮ್‌ನಲ್ಲಿ ಉಣ್ಣಲು 1500 ... ಬೇರೆಯಿದೆ. ಇದೆಲ್ಲ ಯೋಜನೆ ...ಫಲಾನುಭವಿಗಳು ಜಿಲ್ಲಾ ಉಸ್ತು... ಸಚಿವೆ ಶೋಭಾ ಕರಂದ್ಲಾಜೆಯ ...ಂಗೋಚಿಗಳೇ.



...ಅಂದಂತೆ ಚೀನಾ ಟೂರು, ಸುಬ್ರ... ...ನ ತೇರು ಮುಂತಾದ ಕೆಲಸಗಳಲ್ಲಿ ...ಬ್ಯುಸಿ ಇರುವ ಶೋಭಾರಿಗೆ ...ಮೂರು ಕಡೆ ಬರಲು ಪುರುಸೊತ್ತು... ಆದರೂ ಇಲ್ಲಿ ಅವರದೇ ದರ್ಬಾರು. ಕೆಲಸಗಾರ ...ಣಿವಣ್ಣನ್ ಶೋಭಾರ ದಂಡನಾಯಕ. ಇಲ್ಲಿ ಏನು ...ಕಾರ್ಯಕ್ರಮ ನಡೆದರೂ ಸ್ಥಳೀಯ ಪ್ರತಿನಿಧಿಗಳಿಗೆ ...ಮಂತ್ರಣವಿಲ್ಲ, ಬಿಜೆಪಿಯ ಶಾಸಕರಾದ ರಾಮದಾಸ್, ...ದಲಿಂಗೇಗೌಡರಿಗೆ ನಯಾಪೈಸೆ ಕಿಮ್ಮತ್ತಿಲ್ಲ, ಅದಿರಲಿ ...ರೋಧಪಕ್ಷದ ನಾಯಕ ಸಿದ್ದರಾಮಯ್ಯನವರಿಗೆ ...ಮಂತ್ರಣವಿರುವುದಿಲ್ಲ.

...ಇದೇ 18ಕ್ಕೆ ದಸರಾ ಸುಗ್ಗಿ ಬರುತ್ತಿದೆ. ಮೊದಲೆಲ್ಲ ...ದಿನಗಳ ಮೊದಲೇ ತಯ್ಯಾರಿ ನಡೆಯುತ್ತಿತ್ತು, ಆದರೆ ...ಬಾರಿ ತರಾತುರಿಯ ಕೆಲಸಗಳು ಈಗ ಆರಂಭವಾಗಿವೆ. ರಾತ್ರೋರಾತ್ರಿ 28 ಸಮಿತಿಗಳನ್ನು ರಚಿಸಿದ್ದು ಎಲ್ಲದರಲ್ಲೂ ಶೋಭಕ್ಕನ ಚೇಲಾಗಳದ್ದೇ ಕಾರುಬಾರು, ಎಬಿವಿಪಿಗಳ ದರ್ಬಾರು. ಅದಕ್ಕೆ ಅಲ್ಲವೇ ಕಪಟ ಗುರೂಜಿ ರವಿ ಶಂಕರನನ್ನು ಉದ್ಘಾಟನೆಗೆ ಕರೆದಿದ್ದು...

ನಗರ ಬಿಜೆಪಿ ಅಧ್ಯಕ್ಷ ಆರ್ಕೆಸ್ಟ್ರಾ ಮಂಜುನಾಥನ ಕರ್ಕಶ ಹಾಗೂ ಶೋಭಕ್ಕನಿಗೆ ಇಷ್ಟ. ನಗರ ಬಿಜೆಪಿ ಕಾರ್ಯದರ್ಶಿ ಮಲ್ಲನಗೌಡನೂ ಶೋಭಾ ಬಂಟನೇ. ಹಿಂದೆ ಜಿಲ್ಲಾ ಪಂಚಾಯತಿಯ CEO ಆಗಿದ್ದ ಕೆಂಪೇಗೌಡನೀಗ ಶೋಭಾರ ಆಪ್ತ ಕಾರ್ಯದರ್ಶಿ. ಇವರೆಲ್ಲರ ಜೊತೆಗೆ ಮೈಸೂರು ವಿ.ವಿ. ನೌಕರ ರಾಮು, ಮುಡಾ ಅಧಿಕಾರಿ ಜಯಣ್ಣರೆಲ್ಲ ಶೋಭಾ ಟೀಮ್‌ನ ಕಾಲಾಳುಗಳು. ಆ ಕಾರಣಕ್ಕಾಗಿ ದಸರಾ ತುಂಬೆಲ್ಲ ಈ ಟೀಮ್‌ನ ಸದಸ್ಯರು ಆಡಿದ್ದೇ ಆಟ.

ರಂಗೋಲಿ ಕೆಳಗೆ ಪತ್ರಕರ್ತರು


ಹುಚ್ಚು ಚೆಡ್ಡಿಗಳು ಈ ವರ್ಷ ಎಂತೆಂತಹ ಅರ್ಥಹೀನ ಪ್ರಚಾರ ಕಾರ್ಯಕ್ರಮ ರೂಪಿಸಿದ್ದಾರೆ ಎನ್ನುವುದಕ್ಕೆ ರಂಗೋಲಿ ಕಾರ್ಯಕ್ರಮವೇ ಸಾಕ್ಷಿ. ರಂಗೋಲಿ ಬಿಡುವುದಾದರೂ ಎಲ್ಲಿ? ಯಾವುದಾದರೂ ಮೈದಾನದಲ್ಲಿ ಮಾಡಬೇಕಿತ್ತು, ಆದರೆ ಶೋಭಾಳ ಮೂರ್ಖ ತಂಡ ಮೈಸೂರಿನ ಪ್ರಮುಖ ರಸ್ತೆ, ಸರ್ಕಲ್‌ಗಳಲ್ಲಿ ರಂಗೋಲಿ ಹಾಕಿಸುತ್ತಿದೆ. ಅದು ಅಂತಿಂತಹ ರಂಗೋಲಿ ಅಲ್ಲ, ಪೇಂಟ್ ರಂಗೋಲಿ. ಈ ರಂಗೋಲಿ ಉಸ್ತುವಾರಿ ನೋಡಿಕೊಳ್ಳುತ್ತಿರುವವರು ಯಾವುದೇ ಮಹಿಳಾ ಸಂಘದವರಲ್ಲ, ಮೈಸೂರಿನ ಕೆಲ ಪತ್ರಕರ್ತರ ಟೀಮು. ಬೇರೆ ಬೇರೆ ಪತ್ರಿಕೆಗಳಿಂದ ಹೊರದಬ್ಬಿಸಿಕೊಂಡಿರುವ ಇವರು ಈಗ '5 PM' ಎಂಬ ಪೇಪರು ಮಾಡ್ತಾರಂತೆ. ಅದಕ್ಕೆ ದುಡ್ಡು ಬೇಕಲ್ಲ? ಅದಕ್ಕೆ ಶೋಭಕ್ಕನ ನೆರವು ಪಡೆದಿದ್ದಾರೆ. 400 ರಂಗೋಲಿ ಹಾಕಿಸೋದು, 500 ಬಾವುಟ ಕಟ್ಟಿಸೋ ಕೆಲಸದ ಕಾಂಟ್ರ್ಯಾಕ್ಟು ಈ '5 PM' ಟೀಮಿಗೆ ಸಿಕ್ಕಿದೆ! ಈ ಪುಣ್ಯಾತ್ಮ ಪತ್ರಕರ್ತರಿಗೆ ರಂಗೋಲಿ ಕೆಳಗೆ ತೂರೋದು ಗೊತ್ತೇ ವಿನಃ ರಂಗೋಲಿ ಹಾಕಿಸುವುದಲ್ಲ, ಅದಕ್ಕೆ ಇವರು ತಾವು ಕಾಂಟ್ರ್ಯಾಕ್ಟು ಪಡೆದು ಆ ಕೆಲಸಗಳನ್ನು ಸಬ್‌ಕಾಂಟ್ರ್ಯಾಕ್ಟ್ ನೀಡಿ ಕಾಸು ಎಣಿಸುತ್ತಿದ್ದಾರೆ. ಒಂದು ರಂಗೋಲಿಗೆ ಸಾವಿರ ರೂಪಾಯಿ, ಒಂದು ಬಾವುಟಕ್ಕೆ ಸಾವಿರ ರೂಪಾಯಿ ಗಿಟ್ಟಿಸಿರುವ ಇವರು, ಸಬ್‌ಕಾಂಟ್ರ್ಯಾಕ್ಟರುಗಳಿಗೆ ಪ್ರತಿ ರಂಗೋಲಿ, ಬಾವುಟಕ್ಕೆ 400 ರೂ. ಕೊಟ್ಟು ವಂಚಿಸುತ್ತಿದ್ದಾರೆ.



ಮಹೇಂದ್ರ ಮತ್ತು ರೇಣುಕಾರಾಧ್ಯ ಈ '5 PM' ತಂಡದ ಲೀಡರುಗಳು. ಮಹೇಂದ್ರ ಮೊದಲು ಮೈಸೂರು ವಿಜಯಕರ್ನಾಟಕದಲ್ಲಿದ್ದರೆ, ರೇಣುಕಾರಾಧ್ಯ ಚಾಮರಾಜನಗರ ವಿ.ಕ.ದ ಚೀಫ್ ಆಗಿದ್ದ. ಆಗಲೂ ಇವರು ದುಡ್ಡೇ ದೊಡ್ಡಪ್ಪ, ಜರ್ನಲಿಸಂ ಯಾಕಪ್ಪ ಅಂತಲೇ ಬಾಳುವೆ ಮಾಡಿದವರು. ಆ ಕಾರಣಕ್ಕೆ ಅಲ್ಲಿ ಗೆಟ್‌ಔಟ್ ಹೇಳಿಸಿಕೊಂಡು, ಈಗ '5 PM' ಅಂತಾ ಪೇಪರು ಮಾಡ್ತೀವಿ ಅಂತಾ ಈ ರೀತಿ ಕಲೆಕ್ಷನ್‌ಗಿಳಿದಿದ್ದಾರೆ.

ಹಿಂದೆಲ್ಲ ಮೈಸೂರು ಪತ್ರಕರ್ತರೆಂದರೆ ರಾಜ್ಯಮಟ್ಟದಲ್ಲೂ ಗೌರವವಿತ್ತು, [illegible] ವೇಳೆ ಮಾಧ್ಯಮದವರು ಕುಮಾರಸ್ವಾಮಿಯವರಿಗೆ ಕಪ್ಪಕಾಣಿಕೆ ಸಿಕ್ಕಿ ಪ್ರಾಮಾಣಿಕತೆ ಮೆರೆದಿದ್ದರು. ಈಗ ಅಲ್ಲಿನ ಬಹುಳಷ್ಟು ಪತ್ರಿಕೆಗಳು ಸ್ವಲ್ಪ ಸಿಪ್ಪೆಯಂದಾಗುತ್ತಿವೆ. 'ಮೈಸೂರು ಮಿತ್ರ'ದ ಗಣಪತಿ ಬಿಜೆಪಿಯ ಪ್ರಚಾರಕನಾಗುವುದಷ್ಟೇ ಬಾಕಿ. ಈಗಲೂ ಕೆಲವು ಪ್ರಾಮಾಣಿಕ ಪತ್ರಕರ್ತರಿದ್ದಾರೆ. ಆದರೆ ವಸೂಲಿವೀರರ ಮಧ್ಯೆ ಅವರ ಧ್ವನಿ ಕೀಳದಾಗಿದೆ. ಬಹುತೇಕ ಲೋಕಲ್ ವರದಿಗಾರರು, ಕ್ಯಾಮರಾಮನ್‌ಗಳು ಕಾರುಗಳಲ್ಲಿ ಓಡಾಡುವುದು ಇಲ್ಲಿ ಕಾಮನ್. ಕಳೆದ ಎಂ.ಪಿ. ಚುನಾವಣೆ ವೇಳೆ ರಾಜ್ಯಮಟ್ಟದ ಚಾನೆಲ್‌ವೊಂದರ ವರದಿಗಾರನೊಬ್ಬ ಮನೆ ಕಟ್ಟಲು 20 ಟನ್ ಕಬ್ಬಿಣ ಕೊಡಿಸಿ ಎಂದು ಶೋಭಾ ಮುಂದೆ ಬೇಡಿಕೆ ಇಟ್ಟಿದ್ದನಂತೆ!

ಮಣಿವಣ್ಣನ್ ಓವರ್‌ಲೋಡೆಡ್



ಜಿಲ್ಲಾಧಿಕಾರಿ ಮಣಿವಣ್ಣನ್ ದಕ್ಷ ಎಂಬುದರಲ್ಲಿ ಎರಡು ಮಾತಿಲ್ಲ, ಅವರ ಕೆಲಸದ ವೇಗವೂ ಅಷ್ಟೇ. ಆದರೆ ಅವರಿಗೀಗ ಕೆಲಸಗಳೇ ಜಾಸ್ತಿಯಾಗಿವೆ. ಮುಡಾ ಕೆಲಸಗಳು, ಜೆ-ನರ್ಮ್ ಕೆಲಸಗಳು, ದಸರಾ ಇನ್‌ಚಾರ್ಜ್....

ಶಾಸಕ ರಾಮದಾಸರನ್ನು ಮಟ್ಟಹಾಕಲು ಮಣಿವಣ್ಣನ್ ಅವರನ್ನು ಶೋಭಾ ಬಳಸುತ್ತಿದ್ದಾರೆ. ಕೆಲಸಗಳ ಒತ್ತಡ, ಶೋಭಾರ ತಂತ್ರಗಳ ಕಾರಣದಿಂದಾಗಿ ಮಣಿವಣ್ಣನ್‌ರಿಂದಲೂ ನಿರೀಕ್ಷಿತ ಕೆಲಸಗಳಾಗುತ್ತಿಲ್ಲ. ಜೆ-ನರ್ಮ್‌ನ 1500 ಕೋಟಿ, ಯಡಿಯೂರಪ್ಪ ನೀಡಿದ ವಿಶೇಷ ನಿಧಿ 100 ಕೋಟಿ ಕಂಟ್ರಾಕ್ಟರುಗಳ ಪಾಲಾಗುತ್ತಿದೆ. ಮೈಸೂರು ಕಳಪೆ ಕಾಮಗಾರಿಗಳ ಶೋಕೇಸ್‌ನಂತೆ ಕಂಗೊಳಿಸತೊಡಗಿದೆ.

ಬಹುತೇಕ ಪತ್ರಕರ್ತರು ಭ್ರಷ್ಟರಾಗಲು ಶೋಭಾ ಟೀಮೇ ಕಾರಣ. ಯಾಕೆಂದರೆ ಶೋಭಾ ಡಿಫ್ಯಾಕ್ಟೊ ಸಿ.ಎಂ. ತರಹ ಇರುವುದರಿಂದ ಹೇಳಿದ ಕೆಲಸಗಳೆಲ್ಲ ಪಟ್ಟಂತ ಆಗುತ್ತಿವೆ. ರಂಗೋಲಿ, ಬಾವುಟ ಕಾಂಟ್ರ್ಯಾಕ್ಟು ಇದಕ್ಕೊಂದು ನಿದರ್ಶನ. '5 PM' ತಂಡ ಸಬ್ ಕಾಂಟ್ರ್ಯಾಕ್ಟು ಕೊಟ್ಟಿರುವುದೂ ಸಿಕ್ಕಸಿಕ್ಕವರಿಗೆ, ಬಾವುಟ ನೆಡುವವರಿಗೆ ಕೋಲುಗಳೇ ಸಿಗುತ್ತಿಲ್ಲವಂತೆ. ಬಾಡಿಗೆಗೆ ತಂದರೆ ಹೊರೆ, ಖರೀದಿಸಿದರೆ ಗೋವಿಂದ ಎಂದು ಸಬ್‌ಕಾಂಟ್ರ್ಯಾಕ್ಟರುಗಳು ಅಳುತ್ತಿದ್ದರೆ ಮಹೇಂದ್ರ, ರೇಣುಕಾರಾಧ್ಯಗಳು ಮಾತ್ರ ಆರಾಮಾಗಿ ಮೆಲ್ಲುತ್ತಿದ್ದಾರೆ.

ಈಗ ಕೊನೆಗಳಿಗೆಯಲ್ಲಿ ಗೊತ್ತಾಗಿರುವ ಪ್ರಕಾರ ಶೋಭಕ್ಕನ ಪಿ.ಎಸ್. ಕೆಂಪೇಗೌಡನ ಮೂಲಕ ಜಂಬೂ ಸವಾರಿ ದಿನ ರಾಜ್ಯಪಾಲರ ಮುಂದೆ ನಾಡಗೀತೆ ಸಮೂಹಗಾನ ನಡೆಸುವ ಕಂಟ್ರ್ಯಾಕ್ಟೂ ಈ '5 PM' ಟೀಮ್‌ಗೆ ಸಿಕ್ಕಿದೆ. ಬರೋಬ್ಬರಿ 6 ಲಕ್ಷಗಳಿಗೆ. ಎಲ್ಲ ಸಮಿತಿಗಳಿಗೂ ಫೋನಾಯಿಸುತ್ತಿರುವ ಈ ದುರುಳರು ಸಿಕ್ಕಷ್ಟು ಕಾಂಟ್ರ್ಯಾಕ್ಟುಗಳನ್ನು ಗಿಟ್ಟಿಸುವ ಧಾವಂತದಲ್ಲಿದ್ದಾರೆ. '5 PM' ಪೇಪರ್ ಮೊದಲ ಸಂಚಿಕೆ ಪ್ರಿಂಟ್‌ಗೆ ಹೋಗಿದೆಯಂತೆ.

ಈ ಎಲ್ಲ ಕಾರಣಗಳಿಂದ ಈ ಸಲದ ದಸರಾ ಅಧ್ವಾನವಾಗುವುದು ಗ್ಯಾರಂಟಿ. ಕಳೆದ ಸಲ ಹತ್ತುಕೋಟಿ ಮಣ್ಣುಪಾಲಾದಂತೆ ಈ ಸಲವೂ ಆಗಲಿದೆ. ಚೆಡ್ಡಿಗಳು, ಶೋಭಕ್ಕನ ಚೇಲಾಗಳು, ಜೊತೆಗೊಂದಿಷ್ಟು ಪತ್ರಕರ್ತರು ಅಂತಿಮ ಫಲಾನುಭವಿಗಳಾಗಲಿದ್ದಾರೆ.

● ವರದಿಗಾರ


ಕೆಆರ್‌ಎಸ್‌ನಲ್ಲಿ ಲೂಟಿಕೋರರ ಹಾವಳಿ

...ಸಾರ್ವಜನಿಕರ ಸೊತ್ತಾದ ಪ್ರವಾಸಿ ತಾಣವೊಂದು ...ಗೀಕರಣಗೊಂಡರೆ ಏನೆಲ್ಲ ಅನ್ಯಾಯ, ಅವ್ಯವಹಾರ, ...ಸಗಳು ನಡೆಯುತ್ತವೆ ಎಂಬುದಕ್ಕೆ ಖ್ಯಾತ ಕೆಆರ್‌ಎಸ್ ...ದಾಹರಣೆಯಾಗಿದೆ. ರಾಯಲ್ ಆರ್ಕಿಡ್ ಎಂಬ ...ಮಂತರ ತೆಕ್ಕೆಗೆ ಕೆಆರ್‌ಎಸ್ ಬಂದನಂತರ ಒಂದಷ್ಟು ...ವೃದ್ಧಿ ಹೊಂದಿದ್ದು ನಿಜ. ಆದರೆ ಆ ಅಭಿವೃದ್ಧಿಯನ್ನೂ ...ಸುವಂತೆ ಅಲ್ಲಿ ಇವತ್ತು ಹಗಲುದರೋಡೆ, ಎತ್ತುವಳಿ ...ಸಗಳು ಎಗ್ಗಿಲ್ಲದೆ ನಡೆಯುತ್ತಿವೆ.

...ಮೆರಾ ಚೆಕಿಂಗ್‌ಗೆ ಗೂಂಡಾ ಪಡೆ

...ಸಾಮಾನ್ಯವಾಗಿ ಪ್ರವಾಸಿಗರು ತಮ್ಮೊಟ್ಟಿಗೆ ...ರಾಗಳನ್ನು ತರುತ್ತಾರೆ. ಕೆಆರ್‌ಎಸ್‌ನ ಮುಖ್ಯ ದ್ವಾರದಲ್ಲಿ ...ಮೆರಾ ಬಳಸಲು ಪ್ರತ್ಯೇಕವಾದ ಟಿಕೆಟ್ ಪಡೆಯಬೇಕು ...ಬ ಯಾವ ಸೂಚನೆಯೂ ಇಲ್ಲ, ಆದರೂ ...ಸಿಗರು ತಮ್ಮ ಕುಟುಂಬ ಮತ್ತು ಸ್ನೇಹಿತರೊಡನೆ ...ಸುಂದರವಾದ ಬೃಂದಾವನವನ್ನು ವೀಕ್ಷಿಸುತ್ತಾ ಸಂತಸಪಡು... ...ವಾಗಲೇ ಅವರ ಮೇಲೆ ಹಠಾತ್ತನೆ ಮೂರ್ನಾಲ್ಕು ... ಗೂಂಡಾ ಪಡೆ ಎರಗುತ್ತದೆ. ಮಹಿಳೆಯರು, ...ಳು, ವೃದ್ಧರು ಎಂದೆಲ್ಲ ನೋಡದೇ ನೇರವಾಗಿ ...ಸಿಗರ ಕೋಲುಗಳನ್ನು [illegible] ಎಳೆದಾಡುತ್ತಾರೆ. ...ಮೆರಾ ಟಿಕೆಟುಗಳನ್ನು ಪಡೆದಿಲ್ಲವೆಂದು ಪ್ರವಾಸಿಗರ ...ರಾಗಳನ್ನು ಒತ್ತಾಯಪೂರ್ವಕವಾಗಿ ಕಸಿಯುತ್ತಾರೆ. ...ಗೂಂಡಾ ಪಡೆ ಪರರಾಜ್ಯಗಳಿಂದ ಬಂದಿರುವ ...ಪ್ರವಾಸಿಗರನ್ನು ಕೆಟ್ಟ ರೀತಿಯಲ್ಲಿ ನಡೆಸುವುದನ್ನು ...ನೋಡಿದರೆ ಕೋಪ ಉಕ್ಕಿಬರುತ್ತದೆ.

...ಒಂದು ವೇಳೆ ಈ ಪುಂಡರ ದೌರ್ಜನ್ಯಕ್ಕೆ, ತಿರುಗಿಬಿದ್ದು ...ರ ಐಡೆಂಟಿಟಿ ಕಾರ್ಡ್‌ಗಳನ್ನು ತೋರಿಸಿ ಎಂದರೆ, ...ದೊಬ್ಬನೂ ಒಂದೊಂದು ಬಣ್ಣದ ಗುರುತಿನ ಚೀಟಿ ತೋರಿಸುತ್ತಾನೆ. ಯಾರದ್ದು ಅಸಲಿ, ಯಾರದ್ದು ನಕಲಿ ಎಂದು ಗೊತ್ತಾಗುವುದೇ ಇಲ್ಲ, ಹೋಗಲಿ, ಪ್ರವಾಸಿಗರ ಕ್ಯಾಮೆರಾ ಇನ್ಸ್‌ಪೆಕ್ಷನ್ ಮಾಡುವುದೇ ಆದರೆ ಕೆಆರ್‌ಎಸ್‌ನ ಸೆಕ್ಯೂರಿಟಿ ಗುತ್ತಿಗೆಯನ್ನು ಪಡೆದಿರುವ ಚೈತ್ರ ಗ್ರೂಪ್ ಎಂಬ ಸಂಸ್ಥೆ ಅದಕ್ಕೆಂದೇ ಸಮವಸ್ತ್ರ ಧರಿಸಿದ, ಗುರುತಿನ ಚೀಟಿಯನ್ನು ಹೊಂದಿರುವ ಸಿಬ್ಬಂದಿಯನ್ನು ನೇಮಿಸಬೇಕಿದೆ. ಅದು ಬಿಟ್ಟು ಪೋಲಿ ಪಟಾಲಂಗಳು ಏಕ್‌ದಂ ಪ್ರವಾಸಿಗರ ಮೇಲೆರಗಿ "ಕ್ಯಾಮೆರಾ ಕೊಡಿ, ಇಲ್ಲ ಫೈನ್ ಕಟ್ಟಿ" ಎಂದು ಧಮಕಿ ಹಾಕಿದರೆ ಮಾನವಂತ ಪ್ರವಾಸಿಗರಾದರೂ ಏನು ಮಾಡಬೇಕು. ಹೀಗಾಗಿ ಎಷ್ಟೋ ಜನ ಅವರೊಂದಿಗೆ ಮಾತು ಬೆಳೆಸುವುದೇ ಬೇಡವೆಂದು ಅವರು ಕೇಳಿದಷ್ಟು ಹಣವನ್ನು ಆ ಪುಂಡರ ಕೈಗಿಟ್ಟು ಜಾಗ ಖಾಲಿ ಮಾಡುತ್ತಾರೆ.



ವಿದೇಶೀ ಪ್ರವಾಸಿಗರು ಈ ಪುಂಡರ ಕೈಗೆ ಸಿಕ್ಕರಂತೂ ಅವರ ಕತೆ ಮುಗಿದಂತೆಯೇ. ಇವರ ಭಾಷೆ ಅವರಿಗೆ ತಿಳಿಯುವುದಿಲ್ಲ, ಅವರ ಮಾತು ಇವರಿಗೆ ಅರ್ಥವಾಗುವುದಿಲ್ಲ. ಈ ಲೂಟಿಕೋರ ತಂಡ ಅವರಿಂದ ಸಿಕ್ಕಷ್ಟು ಸುಲಿದು ಕಳಿಸುತ್ತದೆ. ತೀರ ದೌರ್ಜನ್ಯಕ್ಕೊಳಗಾದವರು ಅಲ್ಲೇ ಅಲೆದಾಡುವ ಹೋಂ ಗಾರ್ಡ್ಸ್‌ನವರಿಗೆ ಈ ವಿಷಯ ತಿಳಿಸಿದರೂ ನಾಲ್ಕಾಣೆಯ ಪ್ರಯೋಜನವಾಗುವುದಿಲ್ಲ. "ಈ ಬಗ್ಗೆ ನಮ್ಮನ್ನೇನೂ ಕೇಳಬೇಡಿ. ಮುಖ್ಯದ್ವಾರದಲ್ಲಿರುವ ಮ್ಯಾನೇಜರ್ ಅಥವಾ ಪೊಲೀಸರನ್ನು ಕೇಳಿ" ಎನ್ನುತ್ತಾರೆ. ಗೇಟಿನ ಬಳಿ ಹೋಗಿ ಹಿಂದುಗಟ್ಟಲೆ ನಿಂತು ಹರಟುತ್ತಿರುವ ಪೊಲೀಸರನ್ನು ಕೇಳಿದರೆ, "ಎಸ್‌ಐ ವೆಂಕಟೇಶಯ್ಯ ಸಾಹೇಬರು ಮನೇಗೋಗವ್ರೆ. ನಾವೇನೂ ಮಾಡಕ್ಕಾಗಲ್ಲ. ಮ್ಯಾನೇಜರ್‌ಅನ್ನೇ ಕೇಳಿ" ಎನ್ನುತ್ತಾರೆ. ಕಡೆಗೆ ಮ್ಯಾನೇಜರ್ ವೇಣುಗೋಪಾಲನ ಬಳಿ ಹೋಗಿ ಒಳಗೆ ನಡೆದ ಘಟನೆಗಳನ್ನು ಹೇಳಿದರೆ "ಅವರನ್ನು ಕರೆದು ಬುದ್ಧಿ ಹೇಳುತ್ತೀನಿ ಬಿಡಿ" ಎಂದಷ್ಟೇ ಹೇಳಿ ನುಣುಚಿಕೊಳ್ಳುತ್ತಾನೆ.

ಬೋಟಿಂಗ್‌ನಲ್ಲೂ ಮೋಸ

ಅತ್ತ ಟೋಲ್ ಮತ್ತು ಎಂಟ್ರಿ ಫೀಸ್ ನೆಪದಲ್ಲಿ ಪೋಕರಿಗಳು ಹಣ ಕೀಳುವ ಕಾರ್ಯದಲ್ಲಿ ನಿರತರಾಗಿದ್ದರೆ, ಇತ್ತ ಕೆಎಸ್‌ಟಿಡಿಸಿಗೆ ಸೇರಿದ ಬೋಟಿಂಗ್ ಜಾಗದಲ್ಲೂ ಮತ್ತೊಂದು ರೀತಿಯ ಗೋಲ್‌ಮಾಲ್ ಯಾವುದೇ ಅಡ್ಡಿ ಆತಂಕಗಳಿಲ್ಲದೆ ನಡೆಯುತ್ತದೆ. ಸುಮಾರು ಹನ್ನೆರಡರಷ್ಟು ಸಂಖ್ಯೆಯ ಜನರನ್ನು ಹಿಡಿಯುವ ಯಂತ್ರಚಾಲಿತ ಬೋಟ್‌ನಲ್ಲಿ ಇಪ್ಪತ್ತು-ಇಪ್ಪತ್ತೈದು ಜನರನ್ನು ಒಮ್ಮೆಲೇ ತುರುಕುತ್ತಾರೆ. ಜಾಗ ಸಾಲುವುದಿಲ್ಲ ಎಂದು ಯಾರಾದರೂ ಸೊಲ್ಲೆತ್ತಿದರೆ ಅಂಥವರನ್ನು ಗದರಿಸುತ್ತಾರೆ. ನಾಳೆ ಇಷ್ಟೊಂದು ಜನರನ್ನು ಹೊತ್ತ ದೋಣಿ ಅಕಸ್ಮಾತ್ ಮುಳುಗಿ ಅನಾಹುತವಾದರೆ ಎಂಬುದರ ಬಗ್ಗೆ ಯಾರಲ್ಲೂ ಕಾಳಜಿ ಇಲ್ಲ.

ಬೋಟಿಂಗ್‌ಗೆಂದು ಮೀಸಲಿರುವ ಆಯಕಟ್ಟನ್ನು ಸಂಪೂರ್ಣ ಸುತ್ತಬೇಕಾದ್ದು ಅವರ ಕರ್ತವ್ಯವಾದರೂ ಅರ್ಧಂಬರ್ಧ ಸುತ್ತುಹಾಕಿ ಕ್ಷಣಮಾತ್ರದಲ್ಲೇ ಪ್ರವಾಸಿಗರನ್ನು ದಡ ಸೇರಿಸುತ್ತಾರೆ. ಹೀಗೆ ಪ್ರವಾಸಿಗರನ್ನು ವಂಚಿಸಿ ಬೋಟ್‌ಗೆ ಬಳಸುವ ಡೀಸೆಲ್‌ನಲ್ಲಿ ಹಣ ಹೊಡೆಯುವುದೂ ಇಲ್ಲಿನ ದಂಧೆಕೋರರ ಮತ್ತೊಂದು ಕಸುಬಾಗಿದೆ.

ಮ್ಯಾನೇಜ್‌ಮೆಂಟಿನವರ ಅಡ್ಜೆಸ್ಟ್‌ಮೆಂಟು

ಅಸಲಿಗೆ ಬೃಂದಾವನದಲ್ಲಿ ನಡೆಯುತ್ತಿರುವ ವಸೂಲಿ ದಂಧೆಯಾಗಲಿ, ಮಹಿಳೆ ಮಕ್ಕಳ ಮೇಲಿನ ಶೋಷಣೆಯಾಗಲಿ ಅಲ್ಲಿನ ಮ್ಯಾನೇಜ್‌ಮೆಂಟಿಗೆ ತಿಳಿದಿಲ್ಲವೆಂದೇನೂ ಅಲ್ಲ. ಅವರಿಗೆ ಚೆನ್ನಾಗಿ ಗೊತ್ತಿದೆ. ಯಾಕೆಂದರೆ ಅಲ್ಲಿನ ಆಡಳಿತ ಮಂಡಳಿ, ಪೊಲೀಸ್ ಹಾಗೂ ಚೈತ್ರ ಗ್ರೂಪ್‌ನ ಮುಖ್ಯಸ್ಥ ಟಿ.ಎಸ್. ಪರಮೇಶ್ ನಡೆಸುತ್ತಿರುವ ಜಂಟಿ ಅವ್ಯವಹಾರ ಇದಾಗಿದೆ.

ಹೀಗೆ ಬೇಲಿಯೇ ಎದ್ದು ಹೊಲ ಮೇಯುವಾಗ ಕೆಆರ್‌ಎಸ್‌ಗೆ ಭದ್ರತೆಯೆಂಬುದಕ್ಕೆ ಅರ್ಥವೇ ಇಲ್ಲದಂತಾಗಿದೆ. ಅಲ್ಲಿನ ಲೂಟಿಕೋರ ಗೂಂಡಾಗಳು ಬೆದರಿಕೆ ಹಾಕಿದಾಗ ಮುಖಾಮುಖಿ ನೋಡದೆ ಅವರಿಗೆ ಗೂಟ ಕೊಟ್ಟುಬರುವುದೊಂದೇ ಪ್ರವಾಸಿಗರ ಪಾಲಿಗೆ ಉಳಿದಿರುವ ದಾರಿ.

● ಅರುಣ್ .ಜೆ

ಭಾರತದ ನ್ಯಾಯ ವ್ಯವಸ್ಥೆಗೆ ಜಂಗು ಹಿಡಿಸುತ್ತಿರುವ ಜನ

2002ರ ಫೆಬ್ರವರಿ 28ರಿಂದ ಶುರುವಾದ ಗುಜರಾತ್ ಹತ್ಯಾಕಾಂಡಕ್ಕೆ ಪ್ರತ್ಯಕ್ಷದರ್ಶಿಗಳಾಗಿದ್ದು, ಅದರ ಭಯಾನಕ ವಿವರಗಳನ್ನು ಭಾರತದ ನ್ಯಾಯವ್ಯವಸ್ಥೆಯ ಮುಂದೆಯೂ, ನಾಗರಿಕರ ಮುಂದೆಯೂ ಪ್ರಕಟಿಸಲು ಮುಂದಾದವರು, ಗುಜರಾತಿನ ನಿವೃತ್ತ ಡಿ.ಜಿ.ಪಿ. ಆರ್.ಬಿ.ಶ್ರೀಕುಮಾರ್. ನಿವೃತ್ತಿಯ ನಂತರ ತಾವು ಕಲೆ ಹಾಕಿದ ಮಹತ್ವಪೂರ್ಣ ಸಾಕ್ಷ್ಯಗಳನ್ನು ಶ್ರೀಕುಮಾರ್ ಕೇರಳದ ಪ್ರಖ್ಯಾತ ಪತ್ರಿಕೆ 'ಮಲಯಾಳಂ ಮನೋರಮ'ದಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದರು. ನಂತರದಲ್ಲಿ ಆ ಬರಹಗಳು ಒಟ್ಟಾಗಿ ಪುಸ್ತಕವಾಗಿ ಪ್ರಕಟವಾಯಿತು. ಆ ಪುಸ್ತಕವನ್ನು ಖ್ಯಾತ ಬರಹಗಾರರಾದ ಸಾರಾ ಅಬೂಬಕ್ಕರ್ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಧರ್ಮದ ಹೆಸರಿನಲ್ಲಿ' ಎಂಬ ಈ ಅನುವಾದ [illegible] ಸಮಾರಂಭ [illegible] ಆರ್.ಬಿ.ಶ್ರೀಕುಮಾರ್ ಹಾಗು ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಭಾರತದ ಮಾನವ ಹಕ್ಕು ಹೋರಾಟಗಳ ಅಗ್ರಪಂಕ್ತಿಯಲ್ಲಿ ಒಬ್ಬರಾದ ತೀಸ್ತಾ ಸೆಟ್ಲ್‌ವಾಡ್ ಮುಖ್ಯ ಅತಿಥಿಗಳಾಗಿ ಬಂದಿದ್ದರು. ಆ ಸಭೆಯಲ್ಲಿ ಈ ಇಬ್ಬರು ಆಡಿದ ಮಾತುಗಳಲ್ಲಿ, ಭಾರತದ ಪ್ರಜಾಪ್ರಭುತ್ವದ ಆಶಯಗಳಿಗೆ ಜಂಗು ಹಿಡಿಸುತ್ತಿರುವ 'ಅಧಿಕೃತ ಪ್ರಜಾಪ್ರಭುತ್ವ ಪಾಲಕ'ರ ವರಸೆಗಳ ಬಗ್ಗೆ ತೀವ್ರ ಆತಂಕವೂ, ಅಂತಹ ಶಕ್ತಿಗಳ ವಿರುದ್ಧ ನಿಂತು ಸ್ವತಂತ್ರ ಭಾರತದ ಸಂವಿಧಾನದ ಚೈತನ್ಯವನ್ನು ಕಾಪಾಡುವ ಛಲವೂ ಒಟ್ಟಾಗಿ ಇದ್ದವು. ಈ ಇಬ್ಬರು ಸತ್ಯಶೀಲರ ಬಗ್ಗೆ ಟಿಪ್ಪಣಿ ಸಹಿತ, ಅಂದು ಅವರಾಡಿದ ಮಾತುಗಳ [illegible]



ತೀಸ್ತಾ ಎಂಬ ನದಿ...

ಬಹುಶಃ ಅವರ ವಯಸ್ಸು 47. ಕೆಂಪು ಬಣ್ಣ ವಯಸ್ಸಿಗೊಪ್ಪುವ ಕೊಂಚ ತೋರದ ದೇಹ. ದುಬಾರಿಯಲ್ಲದ, ಆದರೆ ಬಣ್ಣ ಚಿತ್ತಾರಗಳಲ್ಲಿ ತನ್ನ ದೇಹಕ್ಕೊಪ್ಪುವ ಸೀರೆಯನ್ನು ಒಪ್ಪವಾಗಿ ಉಟ್ಟು, ಕಿವಿಗೆ ದೊಡ್ಡದಾದ ಜುಮುಕಿಗಳನ್ನೂ, ಮೂಗಿಗೆ ಚಿಕ್ಕದಾದ ಮೂಗುತಿಯನ್ನೂ ಕಣ್ಣಿಗೆ ನೀಟಾಗಿ ಕಾಡಿಗೆಯನ್ನೂ ಹಾಕಿಕೊಂಡಿರುವ ಈ ಹೆಂಗಸನ್ನು ನಾವು ಮುಂಬೈಯ ಲೋಕಲ್ ರೈಲು ನಿಲ್ದಾಣಗಳಲ್ಲಿ ಕಂಡರೆ, ಮತ್ತೊಬ್ಬ ಮುಂಬೈಕರ್ ಎಂದು ನೋಡಿ ಮುಂದೆ ಹೋಗುತ್ತೇವೆ. ಭಾರತದ ಸದ್ಯದ ಪರಿಸ್ಥಿತಿಯಲ್ಲಿ ಇವರು ಎಂಥ ದಿಟ್ಟ ಹೆಂಗಸು ಎಂಬುದಕ್ಕೆ ಖ್ಯಾತ ಪತ್ರಕರ್ತ ಸದಾನಂದ ಮೆನನ್ ಒಂದು ವಿಲಕ್ಷಣ ಉದಾಹರಣೆ ಕೊಡುತ್ತಾರೆ. 2008ರ ನವೆಂಬರ್ 26ರಂದು ಮುಂಬೈಯಲ್ಲಿ ಕೆಲವು ಉಗ್ರವಾದಿಗಳು ರೈಲು ನಿಲ್ದಾಣ, ಪಂಚತಾರ ಹೋಟೇಲುಗಳ ಮೇಲೆ ಹಠಾತ್ ದಾಳಿ ನಡೆಸಿದರಲ್ಲ, ಆಗ ಸದಾನಂದ ಮೆನನ್ ಗುಜರಾತಿನ ಅಹ್ಮದಾಬಾದ್‌ನಲ್ಲಿ ಇದ್ದರಂತೆ. ಅವರು ಟ್ಯಾಕ್ಸಿಯೊಂದರಲ್ಲಿ ಪ್ರಯಾಣಿಸುವಾಗ ಡ್ರೈವರನೊಟ್ಟಿಗೆ ಮುಂಬೈ ದಾಳಿಯ ಬಗ್ಗೆ ಮಾತೆತ್ತಿದರು. ಆಗ ಆ ಚಾಲಕ 'ಬಿಡಿ ಸ್ವಾಮಿ, ಯಾರನ್ನೂ ಹಿಡಿಯೋದಿಲ್ಲ, ಯಾರಿಗೂ ಶಿಕ್ಷೆ ಆಗೋದಿಲ್ಲ' ಅಂದ. ಅಷ್ಟು ಹೊತ್ತಿಗಾಗಲೇ ಕಸಬ್ ಎಂಬ ವ್ಯಕ್ತಿಯನ್ನು ಬಂಧಿಸಿದ್ದರು. ಮೆನನ್ ಆ ವಿಷಯವನ್ನು ಡ್ರೈವರ್‌ಗೆ ತಿಳಿಸಿದರು. ಅದಕ್ಕವನು 'ಅಯ್ಯೋ! ಹಿಡಿದರೇನು ಬಿಡಿ! ಇನ್ನೊಂದೆರಡು ದಿನಗಳಲ್ಲಿ ತೀಸ್ತಾ ಸೆಟ್ಲ್‌ವಾಡ್ ಸುಪ್ರೀಂಕೋರ್ಟಿಗೆ ಹೋಗಿ ಅವನನ್ನು ಬಿಡಿಸಿಬಿಡುತ್ತಾಳೆ!' ಎಂದನಂತೆ. ತೀಸ್ತಾ ಎಂಥ ಮಹಿಳೆ ಎಂದು ಗೊತ್ತಿರುವ ಸದಾನಂದ್ ಮೆನನ್‌ಗೂ, ಆಕೆಯ ಹೋರಾಟದ ಖ್ಯಾತಿಯ ಬಗ್ಗೆ ವಕ್ರವಾಗಿಯಾದರೂ ಈ ಟ್ಯಾಕ್ಸಿ ಡ್ರೈವರನಿಗೆ ತಿಳಿದಿದೆಯಲ್ಲ ಎಂದು ಆಶ್ಚರ್ಯವಾಯಿತಂತೆ. ಈ ಘಟನೆಯನ್ನು ವಿವರಿಸುವ ತಮ್ಮ ಟಿಪ್ಪಣಿಗೆ ಸದಾನಂದ ಮೆನನ್ ಕೊಟ್ಟ ಶಿರೋನಾಮೆ 'ತೀಸ್ತಾ ಎಂಬ ನದಿ'.

ಮುಂಬೈ ವಿಶ್ವವಿದ್ಯಾಲಯದಿಂದ 1983ರಲ್ಲಿ ತತ್ವಶಾಸ್ತ್ರ ಪದವಿ ಪಡೆದನಂತರ ತೀಸ್ತಾ ಸೆಟ್ಲ್‌ವಾಡ್ ಮುಂಬೈಯಲ್ಲಿ 'ದಿ ಡೈಲಿ', 'ಇಂಡಿಯನ್ ಎಕ್ಸ್‌ಪ್ರೆಸ್' ಹಾಗು 'ಬ್ಯುಸಿನೆಸ್ ಟುಡೆ' ಪತ್ರಿಕೆಗಳಲ್ಲಿ ಹತ್ತು ವರ್ಷಗಳ ಕಾಲ ಪತ್ರಕರ್ತರಾಗಿ ಕೆಲಸ ಮಾಡಿದರು. ಬಾಬ್ರಿ ಮಸೀದಿ ನಾಶದ ನಂತರ 1992ರ ಡಿಸೆಂಬರ್ ಹಾಗು 1993ರ ಜನವರಿ ತಿಂಗಳುಗಳಲ್ಲಿ ಮುಂಬೈಯಲ್ಲಿ ನಡೆದ ಕೋಮುಹಿಂಸೆಯಲ್ಲಿ ಸಮಾಜದ ವಿವಿಧ ವರ್ಗಗಳು, ರಾಜಕಾರಣಿಗಳು, ಕಾನೂನು ಪಾಲಕರು ಹಾಗು ಮಾಧ್ಯಮಗಳು ಶಾಮೀಲಾದ ಬಗೆಯನ್ನು ಕಂಡು ಬೆಚ್ಚಿದ ತೀಸ್ತಾ, ಪತ್ರಕರ್ತ ವೃತ್ತಿ ತೊರೆದು ತಮ್ಮ ಗಂಡ ಜಾವೇದ್ ಆನಂದರೊಟ್ಟಿಗೆ ಕೋಮುವಾದದ ವಿರುದ್ಧ ಹೋರಾಟಕ್ಕೆ ಮೀಸಲಾದ 'ಸಬ್‌ರಂಗ್ ಕಮ್ಯುನಿಕೇಶನ್ಸ್' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಮುಖ್ಯವಾಹಿನಿಯಲ್ಲಿರುವ ಮಾಧ್ಯಮಗಳು ಕೋಮುಹಿಂಸೆಯ ಸತ್ಯರೂಪವನ್ನು ತಿರುಚಿ, ಹಿಂಸೆಗೆ ತುತ್ತಾದವರನ್ನೇ ಆಕ್ರಮಣಕಾರರು ಎಂದು ಬಿಂಬಿಸುವ ವರಸೆಗಳು ಬರಿ ಕೋಮುವಾದಿ ಮನೋಭಾವದ ಪತ್ರಕರ್ತರ ವೈಯಕ್ತಿಕ ಕುಕೃತ್ಯಗಳಾಗಿರದೆ, ಇಡಿ ಮಾಧ್ಯಮ ವ್ಯವಸ್ಥೆಯ ವೈಚಾರಿಕತೆಯಲ್ಲೇ ಬೇರುಬಿಟ್ಟಿರುವ ಸ್ಥಾಪಿತ ತರ್ಕವೆಂದು ಕಂಡುಕೊಂಡಿದ್ದ ತೀಸ್ತಾ, ಮೊದಲಾಗಿ ಕೋಮುಹಿಂಸೆಯ ವಾಸ್ತವಿಕ ರೂಪವನ್ನು ಸತ್ಯಶೋಧನಾ ವರದಿಗಳು, ಅವುಗಳ ಆಧಾರದಲ್ಲಿ ನಡೆಯುವ ವಿಶ್ಲೇಷಣೆಗಳನ್ನು ಜನರಿಗೆ ಕಂಡರಿಸುವ ಉದ್ದೇಶವುಳ್ಳ 'ಕಮ್ಯುನಾಲಿಸಮ್ ಕಂಬ್ಯಾಟ್' ಎಂಬ ಮಾಸಿಕ ಪತ್ರಿಕೆ ಪ್ರಾರಂಭಿಸಿದರು. ಅಂಥಾ ಒಂದು ಪತ್ರಿಕೆಯನ್ನು ಉಳಿಸಿ ಬೆಳೆಸುವುದು ಎಷ್ಟು ತ್ರಾಸದ ಕೆಲಸ ಎಂದು ಬಲ್ಲ ಸಹೃದಯರಿಗೂ ಪತ್ರಿಕೆಯ ಬಾಳಿಕೆ ಬಗ್ಗೆ ಸಂದೇಹವಿದ್ದಿರಬೇಕು. ಆದರೆ 1997ರಲ್ಲಿ, ಮುಂಬೈ ಕೋಮುಹಿಂಸೆಯ ವಿಚಾರಣೆ ನಡೆಸಿದ 'ಶ್ರೀಕೃಷ್ಣ ಆಯೋಗ'ದ ವರದಿಯನ್ನು ಸಮಗ್ರವಾಗಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಮೂಲಕ ತೀಸ್ತಾ ತಮ್ಮ ಛಲ ಮತ್ತು ಸಂಕಲ್ಪ ಬಲಗಳ ಝಲಕ್ ತೋರಿಸಿಬಿಟ್ಟರು. ಆ ಪ್ರಕಟಣೆ ಅಧಿಕಾರ ವಿರೋಧಿ ಚಳವಳಿಗಳ ಇತಿಹಾಸದಲ್ಲೇ ಒಂದು ಮೈಲಿಗಲ್ಲು. ಸಮಕಾಲೀನ ಸಂದರ್ಭದಲ್ಲಿ 'ನರ್ಮದ ಬಚಾವ್ ಆಂದೋಲನ'ದ ಮೂಲಕ ಮತ್ತೊಬ್ಬ ಗಟ್ಟಿಗಾತಿ ಮೇಧಾ ಪಾಟ್ಕರ್ ಅಧಿಕಾರಸ್ಥರ 'ಅಭಿವೃದ್ಧಿ' ಪರಿಕಲ್ಪನೆಯ ಹುಟ್ಟಾ ಸುಳ್ಳುಗಳನ್ನು ಬಯಲು ಮಾಡಿ ಸಾರ್ವಜನಿಕ ವಾಗ್ವಾದದ ನೆಲೆಗಳನ್ನೇ ಹೊಸ ದಿಕ್ಕಿಗೆ

▶▶▶

ವಿಶೇಷ ಲೇಖನ

● ಕೆ.ಫಣಿರಾಜ್

- ಇಂದು ಕೋಮುವಾದ ಹಿಂದೂತ್ವವಾದಿ ಸಂಘಟನೆಗಳ ಆಕ್ರಮಣಕಾರಿ ಕಾರ್ಯಾಚರಣೆ ಮಾತ್ರವಾಗಿ ಉಳಿದಿಲ್ಲ. ಅದು ಭಾರತದ ಪ್ರಜಾಪ್ರಭುತ್ವದ ಮುಖ್ಯಾಂಗಗಳಲ್ಲಿ ಸೇರಿಕೊಂಡು, ಸಂವಿಧಾನದ ನಿಯಮಗಳಿಗೆ ಜಂಗು ಹಿಡಿಸಿ, ಪ್ರಜಾಪ್ರಭುತ್ವ ವ್ಯವಸ್ಥೆ ಕುಸಿಯುವಂತೆ ಮಾಡುವ ಬಲವನ್ನು ಪಡೆದುಕೊಂಡಿದೆ. ಅಪಾಯದ ಈ ಸ್ವರೂಪದ ಅರಿವು ಇಲ್ಲದೇ ಹೋದರೆ, ನಮ್ಮ ಹೋರಾಟಗಳಿಗೆ ದಿಕ್ಕು-ದೆಸೆ ಇರುವುದಿಲ್ಲ.
- 2002ರ ಗುಜರಾತ್ ಹಿಂಸಾಕಾಂಡಕ್ಕೆ 1995ರಿಂದಲೇ ತಯಾರಿ ಶುರುವಾಗಿತ್ತು ಎನ್ನುವುದನ್ನು ನಾವು ಮರೆಯಕೂಡದು. ಅಲ್ಪಸಂಖ್ಯಾತರ ಬಗ್ಗೆ ದ್ವೇಷವನ್ನು ಕಾರ್ಯಾಂಗ, ನ್ಯಾಯಾಂಗ, ಕಾನೂನುಪಾಲನ ಸಂಸ್ಥೆ ಹಾಗು ಸಮಾಜದ ನಾಗರಿಕರಲ್ಲಿ ಬಿತ್ತುವ ಪ್ರಕ್ರಿಯೆ ಗುಜರಾತಿನಲ್ಲಿ ಅಂದಿನಿಂದ ಪ್ರಾರಂಭವಾಗಿತ್ತು. ಅಂತಹ ಕೆಲಸ, ನಾನು ವಾಸಿಸುವ ಮಹಾರಾಷ್ಟ್ರದಲ್ಲೂ, ಕರ್ನಾಟಕದಲ್ಲೂ ಈಗಾಗಲೇ ಶುರುವಾಗಿದೆ. ಗುಜರಾತ್ ಹಿಂಸೆ ಇಡೀ ದೇಶದಲ್ಲಿ ಎಲ್ಲಿ ಬೇಕಾದರೂ ಸಂಭವಿಸಬಹುದು ಎಂಬ ಸ್ಥಿತಿ ನಿರ್ಮಾಣವಾಗುತ್ತಿದೆ. ಉದಾಹರಣೆಗೆ, 2006ರಲ್ಲಿ ಮಂಗಳೂರಿನಲ್ಲಿ ನಡೆದ ಕೋಮುಹಿಂಸೆಯನ್ನೇ

ಪ್ರಜಾಪ್ರಭುತ್ವವನ್ನು ನಿಶಕ್ತಗೊಳಿಸುವ ಕೋಮುವಾದದ ಬಲ

(ಮಂಗಳೂರಿನ ಸಭೆಯಲ್ಲಿ ತೀಸ್ತಾ ಸೆಟ್ಲ್‌ವಾಡ್ ಆಡಿದ ಮಾತುಗಳ ಮುಖ್ಯಾಂಶಗಳು)

ತೆಗೆದುಕೊಳ್ಳೋಣ. ನಾನು ಆಗ ಸತ್ಯಾಂಶಗಳನ್ನು ಕಂಡರಿಯಲು ಸತ್ಯಶೋಧನ ಸಮಿತಿಯನ್ನು ಕಟ್ಟಿಕೊಂಡು ಬಂದಿದ್ದೆ. ನಾವು ಉಳ್ಳಾಲಕ್ಕೆ ಹೋದಾಗ, ಅಲ್ಲಿನ 40 ಮುಸ್ಲಿಮ್ ಮನೆಗಳವರು ಪೊಲೀಸರು ತಮ್ಮ ಮೇಲೆ ನಡೆಸಿದ ದೌರ್ಜನ್ಯದ ಬಗ್ಗೆ ಹೇಳಿಕೊಂಡರು. ನಡುರಾತ್ರಿಯಲ್ಲಿ ಪೊಲೀಸರು ತಮ್ಮ ಮನೆಗಳಿಗೆ ನುಗ್ಗಿ ಹೆಂಗಸರು, ಮಕ್ಕಳು, ಮುದುಕರೆಂದು ನೋಡದೆ ಹೊಡೆದು, ಸ್ವತ್ತುಗಳನ್ನು ದೋಚಿ, ಯುವಕರನ್ನು ಬಂಧಿಸಿ ಕರೆದುಕೊಂಡು ಹೋದ ವಿವರಗಳನ್ನು ಅವರು ನಮಗೆ ಹೇಳಿದರು. ಅವರ ದೂರನ್ನು ಪೊಲೀಸರು ದಾಖಲಿಸಿಕೊಳ್ಳಲು ನಿರಾಕರಿಸಿದರು. ಅಂದೇ ನಮ್ಮ ತಂಡ ಮಂಗಳೂರಿನ ಎಸ್.ಪಿ.ಯನ್ನು ಭೇಟಿಯಾಗಿ, ಈ ವಿವರಗಳನ್ನು ತಿಳಿಸಿ, ತಪಿತಸ್ಥರ ಮೇಲೆ ಕೇಸು ದಾಖಲಿಸಿ, ಒಂದು ಮನವಿ



ಮಾಡಿದೆವು. ಆದರೆ ಅವರು 'ಈ ಘಟನೆಗಳನ್ನು ಕಂಡವರಿಲ್ಲ, ಅದು ಸತ್ಯವೋ ಅಲ್ಲವೋ ನಮಗೆ ತಿಳಿಯದು...' ಎಂದು ಜಾರಲು ನೋಡಿದರು. ನಾವು ಆಗ 'ನೋಡಿ ಪೆಟ್ಟು ತಿಂದವರೇ ದೂರು ಕೊಡುತ್ತಿದ್ದಾರೆ. ದೂರು ದಾಖಲಿಸಲು ಅಷ್ಟು ಪುರಾವೆ ಸಾಕಲ್ಲವೇ?' ಎಂದಾಗ, ಆ ಮನುಷ್ಯ ಏನಂದ ಗೊತ್ತೇ! 'ಈ ಸಾಬರ ಮಾತುಗಳನ್ನು ನಂಬಲಾಗುವುದಿಲ್ಲ' ಎಂದ! ಇದು 1995ರ ಗುಜರಾತ್.

ಇನ್ನೊಂದು ಉದಾಹರಣೆ ಮಹಾರಾಷ್ಟ್ರದ್ದು. ಅಲ್ಲಿ ಈಗ, ಹಿಂದೂ-ಮುಸ್ಲಿಮ್ ಅಂತರ್ಮತೀಯ ವಿವಾಹಗಳ ಮೇಲೆ ಸ್ಥಳೀಯ ಪೊಲೀಸರು ನಿಗಾ ಇಡುವ ಪದ್ಧತಿ ಶುರುವಾಗಿದೆ. ಇದು ಪೂರಕ್ಕೆ ಪೂರ ಅಸಂವಿಧಾನಿಕ. ಪೊಲೀಸರಿಗೆ ಈ ಅಧಿಕಾರ ಕೊಟ್ಟವರು ಯಾರು, ಜನರ ವೈಯಕ್ತಿಕ ನಡಾವಳಿಗಳ ಮೇಲೆ ನಿಗಾ ಇಡಲು ನಿಮಗೆಷ್ಟು ಧೈರ್ಯ! ಎಂದು ಯಾರೂ ಪೊಲೀಸರನ್ನು ಪ್ರಶ್ನಿಸುತ್ತಿಲ್ಲ. ಇದು ಕೂಡ 1995ರ ಗುಜರಾತ್. ಗುಜರಾತಿನಲ್ಲಿ ಸುಶಿಕ್ಷಿತರು ತಮ್ಮ ಮಕ್ಕಳನ್ನು ಓದಿಸುವ ಶ್ರೀಮಂತರ ಶಾಲೆಗಳಿಗೆ ಇಂದು ಸ್ಥಿತಿವಂತ ಮುಸಲ್ಮಾನರು ತಮ್ಮ ಮಕ್ಕಳನ್ನು ಕಳಿಸುವ ಹಾಗಿಲ್ಲ. ಇದೆಂತಹ ನಿಷೇಧ ಎಂದು ನಾನು ಕೆಲವು ಪ್ರತಿಷ್ಠಿತ ಶಾಲೆಗಳ ಆಡಳಿತ ಮಂಡಳಿಯವರಿಗೆ ಕೇಳಿದೆ. ಅದಕ್ಕವರು 'ಮುಸಲ್ಮಾನರ ಜೊತೆ ಕೂತು ಕಲಿಯುವುದಾದರೆ ನಮ್ಮ ಮಕ್ಕಳನ್ನು ನಿಮ್ಮ ಶಾಲೆಗೆ ಸೇರಿಸುವುದಿಲ್ಲ ಎಂದು ಸುಶಿಕ್ಷಿತ ಹಿಂದೂಗಳು ಕಡ್ಡಿತುಂಡು ಮಾಡಿದ ಹಾಗೆ ಹೇಳುತ್ತಿದ್ದಾರೆ' ಎಂದರು. ಮಂಗಳೂರಿನಲ್ಲೂ ಈ ಭೇದ ಶುರುವಾಗಿದೆ ಎಂದು ನನ್ನ ಸ್ನೇಹಿತರು ಹೇಳುತ್ತಿದ್ದಾರೆ.

- 1993ರಲ್ಲಿ ನಾನು 'ಬ್ಯುಸಿನೆಸ್ ಟುಡೆ'ಯಲ್ಲಿನ ಕೆಲಸ ಬಿಟ್ಟು 'ಕಮ್ಯುನಲಿಸಮ್ ಕಂಬ್ಯಾಟ್' ಶುರುಮಾಡಿದೆ. ಮುಖ್ಯ ವಾಹಿನಿಯ ಮಾಧ್ಯಮ ವ್ಯವಸ್ಥೆಯಲ್ಲಿದ್ದುಕೊಂಡು ಕೋಮುಗಲಭೆಗಳ ಬಗ್ಗೆ ವಾಸ್ತವಿಕ ಸಂಗತಿಗಳನ್ನು ಹೇಳುವುದು ಅಸಾಧ್ಯವೆಂದು ನನಗೆ ಕಂಡಿತು. ಈ ಸಭೆಯಲ್ಲಿ ಬಹಳಷ್ಟು ಪತ್ರಕರ್ತರಿದ್ದೀರಿ. ಸತ್ಯಸಂಗತಿಗಳನ್ನು ವರದಿ ಮಾಡುವ ಭಾರ ನಮ್ಮಂತಹ ಪುಟ್ಟ ಪತ್ರಿಕೆಗಳ ಮೇಲೆ ಇದೆ. ಮುಖ್ಯವಾಹಿನಿಯ ಮಾಧ್ಯಮಗಳು ಈ ಜವಾಬ್ದಾರಿಯನ್ನು ಯಾಕೆ ಹೊರುತ್ತಿಲ್ಲ? ಎಂದು ಸ್ವಲ್ಪ ಯೋಚಿಸಿ. ನಿಮಗೆ ಯಾವುದೇ ವಿಭಾಗದ ವರದಿಯ ಕೆಲಸ ಕೊಟ್ಟಿರಲಿ, ಅಲ್ಲಿ ಖಂಡಿತ ನಿಮಗೆ ಕೋಮುವಾದ ವಾಸ್ತವಿಕತೆ ಕಣ್ಣಿಗೆ ಹೊಡೆಯುತ್ತದೆ; ಅದನ್ನು ಕಂಡ ಹಾಗೆ ಹೇಳಿದರೂ ಸಮಾಜಕ್ಕೆ ದೊಡ್ಡ ಉಪಕಾರವಾಗುತ್ತದೆ. ಅದು ಆಗುತ್ತಿಲ್ಲ ಮಾತ್ರವಲ್ಲದೆ ಕೋಮುಹಿಂಸೆಯನ್ನು ಉದ್ರೇಕಿಸುವ ರಂಜಕ ವರದಿಗಳನ್ನು ಪ್ರಕಟಿಸುವುದು ವೃತ್ತಿವಂತಿಕೆಯ [illegible] ಲಕ್ಷಣವಾಗಿಬಿಟ್ಟಿದೆ. 2002ರ ಫೆಬ್ರವರಿ 27ರಂದು ಗೋಧ್ರಾ ಘಟನೆ ನಡೆಯಿತು. 28ನೇ ತಾರೀಖಿನಂದು, ಗುಜರಾತಿನ ಬಹು ಪ್ರಸಾರದ ಪತ್ರಿಕೆ 'ಸಂದೇಶ್' ಗೋಧ್ರದಲ್ಲಿ ನಾಲ್ಕು ಹಿಂದೂ ಹುಡುಗಿಯರ ಮೇಲೆ ಅತ್ಯಾಚಾರ ನಡೆದಿದೆ ಎಂದು ಮುಖಪುಟದಲ್ಲಿ ದ[illegible]ಗಳಲ್ಲಿ ಪ್ರಕಟಿಸಿತು. ಇದು ಹಸಿಸುಳ್ಳು ಎಂದು ಗೊತ್ತಾಗುವುದಕ್ಕೆ ನಾಲ್ಕು ದಿನವಾಯಿತು. ಅಷ್ಟರಲ್ಲಿ ಕೋಮುಹಿಂಸೆಗೆ ತುಪ್ಪ ಸುರಿಯುವ ವರದಿಯ ಉದ್ದೇಶ ಸಫಲವಾಗಿ ಹೋಗಿತ್ತು.

▶▶▶

...ಮತ್ತು ಹಾಗು 'ಶ್ರೀಕೃಷ್ಣ ಆಯೋಗ'ದ ವರದಿಯ ... ಇವು ಎರಡೂ ಅಪೂರ್ವ ವಿದ್ಯಮಾನಗಳು. ...ವರದಿ. ಭಾರತದ ಇಡಿ ಅಧಿಕಾರಸ್ಥ ವ್ಯವಸ್ಥೆಯೇ ...ಕೋಮುಹಿಂಸೆಯಲ್ಲಿ ಭಾಗಿಯಾಗಿ ನಾಚಿಕೆ ಇಲ್ಲದೆ ...ಧಾಯಿತ್ವದಿಂದ ನುಣುಚಿಕೊಳ್ಳುವ ದುರ್ಮಾರ್ಗ ...ಹೇಗೆ ಕರಗತ ಮಾಡಿಕೊಂಡಿದೆ ಎಂಬುದನ್ನು ...ವಾಗಿ ತೋರಿಬಿಟ್ಟಿತು. ಆ ನಂತರ, ಆ ವರದಿ ...ಪಾಠಗಳನ್ನು ಹೇಗೆ ಕಾರ್ಯಶೀಲ ಚಳವಳಿಯಾಗಿ ...ರ್ತಿಸಬೇಕು ಎಂದು ಮುಂದೆ ನಿಂತು ತೋರಿಸಿ ...ತೀಸ್ತಾ ಇಂದು ಭಾರತದ ಮಾನವ ಹಕ್ಕು ಹೋರಾಟ ...ಗೆ ಹಿರಿಯಕ್ಕನಾಗಿದ್ದಾರೆ.

...2002ರ ಗುಜರಾತ್ ಹತ್ಯಾಕಾಂಡದ ವರದಿಯ ...ಳಿಕೆ ಸಮಾಜದ ನರನರಗಳಲ್ಲಿ ಹರಿಯುತ್ತಿರುವ ...ವಿಷ ಭಯಾನಕ ಪರಿಣಾಮಗಳನ್ನು ವಸ್ತುನಿಷ್ಠವಾಗಿ ...ಸಿದ್ದರ ಜೊತೆಗೇ, ತೀಸ್ತಾ ಆ ಹಿಂಸೆಯನ್ನೇ ಕುದುರೆ ...ಗಿ ಮಾಡಿಕೊಂಡು ಅಧಿಕಾರ ರಥದಲ್ಲಿ ಎಗ್ಗಿಲ್ಲದೇ ...ಯುತ್ತಿರುವ ಮೋದಿಯ ಫ್ಯಾಸಿಸ್ಟ್ ರಾಜಕೀಯದ ...ಪ್ರಜಾತಾಂತ್ರಿಕ ಸಮರ ಹೂಡಿರುವುದೂ ಅಸಮಾನ್ಯ ...ಯೇ ಸರಿ. ಹಣಬಲ–ಜನಬಲ–ಅಧಿಕಾರ ...ವನ್ನುಳ್ಳ ಪ್ರಮುಖ ರಾಜಕೀಯ ಪಕ್ಷಗಳು ಮೋದಿಯ ...ಯವನ್ನು ನಿರ್ಲಜ್ಜವಾಗಿ ಸಹಿಸಿಕೊಂಡು ಭಾರತದ ...ಪ್ರಭುತ್ವದ ಮರ್ಯಾದೆಯನ್ನು ಮೂರು ಕಾಸಿಗೆ ...ಮು ಹಾಕುವ ನೀಚತನದಲ್ಲಿ ತೊಡಗಿರುವಾಗ, ಈ ...ಕೆ ಛಲವಂತರನ್ನು ಒಗ್ಗೂಡಿಸಿ ಸಂವಿಧಾನದ ಪ್ರಾಣಪಕ್ಷಿ ...ರಕ್ಷಿಸುವ ದೀರ್ಘ ಹೋರಾಟದಲ್ಲಿ ತೊಡಗಿದ್ದಾರೆ. ...ದ ಆಂಗ್ ಸೂಕಿ, ಮಣಿಪುರದ ಇರೋಮ್ ...ಳ, ಮೇಧಾ ಪಾಟ್ಕರ್, 1984ರ ದೆಹಲಿಯಲ್ಲಿ ...ಮೇಲೆ ನಡೆದ ಹಿಂಸೆಗೆ ತುತ್ತಾದವರ ಆತ್ಮಸಾಕ್ಷಿಯಂತೆ ...ಡಾಡಿದ ಸುಖ್ವಿಂದರ್ ಕೌರ್, ತೀಸ್ತಾ ಸೆಟ್ಲ್‌ವಾಡ್..... ...ಪ್ರಭುತ್ವದ ಮೌಲ್ಯಗಳಿಗೆ ಜಯ ತಂದುಕೊಡುವ ...ವಾಗಿ ನ್ಯಾಯದ ರಿಲೇ ಕೋಲು ಹಿಡಿದು ...ರಿಯದೆ ಓಡುತ್ತಿರುವವರ ಸಂಖ್ಯೆ ಬಹಳವಿಲ್ಲ.

ಹಾಗಂತ, ಇವರ ಹಾದಿಗೆ ಇವರು ಹೋರಾಟ ಮಾಡಿಕೊಂಡಿರುತ್ತಾರೆ ಎನ್ನುವ ಹಾಗಿಲ್ಲ, ಗುಜರಾತ್ ಹಿಂಸಾಕಾಂಡದ ಒಂದು ಪ್ರಮುಖ ಘಟನೆಯಾದ ಬೆಸ್ಟ್ ಬೇಕರಿ ಕೇಸಿನಲ್ಲಿ ಜೀವಂತ ಉಳಿದಿರುವ ಜಹೀರ ಶೇಖ್‌ಳನ್ನು ವಹಿಸಿಕೊಂಡು ತೀಸ್ತಾ ಭಾರತದ ಸರ್ವೋಚ್ಚ ನ್ಯಾಯಾಲಯದ ಮೂಲಕ ಗುಜರಾತಿನ ಹಿಂಸೆಯ ಭಾಗೀದಾರರನ್ನು ಕಟಕಟೆಗೆ ತಂದು ನಿಲ್ಲಿಸುವ ಪ್ರಯತ್ನ ಮಾಡಿದರು. ಆದರೆ ಜಹೀರಾ ಶೇಖ್ ವಿಚಾರಣೆಯ ಮಧ್ಯದಲ್ಲಿ ತನ್ನ ನಿಲುವು ಬದಲಾಯಿಸಿ ತಿರುಗಿಬಿದ್ದ ಸಾಕ್ಷಿಯಾದಳು. ಆಗ ಅಧಿಕಾರಸ್ಥರೆಲ್ಲ ತೀಸ್ತಾ ಮೇಲೆ ಮುಗಿಬಿದ್ದು ಆಕೆ ಜಹೀರಾ ಶೇಖಳನ್ನು ಬಲಾತ್ಕಾರದಲ್ಲಿ ಬಂಧನದಲ್ಲಿರಿಸಿ, ಸುಳ್ಳು ಸಾಕ್ಷ್ಯ ಹೇಳಿಸುವ ಮೂಲಕ ಮಹಾ ಅಪರಾಧವೆಸಗಿದ್ದಾರೆ ಎಂದು ಅವರನ್ನು ಹಣಿಯಲು ನೋಡಿದರು. ಅಂಥಾ ಪರಿಸ್ಥಿತಿಯಲ್ಲೂ ತೀಸ್ತಾ, ಮಾಧ್ಯಮದವರು ಬಾಯಿಗೆ ಕೈಹಾಕಿದರೂ ಜಹೀರಾ ಶೇಖ್ ಬಗ್ಗೆ ಒಂದೇ ಒಂದು ಕೆಟ್ಟ ಮಾತನಾಡದೆ ದಿಟ್ಟತನದಿಂದ ಪರಿಸ್ಥಿತಿಯನ್ನು ಎದುರಿಸಿದರು. ಈಗ ತೀಸ್ತಾ, ಗುಜರಾತ್ ಹಿಂಸಾಕಾಂಡದ ಪ್ರಮುಖ ಘಟನೆಗಳನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಒಯ್ದು, ಮುಚ್ಚಿಹಾಕಲಾಗಿದ್ದ ಆ ಕೇಸುಗಳು ನ್ಯಾಯಾಲಯ ನೇಮಿಸಿರುವ ವಿಶೇಷ ತನಿಖಾ ದಳದಿಂದ ಮರು ವಿಚಾರಣೆಗೆ ತೆರೆಯುವಂತೆ ಮಾಡಿದ್ದಾರೆ. ತೀಸ್ತಾರ ಈ ಛಲವಂತಿಕೆಯನ್ನು ಸಹಿಸಿಕೊಳ್ಳಲಾಗದ ಜನ, ಅವರು ಸುಳ್ಳು ಕೇಸುಗಳನ್ನು ಸೃಷ್ಟಿಸಿ ನ್ಯಾಯಾಲಯದ ದಾರಿ ತಪಿಸುತ್ತಿದ್ದಾರೆ ಎಂಬ ಆಪಾದನೆ ಹೊರಿಸುತ್ತಿದ್ದಾರೆ.

2008ರಲ್ಲಿ ತೀಸ್ತಾ "ಗುಜರಾತ್ ಹಿಂಸಾಚಾರಕ್ಕೆ ಸಂಬಂಧಿಸಿ ಸುಪ್ರೀಮ್ ಕೋರ್ಟಿನಲ್ಲಿ ದಾಖಲಾಗಿರುವ ಕೇಸುಗಳ ವಿಚಾರಣೆ ವಿಳಂಬವಾಗುತ್ತಿದೆ; ಇದು ಹಿಂಸಾಚಾರದ ಬಗ್ಗೆ ನ್ಯಾಯಾಲಯ ತೋರುತ್ತಿರುವ ಉಪೇಕ್ಷೆಯಾಗಿದ್ದು, ಅದಕ್ಕೆ ನೊಂದವರಿಗೆ ನ್ಯಾಯನೀಡುವ ಉಮೇದಿಲ್ಲ ಎನ್ನುವುದನ್ನು ಸೂಚಿಸುತ್ತದೆ" ಎಂದು ಹೇಳಿದರು. ಅದಕ್ಕೆ ಸುಪ್ರೀಮ್‌ಕೋರ್ಟಿನ ನ್ಯಾಯಾಧೀಶರು, ತೀಸ್ತಾ



ನ್ಯಾಯವ್ಯವಸ್ಥೆಯ ಬಗ್ಗೆ ಉದ್ಧಟವಾಗಿ ಮಾತನಾಡುತ್ತಿದ್ದಾರೆಂದೂ, ಅವರ ಮೇಲೆ ನ್ಯಾಯಾಂಗನಿಂದನೆಯ ಅಪವಾದ ಹೊರಿಸಬೇಕಾದೀತೆಂದೂ ಎಚ್ಚರಿಸಿದರು. ಇದರಿಂದ ಬಲಪಂಥೀಯರು ಹಿಗ್ಗಿದ್ದರಲ್ಲಿ ವಿಶೇಷವೇನೂ ಇಲ್ಲ, ಆದರೆ ತೀಸ್ತಾರ ಕಾರ್ಯಚಟುವಟಿಕೆಗಳ ಬಗ್ಗೆ ಸಹಾನುಭೂತಿಯುಳ್ಳವರೂ 'ಈಕೆ ಅತಿಯಾಗಿ ಆಡುತ್ತಾಳೆ' ಎಂದು ಗೊಣಗಿದರು. ಈ ವಿದ್ಯಮಾನಗಳನ್ನು ಕುರಿತು ಖ್ಯಾತ ಚಿಂತಕ ಶಿವ್ ವಿಶ್ವನಾಥನ್ ಒಂದು ಲೇಖನ ಬರೆದರು ('ದಿ ವ್ಯಾಲ್ಯು ಆಫ್ ರ್‍ಯಾಂಟ್ ಅಂಡ್ ರೇವ್', ಇಂಡಿಯನ್ ಎಕ್ಸ್‌ಪ್ರೆಸ್, ಮಾರ್ಚ್ 7,2008). ಆ ಲೇಖನದಲ್ಲಿ ಶಿವ್ ಹೇಳುವ ಮಹತ್ವಪೂರ್ಣ ಮಾತುಗಳು ಹೀಗಿವೆ:


(ತೀಸ್ತಾ) ಹಿಂಸೆಗೆ ತುತ್ತಾದವರ ಪರವಾಗಿ ದೊಡ್ಡ... [illegible] ಎನ್ನುವುದು ಅವರ ಬಗೆಗಿನ ... ತಕರಾರು. ಆದರೆ ಏನು ಮಾಡುವುದು, ನಮ್ಮ ಸಮಾಜದ ಸಭ್ಯರು ಗುಜರಾತಿನ ಹಿಂಸೆಯ ಬಗ್ಗೆ ದಿವ್ಯಮೌನ ತಾಳಿರುವಾಗ, ಈ ಬಗೆಯ ಚೀರಾಟವೇ ತಕ್ಕ ಉತ್ತರವಾಗಿದೆ. ತೀಸ್ತಾ ಮಾಡುವ ಗದ್ದಲ ನಮಗೆ ತೀರ ಅಹಿತವಾಗಬಹುದು ಆದರೆ ಅದು ನೊಂದವರನ್ನು ದಮನಿಸಿಕೊಂಡು ಅದರ ... [illegible] ...ನೊಂದವರ ನೋವು ... [illegible] ... ಚುಚ್ಚುವ ಅಧಿಕೃತ ಸಂತಾಪಸೂಚಕಿಯ ಹಾಗೆ ತೀಸ್ತಾ ಆಡುತ್ತಾರೆ, ಪದೆ ಪದೆ ಅದನ್ನೇ ಎತ್ತಿ ಆಡಿ ರಂಪ–ರಗಳೆ ಮಾಡುತ್ತಾರೆ, ಇದರಿಂದ ನಮಗೆ ತುಂಬಾ ಕಿರಿಕಿರಿಯಾಗುತ್ತದೆ– ಇದೆಲ್ಲ ಸರಿ. ಹಾಗಂತ, ಮುಚ್ಚಿಟ್ಟ ಸತ್ಯಗಳನ್ನು ಜಗಜ್ಜಾಹೀರಪಡಿಸುವವರ ಮಾತುಗಳು ಸಂಗೀತದಷ್ಟು ಸುಶ್ರಾವ್ಯವಾಗಿರುವುದಿಲ್ಲ ಎಂಬ ಅರಿವು ನಮಗೆ ಇರಬೇಡವೇ!.....ತಮ್ಮ ಕಣ್ಣೆದುರೇ ನಡೆಯುತ್ತಿರುವ ಹಿಂಸೆಯನ್ನು ದೇಶಾವರಿ ಎಂದು ಉಪೇಕ್ಷಿಸುವ ಜನರಿಂದ ತುಂಬಿರುವ ನಮ್ಮ ಸಮಾಜವು ತೀಸ್ತಾರಂತಹವರ ಅತಿರೇಕದ ವರ್ತನೆಗೆ ಸದಾ ಋಣಿಯಾಗಿರಬೇಕು. ನಾವು ಮರೆತುಬಿಟ್ಟಿರುವ ಆದರ್ಶಗಳನ್ನು ನಮಗೆ ನೆನಪಿಸುವ ಸಲುವಾಗಿ ತೀಸ್ತಾ ಸೆಟ್ಲ್‌ವಾಡ್ ಹಗಲು–ರಾತ್ರಿ ಮೈಮುರಿದು ದುಡಿಯಬೇಕಾಗಿದೆ. ...... ತೀಸ್ತಾ, ಮೇಧಾ ಪಾಟ್ಕರ್‌ರಂತಹವರು, ಸಂಗೀತದಲ್ಲಿ ಅಪಶ್ರುತಿ ಹೊರಡದ ಹಾಗೆ ನಿಯಂತ್ರಿಸುವ ಶೃತಿಪೆಟ್ಟಿಗೆಗಳು; ಅವರಿಂದಾಗಿ ನಮ್ಮ ಸಮಾಜಕ್ಕೆ ಜೀವಕಳೆ ಬಂದಿದೆ..... ಸಮಾಜವು ನ್ಯಾಯಾಲಯಗಳ ಘನತೆ–ಗೌರವಗಳನ್ನು ಮನ್ನಿಸಬೇಕು, ಹಾಗೆಯೇ ತೀಸ್ತಾರ ಪ್ರತಿಭಟನೆಗೂ ಅವಕಾಶ ಮಾಡಿಕೊಡಬೇಕು. ಎಲ್ಲಕ್ಕಿಂತ ಮಿಗಿಲಾಗಿ, ತೀಸ್ತಾರಂತಹ ಜನರನ್ನು ನಮ್ಮ ಸಮಾಜವು ಅನರ್ಘ್ಯ ಜೀವ ಪ್ರಭೇದವೆಂಬತೆ ಗೌರವಿಸಿ, ಪೋಷಿಸಬೇಕು. ●

ಕೋಮುಹಿಂಸೆಯನ್ನು ವರದಿ ಮಾಡುವಾಗ 'ಮೊದಲ ಕಲ್ಲನ್ನು ...ದ್ದು ಯಾರು?' ಎಂಬುದರ ಬಗ್ಗೆ ಸತ್ಯಾಂಶವನ್ನು ಹೇಳುವುದು ಬಹಳ ... ಈ ಮಾತು ತಮಗೆ ಬಾಲಿಶ ಅನ್ನಿಸುತ್ತಿರಬಹುದು. ಆದರೆ ಇದು ... ಮಹತ್ವವುಳ್ಳ ವಿಷಯ, ನನ್ನ ಬದುಕಿನ ಪಥವನ್ನೇ ಬದಲಿಸಿದ ...2-93ರ ಮುಂಬೈ ಗಲಭೆಗಳ ಉದಾಹರಣೆ ಕೊಡುತ್ತೇನೆ. ಬಾಬ್ರಿ ...ದಿ ನಾಶವಾದ ದಿನವೇ ಶಿವಸೇನೆ ಮತ್ತು ...ಪರಿವಾರದ ಸಂಘಟನೆಗಳು ವಿಜಯೋತ್ಸವ ...ಸುವ ಮೆರವಣಿಗೆಗಳನ್ನು ನಡೆಸಿದವು. ಮರುದಿನ ...ಸ್ಲಮರು ಅಸಂಘಟಿತವಾಗಿ ಬಾಬ್ರಿ ಮಸೀದಿ ...ಪ ವಿರುದ್ಧ ಪ್ರತಿಭಟನೆ ನಡೆಸಿದರು. ಈ ಎರಡು ...ಗಳ ದಿನಾಂಕ, ಸಮಯವನ್ನು ಪತ್ರಿಕೆಗಳು ವರದಿ ...ಡಿದವು. ಆದರೆ ಮುಸಲ್ಮಾನರು ತಮ್ಮ ...ಟನೆಯ ವೇಳೆ ಹಿಂದೂಗಳ ಮೇಲೆ ಗುಂಪು ... ನಡೆಸಿದ ಕಾರಣವಾಗಿ ಗಲಭೆ ಶುರುವಾಯಿತು ...ವಾದವನ್ನು ಗಲಭೆಯ ವರದಿಯ ಮಂತ್ರ ...ಕೊಂಡವು. ಹಿಂದೂತ್ವ ಸಂಘಟನೆಗಳ ...ಯೋತ್ಸವದ ವೇಳೆ ಏನಾಯಿತು? ಮುಸಲ್ಮಾನರ ...ಲೆ ದಾಳಿ ನಡೆಯಿತೋ? ಎಲ್ಲಿ, ಯಾವ ಸಮಯಕ್ಕೆ ನಡೆಯಿತು? ಎಂಬ ...ಗಳನ್ನೆಲ್ಲ ಮುಚ್ಚಿಟ್ಟು, ವಿಜಯೋತ್ಸವದ ವೇಳೆ ನಡೆದ ಹಿಂಸಾ ಘಟನೆಗಳಿಗೆ ...ದಿನ ಮುಸಲ್ಮಾನರ ಪ್ರತಿಭಟನೆ ವೇಳೆ ನಡೆದ ಹಿಂಸೆಯೇ ಕಾರಣ ...ಸಿದ್ಧಾಂತ ಗಲಭೆಯುದ್ದಕ್ಕೂ ವಿಜೃಂಭಿಸಿತು! ಹಿಂದೂಗಳು ತಮ್ಮ ...ಲೆ ನಡೆದ ಹಿಂಸೆಗೆ ಪ್ರತಿಕ್ರಿಯೆಯಾಗಿ ಹಿಂಸಾಚಾರದಲ್ಲಿ ತೊಡಗಿದರು ...ಎಂದು ಜನರನ್ನು ನಂಬಿಸುವ ಉದ್ದೇಶವಿದು. ಆಕ್ರಮಣಕಾರರನ್ನು ಹಿಂಸೆಗೆ ...ಬಲಿಪಶುಗಳಂತೆ ಬಿಂಬಿಸಿ, ಜನರನ್ನು ಉದ್ರೇಕಿಸುವುದು ಕೋಮುವಾದಿ ...ಸಂಘಟನೆಗಳ ಮುಖ್ಯ ಕಾರ್ಯತಂತ್ರ– ಭಾರತದಲ್ಲಿ ಹಿಂದೂತ್ವವಾದಿ ...ಸಂಘಟನೆಗಳು, ಬಾಂಗ್ಲಾದೇಶದಲ್ಲಿ ಜಮಾತ್–ಎ–ಇಸ್ಲಾಮಿ ಹಾಗು ಪಾಕಿಸ್ತಾನದ ...ಕೋಮುವಾದಿ ಸಂಘಟನೆಗಳ ನೆಚ್ಚಿನ ಕಾರ್ಯತಂತ್ರವಿದು. ಆದರೆ, ...ಕಾರ್ಯತಂತ್ರವನ್ನು ಪತ್ರಿಕೆಗಳು ಎಗ್ಗಿಲ್ಲದೆ ಪೋಷಿಸುವುದರ ಅರ್ಥವೇನು? ...ಮುಖ್ಯವಾಹಿನಿಯ ಪತ್ರಿಕೆಗಳ ಈ ವರಸೆ ಇಂದಿನದಲ್ಲ, 1960ರಲ್ಲಿ ...ಪುರದಲ್ಲಿ ನಡೆದ ಗಲಭೆ, ವಿಭಜನೆಯ ನಂತರ ಭಾರತದಲ್ಲಿ ನಡೆದ ...ದೊಡ್ಡ ಕೋಮುಗಲಭೆ. ಅಂದು ಇದ್ದ ಎಲ್ಲ ಮುಖ್ಯ ಪತ್ರಿಕೆಗಳೂ, ...ಹುಡುಗಿಯೊಬ್ಬಳನ್ನು ಮುಸಲ್ಮಾನ ಯುವಕನೊಬ್ಬ ಅಪಹರಿಸಿಕೊಂಡು ...ಹೋಗಿರುವುದೇ ಗಲಭೆಗೆ ಕಾರಣ ಎಂದು ವರದಿ ಮಾಡಿದವು. ಗಲಭೆ ...ವಾಗಿ ಒಂದು ವಾರಗಳ ಕಾಲ ಮುಂದುವರೆಯಿತು. ಅಷ್ಟೂ ದಿನವೂ ...ಗಿ ಇನ್ನೂ ಪತ್ತೆಯಾಗಿಲ್ಲ ಎಂದೇ ಪತ್ರಿಕೆಗಳು ವರದಿ ಮಾಡುತ್ತಿದ್ದವು. ಶ್ರೀ ಎಸ್.ಬಿ.ಕೋಳ್ಪೆಯವರು 'ಫ್ರೀ ಪ್ರೆಸ್ ಜರ್ನಲ್'ನ ಮುಂಬೈ ...ವರದಿಗಾರರಾಗಿದ್ದರು. ಅವರಿಗೆ ಇದು ವಿಚಿತ್ರವಾಗಿ ಕಂಡು, ಖುದ್ದಾಗಿ ...ನೋಡಲು ಜಬಲ್ಪುರಕ್ಕೆ ಹೋಗಿ ಮೊದಲಾಗಿ ಜಿಲ್ಲೆಯ ಎಸ್.ಪಿ.ಯವರನ್ನು ...ಸತ್ಯಾಂಶವೇನು ಎಂದು ವಿಚಾರಿಸಿದರು. ಸತ್ಯ ತುಂಬ ಸರಳವಾಗಿತ್ತು, ...ಹುಡುಗ ಹುಡುಗಿ ಪ್ರೀತಿಸಿ ಮದುವೆಯಾಗಿದ್ದಾರೆ. ಇಂತಲ್ಲಿ ಸಂಸಾರ ...ಹೂಡಿದ್ದಾರೆ. ಹೋಗಿ ನೀವೇ ಮಾತನಾಡಿಸಿ' ಎಂದು ಹೇಳಿದರು. ...ಕೋಳ್ಪೆಯವರು ಆ ಹುಡುಗ–ಹುಡುಗಿಯನ್ನು ಕಂಡು ಮಾತನಾಡಿಸಿ ಅಂದೇ ...ವರದಿ ಕಳಿಸಿದರು. ಮರುದಿನ 'ಫ್ರೀ ಪ್ರೆಸ್ ಜರ್ನಲ್'ನಲ್ಲಿ ಕೋಳ್ಪೆಯವರ ...ಪ್ರಕಟವಾದದ್ದೇ ಗಲಭೆ ನಿಂತುಹೋಯಿತು. ಕೋಳ್ಪೆಯವರು ನಂತರ ...'ಐಎಎಸ್/ಐಪಿಎಸ್' ಸೇರಿ ನಿವೃತ್ತರಾದರು.



ಅವರ ನಿವೃತ್ತಿಯ ನಂತರ 1993ರಲ್ಲಿ ನಾನು ಅವರನ್ನು ಭೇಟಿಯಾದಾಗ, ಈ ಎಲ್ಲ ವಿವರಗಳ ಜೊತೆ ಮತ್ತೊಂದು ಸ್ವಾರಸ್ಯಕರ ಸಂಗತಿಯನ್ನು ಹೇಳಿದರು. ಅದೇನೆಂದರೆ, ಗಲಭೆ ನಿಂತ ಮರುದಿನ ಭಾರತದ ಪ್ರಧಾನಿಯಾಗಿದ್ದ ನೆಹರು ಅವರಿಂದ ಖುದ್ದಾಗಿ ಕೋಳ್ಪೆಯವರಿಗೆ 'ಗಲಭೆಯನ್ನು ನಿಲ್ಲಿಸಿದ್ದಕ್ಕೆ ನಾನು ತಮಗೆ ಋಣಿ' ಎಂಬ ಟೆಲಿಗ್ರಾಮ್ ಬಂದಿತಂತೆ! ಇದನ್ನೆಲ್ಲ ನಾನು ವೈಯಕ್ತಿಕ ಸಾಹಸ ಪ್ರವೃತ್ತಿ, ಎದೆಗಾರಿಕೆಗಳ ಹೆಚ್ಚುಗಾರಿಕೆ ತೋರಿಸಲು ಹೇಳುತ್ತಿಲ್ಲ. ಪತ್ರಕರ್ತರು ಪ್ರಾಮಾಣಿಕವಾಗಿ 'ಮೊದಲು ಕಲ್ಲೆಸೆದವರು ಯಾರು' ಎಂದು ವರದಿ ಮಾಡಿದರೂ ಸಾಕು, ಅದು ಕೋಮುಹಿಂಸೆಗಳನ್ನು ತಡೆಯಲು ಪೂರಕವಾಗುತ್ತದೆ.


■ ಕೋಮುವಾದಕ್ಕೂ, ಜಾಗತೀಕರಣಕ್ಕೂ ಇರುವ ನಂಟು ಎಂಥದ್ದೆಂಬುದನ್ನು ನಾವು ಗುಜರಾತಿನ ಹಿಂಸಾಚಾರದ ಸಮ್ಮುಖ ಕಾಣಬಹುದು. ಭಾರತದ ಅತಿ ಶ್ರೀಮಂತ ಕೈಗಾರಿಕೋದ್ಯಮಿಗಳು– ಟಾಟಾ, ಅಂಬಾನಿ– ನರೇಂದ್ರ ಮೋದಿಯನ್ನು ಮಾದರಿ ಆಡಳಿತಗಾರನೆಂದು ಹೊಗಳಿದ್ದಾರೆ. ತಮ್ಮ ಬಂಡವಾಳವನ್ನು ಆತನ ನಾಯಕತ್ವದ ಗುಜರಾತಿನಲ್ಲಿ ಹೂಡಲು ನಾಮುಂದು ತಾಮುಂದು ಎಂದು ನಿಂತಿದ್ದಾರೆ. ಯಾರ ನಾಯಕತ್ವದಲ್ಲಿ ಭಯಾನಕ ಕೋಮು ಹತ್ಯಾಕಾಂಡ ನಡೆಯಿತೋ, ಆಂಥ ಮುಖ್ಯಮಂತ್ರಿ ಇವರ ಕಣ್ಮಣಿ! ನಮ್ಮ ಮಾಧ್ಯಮಗಳಿಗೆ ಇದು ಅಸಹ್ಯವೆನಿಸುತ್ತಿಲ್ಲ; ಇದನ್ನು ಒಂದು ಸಾರ್ವಜನಿಕ ಚರ್ಚೆಯಾಗಿ ಮಾಡುವ ಸಂಕಲ್ಪವನ್ನು ಭಾರತದ ಮುಖ್ಯವಾಹಿನಿಯ ಪತ್ರಿಕೆಗಳು ತೋರುತ್ತಿಲ್ಲ. ಕಳೆದ ಲೋಕಸಭೆ ಚುನಾವಣೆಯ ವೇಳೆ ಮೋದಿ ಪ್ರಧಾನಮಂತ್ರಿ ಹುದ್ದೆಗೆ ಅರ್ಹನಾದ ನಾಯಕ ಎಂದು ಮಾಧ್ಯಮಗಳು ಪ್ರಚಾರ ಮಾಡಿದವಲ್ಲ, ಯಾಕೆ ಭಾರತದ ಬೇರೆ ಯಾವ ಮುಖ್ಯಮಂತ್ರಿಯೂ ರಾಷ್ಟ್ರೀಯ ನಾಯಕತ್ವ ವಹಿಸಿಕೊಳ್ಳುವ ಅರ್ಹತೆ ಪಡೆದಿರಲಿಲ್ಲವೇ? ಗುಜರಾತಿನ ಹಿಂಸಾಕಾಂಡವನ್ನು ಸಮರ್ಥಿಸಿಕೊಂಡವನು ದೇಶದ ನಾಯಕತ್ವ ವಹಿಸಿಕೊಳ್ಳುವುದು ನಾಚಿಕೆಗೇಡಿನ ವಿಷಯ ಎಂದು ನಮ್ಮ ಮಾಧ್ಯಮಗಳಿಗೆ ಅನ್ನಿಸಬೇಕಿತ್ತು, ಅಂಥ ಪ್ರಚಾರವನ್ನು ಮಾಧ್ಯಮಗಳು ಪ್ರಶ್ನಿಸಬೇಕಿತ್ತು, ಆದರೆ ಮಾಧ್ಯಮಗಳು ಮೋದಿಯ ಉಮೇದುವಾರಿಕೆಯನ್ನು ರೋಚಕ ಬೆಳವಣಿಗೆ ಎಂಬಂತೆ ಎತ್ತಿಹಿಡಿದವು.




■ ಕೋಮುಹಿಂಸೆಯಲ್ಲಿ ಪಾಲ್ಗೊಂಡ ಪಾತಕಿಗಳನ್ನು ಕಾನೂನುರೀತ್ಯಾ ಕಟಕಟೆಗೆ ತಂದು ನಿಲ್ಲಿಸಿ, ಸೂಕ್ತ ಸಾಕ್ಷ್ಯಾಧಾರಗಳ ಮೂಲಕ ಶಿಕ್ಷೆಗೆ ಒಳಪಡಿಸುವಲ್ಲಿ ಭಾರತದ ಕಾನೂನು ಹಾಗು ನ್ಯಾಯವ್ಯವಸ್ಥೆಗಳು ವಿಫಲವಾಗಿರುವ ಪರಿಯೇ ಒಂದು ದುರಂತ ಕಥನವಾಗಿದೆ. ನಮ್ಮ ಐಎಎಸ್–ಐಪಿಎಸ್ ಅಧಿಕಾರಿಗಳು ಸಹ ಕೋಮುಹಿಂಸೆಯ ಕೇಸುಗಳನ್ನು ದುರ್ಬಲಗೊಳಿಸಿ, ನ್ಯಾಯಾಲಯದಲ್ಲಿ ಪಾತಕಿಗಳ ಅಪರಾಧ ಸಾಬೀತಾಗದಂತೆ ನೋಡಿಕೊಳ್ಳುವ ತಂತ್ರದಲ್ಲಿ ಪಳಗಿಬಿಟ್ಟಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಡೆದಿರುವ ಐದು ಪ್ರಮುಖ ಗಲಭೆಗಳ ವಿಚಾರಣೆ ನಡೆಸಿದ ಆಯೋಗಗಳು ಸತ್ಯನಿಷ್ಠವಾದ ವರದಿಯನ್ನು ನೀಡಿವೆ; ಅವು– (1969ರ ಅಹ್ಮದಾಬಾದ್ ಗಲಭೆ) ಜಗ ಮೋಹನ್ ರೆಡ್ಡಿ ವರದಿ, (1970ರ ಭಿವಂಡಿ ಗಲಭೆ) ಟಿ.ಪಿ.ಮದನ್ ವರದಿ, (1971ರ ತಲ್ಲಿಚೇರಿ ಗಲಭೆ) ಜೋಸೆಫ್ ವಿದ್ಯಾರ್ಥಿ ವರದಿ, (1982ರ ಕನ್ಯಾಕುಮಾರಿ ಗಲಭೆ) ವೇಣುಗೋಪಾಲ್ ವರದಿ, (1992–93ರ ಮುಂಬೈ ಗಲಭೆ) ಶ್ರೀಕೃಷ್ಣ ಸಮಿತಿಯ ವರದಿ. ಆದರೆ ಗಲಭೆಯ ಪಾತಕಿಗಳಿಗೆ ಯಾವ ಶಿಕ್ಷೆಯೂ ಆಗಿಲ್ಲ, ತೆಹೆಲ್ಕಾ ಪತ್ರಿಕೆ ನಡೆಸಿದ ನಾಟಕೀಯ ಕಾರ್ಯಾಚರಣೆಯ ಫಲವಾಗಿ ಎಂಥ ಆಘಾತಕಾರಿ ಸಂಗತಿಗಳು ಬಯಲಾದವು! ಪಾತಕಿಗಳು ತಮ್ಮ ಕೃತ್ಯಗಳನ್ನು ಕೊಚ್ಚಿಕೊಂಡರು, ನರೇಂದ್ರ ಮೋದಿ ಖುದ್ದಾಗಿ ಪಾತಕಿಗಳಿಗೆ ಶಹಭಾಷ್‌ಗಿರಿ ನೀಡಿದ್ದು ಜಾಹೀರಾಯಿತು, ಗುಜರಾತ್ ಸರಕಾರದ ಮುಖ್ಯ ಕಾರ್ಯದರ್ಶಿ ಕಾನೂನನ್ನು ತನ್ನ ಕಿಸೆಯಲ್ಲಿಟ್ಟುಕೊಂಡಿರುವುದನ್ನು ದಾರ್ಷ್ಟ್ಯದಿಂದ ಹೇಳಿದ; ಆದರೆ ಭಾರತದ ಯಾವ ಹಂತದ ನ್ಯಾಯಾಲಯವೂ ಸ್ವಂತದ ನ್ಯಾಯಾಸಕ್ತಿಯಿಂದ (ಸುವೋ–ಮೋಟೊ) ಇವರುಗಳನ್ನು ಕಟಕಟೆಗೆ ಎಳೆಯಲಿಲ್ಲ.

■ ನಮ್ಮ ನ್ಯಾಯವ್ಯವಸ್ಥೆಯ ಈ ವೈಖರಿಯಿಂದ ನಾವೂ ಪಾಠ ಕಲಿಯಬೇಕಿದೆ. ಸಾಕ್ಷಿಗಳಿಲ್ಲ ಎಂಬ ಕಾರಣಕ್ಕೆ ಅನಾಮತ್ತಾಗಿ ಪಾತಕಿಗಳನ್ನು ಖುಲಾಸೆ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ 'ಸೆಂಟರ್ ಫಾರ್ ಪೀಸ್ ಅಂಡ್ ಜಸ್ಟಿಸ್'ನ ನಾವುಗಳು ಗುಜರಾತ್ ಹಿಂಸಾಕಾಂಡದ ಐದು ಪ್ರಮುಖ ಕೇಸುಗಳ ಸಾಕ್ಷ್ಯಾಧಾರಗಳನ್ನು ಕಣ್ಣಿಗೆ ಎಣ್ಣೆ ಹಾಕಿಕೊಂಡು ಕಲೆ ಹಾಕಿದ್ದೇವೆ; ದೂರು ದಾಖಲಿಸಿಕೊಳ್ಳಲು ಗುಜರಾತ್ ಪೊಲೀಸರು ಕುಂಟುನೆಪ ಒಡ್ಡಿದಾಗಲೆಲ್ಲ ಸುಪ್ರೀಂ ಕೋರ್ಟಿನ ಕದತಟ್ಟಿ, ಅಪ್ಪಣೆ ಕೊಡಿಸಿ, ಕೇಸು ದಾಖಲಾಗುವ ಹಾಗೆ ಒದ್ದಾಡಿದ್ದೇವೆ. ಇದರ ಫಲವಾಗಿ, ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ, ನ್ಯಾಯಾಲಯವೂ ರಾಜ್ಯ ಸರಕಾರಕ್ಕೆ ಛೀಮಾರಿ ಹಾಕಿ ಕೇಸುಗಳ ಮರುವಿಚಾರಣೆಗೆ ವಿಶೇಷ ತನಿಖಾ ದಳವನ್ನು ನೇಮಿಸಿದೆ. ಸದರಿ ತನಿಖಾ ದಳದ ವಿಚಾರಣೆಯನ್ನೂ ಚಾಚೂತಪ್ಪದೇ ಗಮನಿಸಿ, ಅಗತ್ಯ ಬಿದ್ದಾಗಲೆಲ್ಲಾ ಮಧ್ಯಪ್ರವೇಶಿಸಿ, ಮಾಯಾ ಕೊಡ್ನಾನಿ (ಮೋದಿ ಸರಕಾರದಲ್ಲಿ ಮಹಿಳಾ ಕಲ್ಯಾಣ ಮಂತ್ರಿಯಾಗಿದ್ದಾಕೆ; ಈಕೆ ನರೋದಪಾಟಿಯದ ಭೀಕರ ಹಿಂಸಾಚಾರದ ನಾಯಕತ್ವ ವಹಿಸಿದ್ದಳು ಎಂಬ ಆರೋಪ ಹೊತ್ತಿದ್ದಾಳೆ) ಮತ್ತು ಜೈದೀಪ್ ಪಟೇಲ್ (ಗುಜರಾತ್ ವಿ.ಹಿಂ.ಪ. ನಾಯಕ) ಅವರುಗಳ ಮೇಲೆ ಆರೋಪಪಟ್ಟಿ ದಾಖಲಾಗುವಂತೆ ಮಾಡಲು ಯಶಸ್ವಿಯಾಗಿದ್ದೇವೆ. ಇನ್ನೂ ಇದು ಅರ್ಧ ದಾರಿ; ಈ ಕೇಸುಗಳ ಫಲಿತಾಂಶ ಕೋಮುವಾದ ವಿರೋಧಿ ಚಳವಳಿಗಾರರಿಗೂ, ಭಾರತದ ನ್ಯಾಯವ್ಯವಸ್ಥೆಗೂ ಅಗ್ನಿಪರೀಕ್ಷೆಯಾಗಿದೆ ... ಭಾರತದ ನ್ಯಾಯ ಹಾಗು ಕಾನೂನು ವ್ಯವಸ್ಥೆಯ ... [illegible] ನಿರ್ಣಾಯಕ ಹೋರಾಟವಾಗಿದೆ. ●

ಮೆಣಸಿನಕಾಯಿಯ ಕ್ಯಾಚು ಉಳ್ಳಾಗಡ್ಡಿ ಕೈಯಲ್ಲಿ!



"ಇಂಗ್ಲಿಷ್ ಕೌಂಟಿ ಚಾಂಪಿಯನ್‌ಶಿಪ್‌ನ ಪಂದ್ಯವೊಂದರಲ್ಲಿ ಸ್ಕೋರ್‌ಬೋರ್ಡ್‌ನಲ್ಲಿ ಕಂಡಿದ್ದು: "mustard caught, pickles bowled, onions 13." ಇಂತಹ 'ರುಚಿಕರ' ಹೆಸರುಗಳನ್ನು ಬ್ರಿಟಿಷರು ಮತ್ತು ಪಾರ್ಸಿಗಳಲ್ಲಿ ಮಾತ್ರ ಕಾಣಬಹುದು ಎಂದು ವಿನೋದ್ ಮೆಹ್ತಾ ಬರೆದಿದ್ದರು. ಅದಕ್ಕಿಂತಲೂ ರುಚಿಕರವಾದ, ಖಾರವಾದ ಹೆಸರುಗಳು ಉತ್ತರ ಕರ್ನಾಟಕದಲ್ಲಿ ಸಾಮಾನ್ಯ. ಈಗ ಕೆಪಿಎಲ್ ಟ್ವೆಂಟಿ-20 ಪಂದ್ಯಾವಳಿ ಶುರುವಾಗಿದೆ.



ಬೆಳಗಾವಿ, ದಾವಣಗೆರೆ ತಂಡಗಳ ನಡುವಿನ ಪಂದ್ಯದಲ್ಲಿ ಸ್ಕೋರ್‌ಬೋರ್ಡ್ ಹೀಗೂ ಇರಬುಹುದು:

* ಮೆಣಸಿನಕಾಯಿ ಕಾಟ್ ಉಳ್ಳಾಗಡ್ಡಿ ಬೌಲ್ಡ್ ಉಪ್ಪಿನ 29...

* ಸಕ್ಕರಿ ಕಾಟ್ ಬೆಲ್ಲದ ಬೌಲ್ಡ್ ಅಕ್ಕಿ 45

ಕಾಮೆಂಟರಿ ಹೀಗೂ ಇರಬಹುದು:

ಉಳ್ಳಾಗಡ್ಡಿ ಎಸೆದ ಇನ್‌ಸ್ವಿಂಗ್ ಎಸೆತವನ್ನು ಮೆಣಸಿನಕಾಯಿ ಬೌಂಡರಿಯತ್ತ ಹೊಡೆದಿದ್ದಾರೆ. ಬೌಂಡರಿ ಬಳಿ ಜೋಳದ ಡೈವ್ ಹೊಡೆದು ಚೆಂಡನ್ನು ತಡೆದಿದ್ದಾರೆ.....

ಜೈ ಶ್ರೀರಾಮಗೆ ಓಂ ನಮ ಶಿವಾಯ!

ಹುಬ್ಬಳ್ಳಿಯಲ್ಲಿ ಆರ್‌ಎಸ್‌ಎಸ್‌ನ ಒಬ್ಬ ವೃದ್ಧರು. ಅವರು ಫೋನ್ ಎತ್ತಿದರೆ 'ಹಲೋ' ಹೇಳುವುದಿಲ್ಲ, 'ಜೈ ಶ್ರೀರಾಮ್' ಎನ್ನುತ್ತಾರೆ. ಅವರ ಮೊಮ್ಮಗನ ಗೆಳೆಯರು ಆ ವೃದ್ಧರ ಮನೆಗೆ ಫೋನಾಯಿಸುತ್ತಾರೆ. ಆ ಕಡೆಯಿಂದ 'ಜೈ ಶ್ರೀರಾಮ್' ಕೇಳುತ್ತದೆ. ಇವರು 'ಓಂ ನಮಃ ಶಿವಾಯ' ಎಂದು ಫೋನ್ ಕಟ್ ಮಾಡುತ್ತಾರೆ.

ಕುದುರಿಗೆ ಆನೆಯ ಫೋನ್!

ಧಾರವಾಡದ ಕಾಲೇಜು ಅಧ್ಯಾಪಕರೊಬ್ಬರ ಸರ್‌ನೇಮ್ ಕುದುರಿ. ಫೋನ್ ಬಂದಾಗಲೆಲ್ಲ ಅವರು, 'ನಾ ಕುದುರಿ ಮಾತಾಡೋದು ಹೇಳ್ರಿ' ಎನ್ನುತ್ತಾರೆ. ಅತ್ತ ಕಡೆಯಿಂದ ಫೋನ್ ಮಾಡಿದ ಕಿಡಿಗೇಡಿ ಹುಡುಗರು 'ನಾ ಮೂರು ಸಾವಿರ ಮಠದ ಆನಿ ಮಾತಾಡೋದ್ರಿ' ಎಂದು ಮಜಾ ಮಾಡುತ್ತಾರೆ.

ಕಾಂಪಿಟೇಟಿವ್ ಪರೀಕ್ಷೆಯಲ್ಲೂ ಕೋಮುವಾದ?



ಕಳೆದ ವಾರ ರಾಷ್ಟ್ರೋತ್ಥಾನ ಪರಿಷತ್ ಪ್ರಕಟಿಸಿರುವ ಕೋಮುವಾದಿ ಪುಸ್ತಕಗಳನ್ನು ಶಾಲಾಮಕ್ಕಳ ಮೇಲೆ ಹೇರುವ ಬಿಜೆಪಿಯ ಹುನ್ನಾರದ ಕುರಿತು ಬರೆದಿದ್ದೆವು. ಹಂತ ಹಂತವಾಗಿ ಸಂಘ ಪರಿವಾರದ ಹಿಡನ್ ಅಜೆಂಡಾಗಳನ್ನು ಮೆಲ್ಲಮೆಲ್ಲಗೆ ರಾಜ್ಯ ಸರ್ಕಾರ ಜಾರಿಗೆ ತರುತ್ತಿದೆ.

ಹಿಂದೆ ಉತ್ತರ ಪ್ರದೇಶದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಪಠ್ಯಪುಸ್ತಕಗಳ ಕೇಸರೀಕರಣ ಮಾಡಲಾಗಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಕಿಂಚಿತ್ತೂ ಪಾಲ್ಗೊಳ್ಳದ ಹೆಡಗೆವಾರ್, ಗೋಳ್ವಾಲ್ಕರ್‌ಗಳನ್ನು ರಾಷ್ಟ್ರನಾಯಕರಂತೆ ಚಿತ್ರಿಸಲಾಗಿತ್ತು. "ಬಾಬ್ರಿ ಮಸೀದಿಯನ್ನು ಕೆಡವಲು 60 ಕರಸೇವಕರಿಗೆ 2 ದಿನ ಸಾಕಾದರೆ 120 ಕರಸೇವಕರಿಗೆ ಎಷ್ಟು ದಿನ ಬೇಕು?" ಎಂಬಂತಹ ಪ್ರಶ್ನೆಗಳ ಮೂಲಕ ಪ್ರಶ್ನೆಪತ್ರಿಕೆಗಳಲ್ಲೂ ತನ್ನ ದುರ್ಬುದ್ಧಿ ತೋರಿತ್ತು.

ಎರಡು ವರ್ಷಗಳ ಹಿಂದೆ ರಾಜ್ಯದ ಅಬಕಾರಿ ನಿರೀಕ್ಷಕರ ಪರೀಕ್ಷೆಯಲ್ಲಿ ಅಂತಹ ಒಂದೆರಡು ಪ್ರಶ್ನೆಗಳನ್ನು ತುರುಕಲಾಗಿತ್ತು. 'ಡಿಸೆಂಬರ್ 25 ರಂದು ಜನಿಸಿ 'ಭಾರತದ ಪ್ರಧಾನಿಯಾದವರು ಯಾರು? ಎಂಬ ಮೂರ್ಖಾತಿಮೂರ್ಖ ಪ್ರಶ್ನೆ ಕೇಳಲಾಗಿತ್ತು. ಎಲ್ಲ ಪ್ರಧಾನಿಗಳ ಹುಟ್ಟಿದ ದಿನಗಳನ್ನು ಯಾವನು ನೆನಪಲ್ಲಿಟ್ಟುಕೊಳ್ಳುತ್ತಾನೆ? ಆದರೆ ಮೇಲಿನ ಪ್ರಶ್ನೆಗೆ ಆರ್.ಎಸ್.ಎಸ್., ಬಿಜೆಪಿಗಳ ಅಭ್ಯರ್ಥಿಗಳು ಮಾತ್ರ ಕರೆಕ್ಟಾಗಿ ಉತ್ತರ ಬರೆಯಲು ಸಾಧ್ಯವೇನೋ? ಏಕೆಂದರೆ ಡಿಸೆಂಬರ್ 25 ವಾಜಪೇಯಿ ಹುಟ್ಟಿದ ದಿನವೆಂಬುದು ಅಂತವರಿಗಷ್ಟೇ ಗೊತ್ತಿರಲು ಸಾಧ್ಯ. ಹಾಗೆಯೇ ಅದರಲ್ಲಿದ್ದ ಇನ್ನೊಂದು ಪ್ರಶ್ನೆ, 'ಗುರೂಜಿ ಹೆಸರಿನಿಂದ ಕರೆಯಲ್ಪಡುತ್ತಿದ್ದವರು ಯಾರು?' ಎಂಬುದು. ಇದು ಗೋಳ್ವಾಲ್ಕರನನ್ನು ರಾಷ್ಟ್ರನಾಯಕನನ್ನಾಗಿ ಮಾಡುವ ವ್ಯರ್ಥ ಪ್ರಯತ್ನವಾಗಿತ್ತಷ್ಟೇ.


ಎಬಿವಿಪಿ ಮೂಲದಿಂದ ಬಂದಿರುವ ಪ್ರಾಥಮಿಕ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ, ಉನ್ನತ ಶಿಕ್ಷಣ ಸಚಿವ ಆರವಿಂದ ಲಿಂಬಾವಳಿಗಳಲ್ಲೂ ಇಂತಹ ವಿಚಾರಗಳಿರುವುದು ಸಹಜವೇ ಆಗಿದೆ. ಸದ್ಯಕ್ಕೆ ಅವರು ಸಂಸ್ಕೃತ, ಸಂಸ್ಕೃತ ಎಂದು ಹಲುಬುತ್ತಿದ್ದಾರೆ. ●

ವ್ಯಾಯ್-ಕುಗಳು

ನಾರಾಯಣಗೌಡನ ಮಗ
ಸೇಬಿಗೆ ಆರೇಂಜ್
ಅನ್ನೋದೂ ಹೋರಾಟವಂತೆ!

* * * *

ಕಮ್ಯುನಿಸಂನಲ್ಲಿ ಗಾಢವಾಗಿ
ಮುಳುಗಿದ ನಮ್ಮೂರ್ಕಟ್ಟು, ಕುಂಕುಮದ
ನೀರಲ್ಲಿ ಜನಿವಾರ ತೊಯ್ಸಿ ತೊಟ್ಟರು.



[illegible] ಅಡು ರುಚಿ
ಗಂಗಾಜಲ ಕುಡಿಸಿದ ಶೆಟ್ಟಿ
ಹೌಸಿಂಗ್ ಬೋರ್ಡ್‌ಗೆ ನಾಮ
ಹಾಕಿದ

* * * *


ಹಿಡಿದು ಕೊಲ್ಲುವ
ಹೇಯ ಕೃತ್ಯಕ್ಕೆ
ಎನ್‌ಕೌಂಟರ್ ಹೆಸರು

-ಮು...

ಕೊಳಕು ಮನಸ್ಸಿನ ಕೆಡುಕು ಬುದ್ಧಿ

"ಪರಧರ್ಮದವರ 1000 ವರ್ಷಗಳ ದಬ್ಬಾಳಿಕೆಯ ಕಾಲದಲ್ಲಿ ರಾಜಾಶ್ರಯವಿಲ್ಲದೇ ಗುರುಕುಲ ಕ್ರಮವ... ನಾಶ ಹೊಂದಿತು. ಆದರೆ ಆಗಲೂ ಕೆಲವು ಮಟ್ಟಿಗಾದರೂ ಧರ್ಮ ಕಲಿತು ಅಭ್ಯಸಿಸಲಿಕ್ಕೆ ಮತ್ತೊಂದು ಹಿಂದೂ... ಕ್ರಮವು ಕೆಲಸ ಮಾಡುತ್ತಾ ಬಂತು. ಅದೇ ನಮ್ಮ ಜಾತಿ ಧರ್ಮದ ಕ್ರಮ. ಹಿಂದೂ ಧರ್ಮದ ಜಾತಿ ವಿಭಾಗಗಳು... ವಿಶ್ವವಿದ್ಯಾಲಯದ ಕ್ಲಾಸುಗಳಂತೆ ಬಹಳ ಅರ್ಥಗರ್ಭಿತವಾಗಿವೆ...."

ಹೀಗೆ ಜಾತಿವ್ಯವಸ್ಥೆಯನ್ನು ಸಮರ್ಥಿಸುತ್ತಾ ಸಾಗುತ್ತದೆ 'ದೇವರನ್ನು ನಂಬುವ' ಎಂಬ ಹಿಂದೂತ್ವದ ಅಮಲಿನ... ಪುಸ್ತಕದ ಮುನ್ನುಡಿ. 1972 ರಲ್ಲಿ ಇಂತಹ 'ಆರೆಸ್ಸೆಸ್ ಬುಕ್' ಬರೆದವರು ದಿವಂಗತ ಕೋಟಾ ವಾಸುದೇವ ಕಾರಂತ... ಎಂಬ ಕೊಳಕು ಮನಸ್ಸಿನ 'ಪುರೋಹಿತರು.' ಹಿಂದೂ ಧರ್ಮದಲ್ಲಿನ ಜಾತಿಗಳು ವಿಶ್ವವಿದ್ಯಾಲಯದ ಕ್ಲಾಸುಗಳಂತೆ... ಹಿಂದಿನ ಕ್ಲಾಸಿನ ಸಾಧನೆಯ ಆಧಾರದ ಮೇಲೆ ಮುಂದಿನ ಕ್ಲಾಸಿನಲ್ಲಿ ಪ್ರವೇಶ ಸಿಕ್ಕುವಂತೆ, ಹಿಂದಿನ ಜನ್ಮದ ಧಾರ್ಮಿಕ... ಸಾಧನೆ ಮೊತ್ತ ನೋಡಿಕೊಂಡು ದೇವರು ಮುಂದಿನ ಜನ್ಮವನ್ನು ಯಾವ ಜಾತಿಯಲ್ಲಿ ಕೊಡಬೇಕೆಂದು ಡಿಸಿಸನ್... ಮಾಡ್ತಾನಂತೆ!



"ಎಂ.ಎ. ವಿದ್ಯಾರ್ಥಿ ಹೈಸ್ಕೂಲ್ ಮಕ್ಕಳೊಡನೆ ಬಾಳಿ ಅವರಂತೆ ಸಮಯ ಹಾಳು ಮಾಡದಿರುವಂತೆ, ಮೇಲುಜಾತಿಯವರು ತಮ್ಮ ಜಾತಿಯ ವಾತಾವರಣದಲ್ಲೇ ಬಹುವಾಗಿ ಬಾಳುತ್ತಿದ್ದು ಸ್ವಧರ್ಮ ಪಾಲಿಸಿಕೊಂಡು ಬಂದರು...." ಹೀಗೆ ಸಾಗುವ 'ಖೋಟಾ' ಕಾರಂತರ ಮುನ್ನುಡಿ ಬ್ರಾಹ್ಮಣರನ್ನು ಎಂ.ಎ. ವಿದ್ಯಾರ್ಥಿಗಳಂತೆಯೂ, ಶೂದ್ರರನ್ನು ಸ್ಕೂಲ್ ಮಕ್ಕಳಂತೆಯೂ, ದಲಿತರನ್ನು ಅನಕ್ಷರಸ್ಥರಂತೆಯೂ ಚಿತ್ರಿಸಿ, ಬ್ರಾಹ್ಮಣರು ತಮ್ಮ ಜಾತಿಯ ಪರಿಸರದಲ್ಲೇ ಬೆಳೆದಿದ್ದರಿಂದ ಹಿಂದೂ ಧರ್ಮ ಉಳಿಯಿತು ಎಂಬ ತೀರ್ಮಾನ ಮಾಡುತ್ತಾರೆ!

ಅನೇಕ ಪಾಶ್ಚಾತ್ಯ ಮೇಧಾವಿಗಳೇ ಜಾತಿಕ್ರಮವನ್ನು ತುಂಬಾ ತುಂಬಾ ಹೊಗಳಿದ್ದರಂತೆ, ಆದರೆ ಸ್ವರಾಜ್ಯ ಲಭಿಸಿದಾಗ ಪ್ರಧಾನಿ ನೆಹರೂ ಹಿಂದೂ ಧರ್ಮ ಬಾಳಿಸಿಕೊಂಡು ಬಂದಿದ್ದ ಜಾತಿಕ್ರಮಕ್ಕೆ ಕೊಡಲಿ ಏಟು ಕೊಟ್ಟರಂತೆ.... ಇಂಥದ್ದೆಲ್ಲದರಿಂದ ಬೇಜಾರಾದ... ಖೋಟಾ ಕಾರಂತರು ಹಿಂದೂ ಧರ್ಮದ ಮೇಲುಜಾತಿಗಳ ಪೋಷಕರು ತಮ್ಮ ಮಕ್ಕಳಿಗೆ ಜಾತಿ ಪ್ರತಿಷ್ಠೆಯ ಕುರಿತು ತಿಳಿಹೇಳಲು ಈ 'ದೇವರನ್ನು ನಂಬುವ' ಎಂಬ ಕೆಡುಕು ವಿಚಾರಗಳ ಪುಸ್ತಕ ಬರೆದಿದ್ದರು 1972 ರಲ್ಲಿ. ಈಗಾ... ಅದರ ಪ್ರಸ್ತಾಪವೆಂದರೆ, ಆ ಪುಸ್ತಕ ಇನ್ನೂ ಚಾಲ್ತಿಯಲ್ಲಿದ್ದು ಜಾತಿ ತಾರತಮ್ಯವನ್ನು ಎತ್ತಿಹಿಡಿದು, ಸಂವಿಧಾನವನ್ನೇ ಅಣಕಿಸುತ್ತಿದೆ.

1998 ರ ವೇಳೆಗೆ ಐದನೇ ಮುದ್ರಣ ಕಂಡಿದ್ದ ಈ ಪುಸ್ತಕ ನಂತರದಲ್ಲಿ ಅದೆಷ್ಟು ಮುದ್ರಣ ಕಂಡು ಅದೆಷ್ಟು ಮನಸ್ಸುಗಳಲ್ಲಿ ಜಾತಿವಿಷವನ್ನು ತುಂಬಿದೆ ಎಂಬುದು ಬೆಂಗಳೂರಿನ ಶಂಕರಪುರದ ಪ್ರಕಾಶಕರಿಗೇ ಗೊತ್ತು.

ಜನತೆಗೆ ಗೊತ್ತೇ ಇರದ 'ಸತ್ಯದರ್ಶಿನಿ' ಪುಸ್ತಕ ಹಿಂದೂ ಧರ್ಮಕ್ಕೆ ಅವಮಾನ ಮಾಡಿತೆಂದು ಗುಲ್ಲೆಬ್ಬಿಸಿ ಕ್ರೈಸ್ತರ ಮೇಲೆ ದಾಳಿ ಮಾಡುವ ಶೂದ್ರ, ದಲಿತ ಚೆಡ್ಡಿಗಳು ಈ 'ದೇವರನ್ನು ನಂಬುವ' ಎಂಬಂತಹ ಪುಸ್ತಕಗಳಲ್ಲಿನ ಪುರೋಹಿತಶಾಹಿ ವಂಚನೆಗಳನ್ನು ಅರ್ಥ ಮಾಡಿಕೊಳ್ಳುವುದು ಯಾವಾಗ?

ಈ 'ಪ್ರಕಾಶಿಸುತ್ತಿರುವ ಭಾರತ'ದಲ್ಲಿ ಈಗಲೂ ಈ ಖೋಟಾ ಕಾರಂತಗಳಿದ್ದಾರೆ. ಅವರು ಆರೆಸ್ಸೆಸ್ ರೂಪದಲ್ಲಿ ವಿಎಚ್‌ಪಿ ರೂಪದಲ್ಲಿ ವಿಷ ಕಕ್ಕುತ್ತಿದ್ದಾರೆ. ಇನ್ನು ಕೆಲವರು ಜ್ಯೋತಿಷಿಗಳ ರೂಪದಲ್ಲಿ ಮಾಧ್ಯಮಗಳ ಮೂಲಕ ಜಾತಿ ತಾರತಮ್ಯವನ್ನು, ಮೂಢ ವಿಚಾರಗಳನ್ನು ಪ್ರಸಾರ ಮಾಡುತ್ತಿದ್ದಾರೆ. ಸೆಪ್ಟೆಂಬರ್ 1 ರ ಕನ್ನಡಪ್ರಭದ ಭವಿಷ್ಯಕ್ಕೇ ಮೀಸಲಿಟ್ಟ ಪುರವಣಿಯಲ್ಲಿ "ಗುರುಗ್ರಹದ ಗರ್ಜನೆಯೇ ಹಂದಿಜ್ವರಕ್ಕೆ ಕಾರಣ" ಎಂದು ವೈರಸ್ ಹರಿಬಿಟ್ಟಿದ್ದಾನೆ ರಾಮಚಂದ್ರಭಟ್ಟನೆಂಬ ಪಂಡಿತ.... ಇದು ಖೋಟಾ ಕಾರಂತರ ವಂಶಾವಳಿಯ ಕೊಳಕುತನಕ್ಕೆ ಒಂದು ನಿದರ್ಶನ ಮಾತ್ರ....

● ಮಲ್ಲಿ...

ಮಗಳು ಬರೆದ ಕವಿತೆ

ಮಗಳು
[illegible]
[illegible]
[illegible]
[illegible]

'[illegible]?'

ಎದೆಯ ಬಡಿತ ಹಮ್ಮಿನಿಂದ
ಕ್ರೈಸ್ತನೆಂದಿತು
ಸಣ್ಣಗೆ ಕಂಪಿಸಿದಳು


ಮುಸ್ಲಿಮನೆಂದಿತು ಗರ್ವದಲಿ
ಒಳಗೇ ದುಃಖಿಸಿದಳು

ಹಿಂದುವೆಂದಿತು ಹೆಮ್ಮೆಯಲಿ
ಜೋರಾಗಿ ಅತ್ತುಬಿಟ್ಟಳು

ಕಣ್ಣೀರಿನಲಿ ತೊಯ್ದ ಹೃದಯ
ಮನುಷ್ಯನೆಂದಿತು
ಕೊನೆಗೆ ಅಳುಕುತಲಿ

ಮೂಡಿತು ಮುಗ್ಧ ಮುಖದಲಿ
ಬುದ್ಧನ ಬೆಳದಿಂಗಳು
ಅಪ್ಪಿ ಹೂ ಮುತ್ತನಿತ್ತಳು
ಬೆಳಕಿನ ಬೀಜ ಬಿತ್ತಿದಳು

● ವಿ. ಹರಿನಾಥ ಬಾಬು
ಸಿರುಗುಪ್ಪ



[illegible]ಎಂ.ಪಿ. ಪ್ರಕಾಸುನ್ನ ನೋಡಿಕಂಡು ಬರಬೇಕು ಕಂಡ್ಯ

[illegible]ಹೇಳ್ತಿದ್ದವರು ಏನೇನೊ ಮಾತನಾಡುತ್ತಿದ್ದರೂ [illegible]ಮಾವನಿಗೆ ಅವ್ಯಾವೂ ಕೇಳುತ್ತಿರಲಿಲ್ಲ. ಅವನ [illegible]ಚನೆಯೆಲ್ಲಾ ಇಷ್ಟೊತ್ತಿಗೆ ರಾಗಿಪೈರು ಕನಿಷ್ಠ [illegible]ಮುದ್ದ ಇರಬೇಕಾಗಿತ್ತು; ಜನ ಹೈಲೊ ಎನ್ನುತ್ತ [illegible]ವಾಗಿ ನಾಟಿ ಮಾಡುತ್ತಾ; ಮುಂಬರುವ ಮಾರ್ನವಮಿ [illegible]ಸಂಭ್ರಮಿಸುತ್ತಾ ಇರಬೇಕಿತ್ತು. ಆದರೆ ಕಾಲ ಕೈಕೊಟ್ಟಿತ್ತು. [illegible] ವಿಷಯಗಳ ಬಗ್ಗೆ ಕಾಳಮಾವ ಒಳಗಣ್ಣಾಗಿದ್ದಾಗ, [illegible]ಜುಮ್ಮಿಯನ್ನು ಉದ್ದೇಶಿಸಿ,

"[illegible]ಪ್ರಕಾಸನಿಗೆ ಉಸಾರಿಲವಂತೆ ಕಂಡ್ಯ" ಎಂದ.

"[illegible]ವತ್ತರೆ ಇಲ್ವಾಸೆ ಹೋದನಲ್ಲೊ ಮಾವ" ಎಂದಳು.

ಕಪ್ಪೆಪುರಾಣ

ಯ ಲು ಸೀ ಮೆ

▶ ಬಿ. ಚಂದ್ರೇಗೌಡ

"[illegible]ವಿ, ಅವುನಲ್ಲ ಕಂಡ್ಯ. ಎಂ.ಪಿ. ಪ್ರಕಾಸುನಿಗೆ [illegible]ರಿಲ್ಲವಂತೆ."

"[illegible]ಕಾಯ್ಲೆ ಅನ್ನು?"

"[illegible]ಊ, ಕಾಯಿಲವಂತೆ. ಯಲ್ಲಾ ಹೋಗಿ [illegible]ಡಿಕಂಡು ಬತ್ತಾ ಅವುರೆ. ನೀನು ಹೋಗಿ ಬಾರ್ಲೆ."

"[illegible]ಈ ಉಗ್ರಿ ಹೇಳಲೆಯಿಲವಲ್ಲಾ, ನಿಜವೇನ್ಲ?"

"[illegible]ಉಸಾರಿಲ್ಲ ಅನ್ನದು ನಿಜ ಕಣೆ. ಹೋಗಿ [illegible]ಡಿಗ್ಗಲ್ಲ ಯಾಕೆ ತ್ವಂದ್ರೆ ಕೊಡದು ಅಂತ [illegible]ನಾದೆ. ಯಾಕಂದ್ರೆ ನೀನು ಹೋದೇಟಿಗೆ ಅಳಕ್ಕೆ [illegible]ಮಾಡಿಬುಡ್ತಿ. ಅದ್ಕೆ ನಿನಿಗೇಳ್ಳಿಲ್ಲ."

"[illegible]ನಾನು ನೋಡಿದೇಟಿಗೆ ಅಳೊತರ ಕಾಯಿಲೆ [illegible]ತ್ತೇನ್ಲ?"

"[illegible]ಕರುಳಲ್ಲಿ ಕ್ಯಾನ್ಸರ್ ಆಗಿದ್ದತಂತೆ."

"[illegible]ದ್ದಡ್ಡ ಕಳ್ಳೊ, ಸಣ್ಣ ಕಳ್ಳೊ?" ಎಂದ ಕಾಳಮಾವ.

"ಸಣ್ಣ ಕಳ್ಳಂತೆ ಕಣಮಾವ."

"ಸಣ್ಣ ಕಳ್ಳಾದ್ರೆ ಹೆದರಂಗಿಲ್ಲ ಕಂಡ್ಯ. ಎಲ್ಲಿ [illegible]ಬಗ್ಗದೆ ಆ ಭಾಗವ ಕತ್ತಿಸಿ ತಗುದುಬುಡ್ತರೆ [illegible]ಟ್ರು. ಆಮ್ಯಾಲೆ ಆರಾಮಾಗಿರಬವುದು. [illegible]ವತಿ ಲಕ್ಷ್ಮಣನಿಗೆ ಅಂಗೆ ಅಲವೆ ಮಾಡಿರದು" [illegible]

"ಲಕ್ಷ್ಮಣನ ಕಾಯಿಲೆನೆ ಬ್ಯಾರೆ ಕಣೊ ಮಾವ. [illegible]ನು ಬಾಡ ತಿನ್ನುವಾಗ ಆಡಿನ ಮೂಳೆ, ಕೋಳಿ ಮೂಳೆಯ ನುಚ್ಚು ಮಾಡಿ ನುಂಗಿದ್ನ. ಅವು ಹೋಗಿ ಸಣ್ಣ ಕಳ್ಳಲಿ ಗುಂಡು ಸೂಜಿಯಂಗೆ ಚುಚ್ಚುಗಂಡಿದ್ವೊ. ಅದ್ಕೆ ಕಳ್ಳ ಕತ್ರಿಸಿದ್ರು. ಅಂಗಂತ ಪ್ರಕಾಸನಿಗೆ ಅಂಗೆ ಮಾಡಕ್ಕಾದತೆ. ಔಷಧಿ ಕೊಟ್ಟೆ ಉಸಾರು ಮಾಡಬೇಕು" ಎಂದ ಉಗ್ರಿ.

"ಪ್ರಕಾಸ ಊಟ ಉಪಚಾರದಲ್ಲಿ ಭಾರಿ ನೇಮ ಇಟ್ಟುಕೊಂಡಿದ್ನಂತೆ."

"ಶಿವಾಚಾರದೋನಲವೆ, ಅವುನೆಲ್ಲಿ ನಮ್ಮಂಗೆ ಬಾಡುಬಳ್ಳೆ ತಿಂದನೂ?" ಎಂದ ಸೀರ.

"ನೀನೇಳಿದಂಗೆ ತಿನ್ನದು, ಕುಡಿಯದು, ಸೇದದು ಯಾವ ಚಟನೂ ಇಲ್ದೊನು ಕಣಮಾವ. ಆ ವಿಸಿಯದಲ್ಲಿ ಬ್ರಾಂಬ್ರಗಿಂತ ಒಂದು ಕೈ ಮ್ಯಾಲೆಯಾ..." ಎಂದು ಉಗ್ರಿ ಹೇಳುತ್ತಿರುವಾಗ ಮಧ್ಯೆ ನುಗ್ಗಿದ ಸೀರ,

"ಕಳ್ಳು ತುಂಬ ಹುಯ್ಕಳೊ ಬ್ರಾಂಬ್ರು ತೋರ್ಲ ನಿಂಗೆ?" ಎಂದ.

"ನಿಜ. ಇವತ್ತು ಇಂತ ಜಾತಿ ಜನ ಹಿಂಗವುರೆ ಅನ್ನಂಗೆ ಇಲ್ಲ. ಯಲ್ಲಾ ಜಾತಿಯೋರು ಯಲ್ಲಾ ಚಟನೂ ಕಲ್ತಗಂಡವುರೆ. ಶೂದ್ರು ಜನ ಬ್ರಾಂಬ್ರಂಗಾಯ್ತಾ ಅವುರೆ. ಬ್ರಾಂಬ್ರು ಶೂದ್ರಜನ ಮೀರುಸ್ತ ಅವುರೆ."

"ಪರೆಗ್‌ಜಾಂಪಲ್ ದ್ಯಾವೇಗೌಡ್ರ ಅವುರಲ್ಲೊ" ಎಂದುಕೊಂಡು ವಾಟಿಸ್ಸೆ ಬಂದ.

"ಏನೇಳಿದ್ರು ದ್ಯಾವೇಗೌಡ್ರುದೊಂದು ಸುದ್ದಿ ತಂದೇತತ್ತಿಯಲ್ಲಾ ನೀನು" ಎಂದಳು ಜುಮ್ಮಿ.

"ಅದೇ ಕಣಕ್ಕ ದ್ಯಾವೇಗೌಡ್ರ ಸ್ಪ್ಯಶಾಲಿಟಿ. ನೀನು ಯಾವುದೇ ವಿಷಯ ತಗೊ ದ್ಯಾವೇಗೌಡ್ರು ಮ್ಯಾಟ್ರಂದ್ಲೆ ಎಂಡಾಯ್ತದೆ."

"ಅಂಗಾದ್ರೆ ಎಂ.ಪಿ. ಪ್ರಕಾಸನ ಸುದ್ದಿ ಮಾತಾಡ್ತಯಿದ್ವೊ. ಅದಕೇನೇಳ್ತಿಲಾ?"


"ಪ್ರಕಾಶ್ ಕಾಯಿಲೆ, ದ್ಯಾವೇಗೌಡ್ರ ರಾಜಕಾರಣದ ಪರಿಣಾಮದಿಂದ್ಲೆ ಆಯ್ತು ಅಂತಿನಿ ಗೊತ್ತೆ."

"ಅದ್ಯಂಗ್ಲಾ?"

"ನೋಡಕ್ಕ, ಯಾರಿಗಾರ ಕ್ಯಾನ್ಸರ್ ಆದ್ರೆ ದಾಕ್ಟರು ಏನು ಕೇಳ್ತರೆ ಗೊತ್ತೆ? ತುಂಬಾ ಯೋಚನೆ ಮಾಡಿದ್ರಾ? ಮನಸಿನ ಮೇಲೆ ಭಾಳ ಪ್ರಜರ್ ಹಾಕಿದ್ರಾ? ಅಂತ ಕೇಳ್ತರೆ. ಆ ಲ್ಯಕ್ಕದಲ್ಲಿ ನೋಡಿದ್ರೆ ಎಂ.ಪಿ. ಪ್ರಕಾಶ ಭಾಳ ಯೋಚನೆ ಮಾಡಿರೋದು, ಅವುಮಾನ ಪಟ್ಟಿರೋದು ದ್ಯಾವೇಗೌಡ್ರ, ಸಹವಾಸ ಮಾಡಿ. ಉಪಮುಖ್ಯಮಂತ್ರಿಯಾಗಿ, ಹೋಂ ಮಿನಿಷ್ಟ್ರಾಗಿದ್ದಾಗ ಅವತ್ತು ಉಂಡೂಟ ಅರಗದಂಗೆ ಯೋಚನೆ ಮಾಡಿದ್ನ. ಇವತ್ತು ಕ್ಯಾನ್ಸರ್ ಆಗ್ಯದೆ ಗೊತ್ತೆ?" ಎಂದ ವಾಟಿಸ್ಸೆ.

"ವಾಟಿಸ್ಸೆ ಹೇಳದು ನಿಜವೇನ್ಲ?" ಎಂದಳು ಜುಮ್ಮಿ.

"ಊ. ವಾಟಿಸ್ಸೆ ಕಿದ್ವಾಯಿಲಿ ದಾಗುಟ್ರಾಗಿದ್ದೊನಲವೆ, ಅವುನ ಮಾತ ತಗದಾಕದು ಕಷ್ಟ" ಎಂದು ಉಗ್ರಿ ನಕ್ಕ.



"ನೀನು ಅಂಗೆ ಅಂತಿಯಲ್ಲಾ?"

"ನೋಡಕ್ಕಾ, ದ್ಯಾವೇಗೌಡ ಬಿಜೆಪಿ ಸಪ್ಪೋರ್ಟ್ ವಾಪಸ್ ತಗಂಡಾಗ ಎಂ.ಪಿ. ಪ್ರಕಾಶ್ ನಮ್ಮ ಮುಖ್ಯಮಂತ್ರಿ ಕುಮಾರಸ್ವಾಮಿ, ಎಡೂರಪ್ಪ ಉಪಮುಖ್ಯಮಂತ್ರಿಯಾಗಿ ಕಂಟಿನ್ಯೂ ಆಗ್ಲಿ ಇದು ನಮ್ಮ ಶರತ್ತು ಅಂದಿದ್ರೆ ಪ್ರಕಾಶ್‌ಗೂ ನ್ಯಾಯ ಸಿಗದು. ಅವುರಿಗೆ ಇವತ್ತು ಬಂದಿರೊ ಕಾಯ್ಲೆನೂ ಬತ್ತಿರಲಿಲ್ಲ. ಇಷ್ಟು ಕ್ಯಟ್ಟ ಸರಕಾರನೂ ಇರತಿರಲಿಲ್ಲ."

"ಪ್ರಕಾಶ್‌ನಂಥೋನು ಮುಖ್ಯಮಂತ್ರಿ ಆಗಬೇಕಾಗಿತ್ತು" ಎಂದ ಕಾಳಮಾವ.

"ನಿಜ ಕಣ ಮಾವ. ಪ್ರಕಾಶ್ ಆದೆ ಅಂತ ಹಿಗ್ಗೋನು ಅಲ್ಲ, ಆಗಲಿಲ್ಲ ಅಂತ ಕ್ವರಗೋನು ಅಲ್ಲ. ಅಂತ ಮನ್ಸ ಇವತ್ತು ಬಿಜೆಪಿಲೂ ಇಲ್ಲ, ಕಾಂಗ್ರೆಸ್ಸಲ್ಲೂ ಇಲ್ಲ, ಜೆಡಿಎಸ್‌ನಲ್ಲಂತೂ ಇಲ್ಲವೇ ಇಲ್ಲ" ಎಂದ ಉಗ್ರಿ.

"ಅಂಗರೋಗಿ ನೋಡಬೇಕು ಕಂಡ್ಯ" ಎಂದಳು ಜುಮ್ಮಿ.

"ಮುಂದಿನ ವಾರ ಹೋಗನ ತಗಳಕ್ಕ, ಆದ್ರೆ, ಒಂದು ಕಂಡಿಷನ್ನು" ಎಂದ ವಾಟಿಸ್ಸೆ.

"ಏನ್ಲ ಕಂಡಿಸನ್ನು?"

"ಹೋದ್ರೆ ಅವುರ ಕಾಯಿಲೆ ವಿಷಯ ಮಾತಾಡಂಗಿಲ್ಲ, ಯಾರೂ ಡಲ್ಲಾಗಿರಬಾರ್ದು. ಕೈಕಟ್ಟಿಗಂಡು ಗಂಭೀರವಾಗಿ ಇರಬಾರ್ದು. ನಾವು ಯಂಗ್ಯಂಗಿದ್ದಿವೊ ಅಂಗಂಗೇ ಇರಬೇಕು. ನೀನು ಪಂಚಾತಿ ವಿಷಯ ಮಾತಾಡಕ್ಕ, ಉಗ್ರಿ ಎಡೂರಪ್ಪ ಸರಕಾರದ ವಿಷಯ ಮಾತಾಡ್ಲಿ, ನಾನು ದ್ಯಾವೇಗೌಡ್ರು ಈಗ ಏನು ಮಾಡ್ತಾ ಅವುರೆ ಅಂತ ಮಾತಾಡ್ತಿನಿ" ಎಂದು ವಾಟಿಸ್ಸೆ ಹೇಳುವಾಗ ಸೀರ,

"ನಾನು ಬತ್ತಿನಿ ಕಂಡ್ಯ" ಎಂದ.

"ಬ್ಯಾಡ ಚಿಗಪ್ಪ, ನಿನ್ನಂಥೋರು ಈಗಾಗ್ಲೆ ಹಡಗಲಿ ಹರಪನಳ್ಳಿ ಕಡಿಂದ ಹೋಗಿ ಮಾತಾಡಿಸ್ಯವುರೆ. ಒಂದೇ ತರದ ಜನ ಹೋಗಬಾರ್ದು, ಅದು ಪ್ರಕಾಶನಿಗೂ ಇಷ್ಟ ಇಲ್ಲ. ಆದ್ರಿಂದ ನೀನು ಬರದುಬ್ಯಾಡ."

"ದ್ಯಾವೇಗೌಡ ಹೋಗಿಲವೇನ್ಲ?" ಎಂದ ಕಾಳಮಾವ.

"ಅವುನೆ ಕೈಮುರಕಂಡು ಕುಂತವುನೆ. ಇನ್ನ ಪ್ರಕಾಶ್ ನೋಡಕ್ಕೆ ಹೋದನೆ ದ್ವಡಪ್ಪ?"

"ಯಾವ ಕೈ ಮುರಕಂಡಿದ್ದನ್ಲ?"

"ಯಡಗೈ ಮುರಕಂಡು ಕತ್ತಿಗೆ ನ್ಯಾತಾಯ್ಕಂಡವುನೆ."

"ಅಂಗರ್ಯಲ್ಲ ಬಲಗೈಲೆ ನ್ಯಡಿತಾ ಅದೆ" ಎಂದು ಸೀರ ನಕ್ಕ.

"ಅಂಗೇನುಯಿಲ್ಲ, ಅಂದು ತ್ವಳಿಯೋ ಮಿಷಿನ್ ಬಂದಿದ್ದವಂತೆ. ಅದ ಹಾಕಿಸಿಗಂಡವುನೆ ತಗೊ" ಎಂದ ಉಗ್ರಿ.

"ಅಂದು ತ್ವಳಿಯೋ ಮಿಷಿನ್ನು ಬಂದಿದ್ದವೆ?" ಎಂದಳು ಜುಮ್ಮಿ.

"ಊ ಕಣೆ. ಇತ್ತೀಚೆಗೆ ಸಿಟಿಲಿ ನಯಸ್ಸಾಗಿರೊ ಟೈಲ್ಸು ಮಜಾಕು ಬಂದು ಯಾರ ಮನಿಗೋಗು ಯಲ್ಲ ಕೈನೊ ಕಾಲನೊ ಮುರಕಂಡು ಕುಂತಿರತವೆ. ಅಂತವ ನೋಡಕ್ಕಾಗದೆ ಮಿಷಿನ್ ಮಾಡಿದ್ದರಂತೆ. ಹೋಗಿ ಕುಂತಗಂಡೇಟಿಗೆ ಯಲ್ಲಾನು ಅದೆ ಮಾಡ್ತದಂತೆ" ಎಂದ ಉಗ್ರಿ.

"ಯಲ್ಲಾನು ಅದೆ ಮಾಡಲ್ಲ ಕಣೊ ಉಗ್ರಿ. ನೀವು ಮಾಡಿದ ಮ್ಯಾಲೆ ಅದು ತ್ವಳಿತದೆ, ಅಂದ್ರೆ ಕ್ಲೀನ್ ಮಾಡ್ತದೆ ಅಷ್ಟೆ" ಎಂದ ವಾಟಿಸ್ಸೆ. ■

[illegible]ಾ ಕುಣೀಬೇಕ, ಮೈ ದಣೀಬೇಕ!

[illegible]ಅತಿರೇಕಗಳಿಗೆ, ತಿಕ್ಕಲು ನಡವಳಿಕೆಗಳಿಗೆ ಒಂದು ಮಿತಿ ಇರಬೇಕು. ಮೊನ್ನೆ ಒಬ್ಬ ಬಂದ. "ನಾನು [illegible] ಧರ್ಮಗುರುಗಳು ಮತ್ತು ಮಠಗಳ ಬಗ್ಗೆ ಕಟುವಾಗಿ ಹೇಳುವ ವಿಷಯಗಳಿದ್ದುದರಿಂದ ಮಠ [illegible]ಡಿಸಿದ್ದ ಸಭೆಗೆ ಹೋಗಿದ್ದೆ, ಅಲ್ಲಿ ಹೇಳಬೇಕಾದ್ದನ್ನೆಲ್ಲ ಹೇಳಿದೆ. ಅವರು ಬೆಚ್ಚುವಂತೆ [illegible]ಸಿದೆ. ಸಭೆಯಿಂದ ಒಬ್ಬ ಎದ್ದು ಬಂದು, "ಇನ್ನೊಂದು ಜಾತಿಯ ಮಠವಾಗಿದ್ದರೆ [illegible]ನ್ನು ಜೀವಸಹಿತ ಬಿಡುತ್ತಿರಲಿಲ್ಲ" ಅಂದ. "ಅದು ನಿಮ್ಮ ಮಠದ ಸಹನೆ ತೋರುತ್ತದೆ [illegible]" ಎಂದು ಉದ್ದುದ್ದ ಬೊಗಳೆ ಬಿಟ್ಟ.


[illegible]ನಾನು ಸುಮ್ಮನೇ, 'ಅಲ್ಲಿ ಊಟ ಮಾಡಿದಿರಾ?' ಅಂದೆ.

'ಹೌದು' ಅಂದ.

'ಅವರ ವೇದಿಕೆಯಿಂದ ಮಾತನಾಡುವಾಗ ನಾಚಿಕೆ ಆಗಲಿಲ್ಲವೇ?' ಅಂದೆ.

ಇದು ತೀರಾ ಸಾಮಾನ್ಯ ವಿಷಯ. ಇಂಥವು ಕೂಡ ಕೆಲವರಿಗೆ ಅರ್ಥವಾಗುವುದಿಲ್ಲ. [illegible] ಸೋಷಲಿಸ್ಟ್‌ನಂತೆ ಮಾತಾಡುವ ಒಬ್ಬ ಡಾ.ಅಂಬೇಡ್ಕರ್ ಬಗ್ಗೆ ಹೃದಯಂಗಮವಾಗಿ [illegible]ಮಾಡಿ ತನ್ನ ಜಾತಿಯ ಜಗದ್ಗುರುವಿನ ಪದತಲದಲ್ಲಿ ಕೂರಬಲ್ಲ; ಈತನೇ ಅತ್ಯಂತ [illegible]ರಾದ ಮಂತ್ರಿ, ಮುಖ್ಯಮಂತ್ರಿ, ಶಾಸಕರನ್ನು ಮನೆಗೆ ಆಹ್ವಾನಿಸಿ ಅಥವಾ ಅವರ [illegible]ನೆಗೆ ಆಹ್ವಾನಿಸಿಕೊಂಡು ಸುಬ್ಬಭೋಜನ ಮಾಡಬಲ್ಲ, ತಿರುವಳ್ಳುವರ್ ಪ್ರತಿಮೆಯ [illegible]ದ್ಧ ವೃಥಾ ಗದ್ದಲ ಬೇಡ ಅಂದವನೆ ಪ್ರತಿಮೆಯ ವಿರುದ್ಧ ಕೂಗಾಡುವವರ ಸಭೆಯಲ್ಲಿ [illegible]ಮೆಂಸಬಲ್ಲ.

[illegible]ನನಗೆ ಗೊತ್ತಿದೆ, ಮನುಷ್ಯ ಘೋರ ನಿಷ್ಠುರನಲ್ಲ; ಅದಕ್ಕೆ ಅಗಾಧ ಹಠಮಾರಿತನ ಮತ್ತು ಚೈತನ್ಯ [illegible]ಗುತ್ತದೆ. ನಾವೆಲ್ಲ ಹುಲುಮಾನವರು. ಆದರೆ ಕೆಲವಾದರೂ ಮರ್ಯಾದೆಗಳನ್ನು, ದಾಕ್ಷಿಣ್ಯಗಳನ್ನು [illegible]ಕೊಳ್ಳದಿದ್ದರೆ ಇಲ್ಲಿ ಬದುಕು ನರಕವಾಗುತ್ತದೆ. ಜನರಿಂದ ಜನರನ್ನು ಬೇರೆ ಮಾಡುವವರು, [illegible]ತ್ಯಂಥ ಕ್ಷೇತ್ರದಲ್ಲಿ ಪುಢಾರಿಗಿರಿ ಮಾಡಿ ಬೇಳೆ ಬೇಯಿಸಿಕೊಳ್ಳುವವರು, ರಾಜಕಾರಣಿಗಳ ಸ್ನೇಹ [illegible] ಹೊಟ್ಟೆ ತುಂಬಿಸಿಕೊಳ್ಳುವವರು, ಎಂಥ ಘೋರ ಪಾತಕದೆದುರೂ ನಾಲಗೆ ಚಾಚಿ ನಿಲ್ಲಬಲ್ಲವರು [illegible] ಸಮಾಜಕ್ಕೆ ಅಪಾಯಕಾರಿಗಳಾಗಿರುತ್ತಾರೆ. ಚಿಕ್ಕವರನ್ನು ತಮಗೆ ಗೊತ್ತಿಲ್ಲದೇ ದಾರಿ ತಪ್ಪಿಸುತ್ತಾರೆ. [illegible] ಕೆಲವರಾದರೂ ಬಚ್ಚೆ ಇಟ್ಟುಕೊಳ್ಳುವ ಮನಸ್ಸು ಮಾಡದಿದ್ದರೆ ಇಲ್ಲಿ ನಿತ್ಯ ನಿರ್ಲಜ್ಜರೊಂದಿಗೆ [illegible]ಜೀವಿಸಬೇಕಾಗುತ್ತದೆ.




ತಲೆತಪ್ಪಿಸಿಕೊಂಡವನು



ಇದನ್ನು ಒಂದು ತೀವ್ರ ಉದಾಹರಣೆಯೊಂದಿಗೆ ವಿವರಿಸುತ್ತೇನೆ. ನೀವು ಜೆ.ಡಿ.ಸ್ಯಾಲಿಂಜರ್ ಹೆಸರನ್ನು ಕೇಳಿರಬಹುದು. ಆತ ಹುಡುಗನಾಗಿದ್ದಾಗ ಲವಲವಿಕೆಯ, ಸೂಕ್ಷ್ಮಮನಸ್ಸಿನ ವ್ಯಕ್ತಿಯಾಗಿದ್ದ; ಹೆಣ್ಣುಗಳ ಸೌಂದರ್ಯಕ್ಕೆ ಖುಷಿಯಿಂದ ಸ್ಪಂದಿಸುತ್ತಿದ್ದ. ಆದರೆ ಜನರನ್ನು ನೋಡುತ್ತಾ ಹೋದಂತೆ, ತಾನು ಕಲಿತ ಎರಡು ಕಾಲೇಜುಗಳಲ್ಲಿ ದೊಡ್ಡವರ ಅಪ್ರಾಮಾಣಿಕತೆ ಮತ್ತು ಢಾಂಬಿಕತನವನ್ನು ಗಮನಿಸುತ್ತಾ ಹೋದಂತೆ ಬದಲಾಗತೊಡಗಿದ. ಮನುಷ್ಯನ ಉದ್ದೇಶ, ಗುಪ್ತ ಕುತಂತ್ರದ ಬಗ್ಗೆ ದಿಗ್ಭ್ರಮೆಗೊಂಡ. ಇಲ್ಲಿ ಸರಳತೆ, ಪ್ರಾಮಾಣಿಕತೆ, ಮುಗ್ಧತೆ ಸಾಧ್ಯವೆ-ಎಂದು ಕೇಳಿಕೊಂಡ. ತಾನು ಬರೆದ ಒಂದೇ ಒಂದು ಕಾದಂಬರಿ 'ಕ್ಯಾಚರ್ ಇನ್ ದಿ ರೈ' ಮತ್ತು ಕೆಲವೇ ಕೆಲವು ಕತೆಗಳಲ್ಲಿ ತನ್ನ ಅನಿಸಿಕೆಯನ್ನೆಲ್ಲ ನೋವಿನಿಂದ, ತಮಾಷೆಯಾಗಿ, ಭಾವುಕನಾಗಿ ಹೇಳಿದ. ಇದೆಲ್ಲ ಆದ ಮೇಲೆ ಏಕಾಂಗಿಯಾದ.

ಎಷ್ಟು ಏಕಾಂಗಿಯಾದನೆಂದರೆ ಮನುಷ್ಯರನ್ನು ಸಂಧಿಸಲು ನಿರಾಕರಿಸತೊಡಗಿದ. 1951ರಲ್ಲಿ, ಬರೆದ ಕಾದಂಬರಿಯಿಂದ ಬಂದ ಹಣದಲ್ಲಿ ಮನೆಯೊಂದನ್ನು ಕೊಂಡುಕೊಂಡು ಒಬ್ಬನೇ ಜೀವಿಸತೊಡಗಿದ. ಪರಿಚಿತರು, ವಿಮರ್ಶಕರು-ಯಾರನ್ನೂ ನೋಡಲಿಲ್ಲ. ಊಟ ತಂದು ಕೊಡುವವನು ಅದನ್ನು ಇಟ್ಟು ತಪ್ಪಗೆ ಹೊರಟುಹೋಗಬೇಕಾಯಿತು.



ಈಗ 72 ವರ್ಷದವನಾದ ಸ್ಯಾಲಿಂಜರ್ ಹಾಗೇ ಜೀವಿಸಿದ್ದಾನೆ. ಏನನ್ನು ಯೋಚಿಸುತ್ತಿದ್ದಾನೆ, ಕಲ್ಪಿಸಿಕೊಳ್ಳುತ್ತಿದ್ದಾನೆ-ಯಾರಿಗೂ ಗೊತ್ತಿಲ್ಲ. ಯಾವನಾದರೂ ತನ್ನ ಜೀವನಚರಿತ್ರೆ ಬರೆದರೆ, ಊಹಿಸಿ ಸುಳ್ಳು ಲೇಖನ ಬರೆದರೆ ಕೋರ್ಟಿಗೆಳೆಯುವ ಬೆದರಿಕೆ ಹಾಕುತ್ತಾನೆ.

ಆತನಿಗೆ ಕ್ಷುದ್ರ ಮಾನವರಿಂದ ದೊರೆಯುವ ತಲೆನೋವಂತೂ ಇಲ್ಲ. ಆದರೆ ಎಷ್ಟು ಜನಕ್ಕೆ ಹೀಗೆ ಜೀವಿಸುವ ಧೈರ್ಯ, ಆತ್ಮಸಂಪತ್ತು ಇರುತ್ತದೆ?

ಡಿಸೆಂಬರ್ 1, 1991

ಬಿಳಿ ಬಟ್ಟೆಯವನ ಆರ್ಟ್ ಆಫ್ ಮಾರ್ಕೆಟಿಂಗ್!

ಅನಾಕ

ಎಚ್.ಎಲ್. ಕೇಶವಮೂರ್ತಿ

ಘನ ಸರ್ಕಾರ ತನ್ನ ಒಡಲಲ್ಲಿಟ್ಟುಕೊಂಡಿರುವ ಪ್ರಚಂಡರನ್ನು ಸಮಯ ನೋಡಿ ಹೊರಕ್ಕೆ ಬಿಡುತ್ತೆ. ಈ ಸಾಲಿನ ದಸರಾ ಉತ್ಸವವನ್ನು ಉದ್ಘಾಟಿಸಲು 'ಆರ್ಟ್ ಆಫ್ ಲಿವಿಂಗ್'ನ ರವಿಶಂಕರ ಗುರೂಜಿಯನ್ನು ಆಹ್ವಾನಿಸಲಾಗುತ್ತಂತೆ. ಇದೊಂದು ತರಹ ರೋಸ್ಟರ್ ಸಿಸ್ಟಂ ಇದ್ದಂಗೆ. ಕಳೆದ ವರ್ಷ ಲಿಂಗಾಯತ ಮಠಾಧೀಶರಿಂದ ಉದ್ಘಾಟಿಸಿ, ಆಶೀರ್ವಚನ ನೀಡಿಸುವುದರ ಮೂಲಕ ಲಿಂಗಾಯತ ಸಮುದಾಯವನ್ನು ಉದ್ಧಾರ ಮಾಡಿತ್ತು. ಅದರ ಹಿಂದಿನ ವರ್ಷ ಒಕ್ಕಲಿಗರ ಮಠಾಧೀಶರಿಂದ ಇದೇ ಕೆಲಸ ಮಾಡಿಸಿ ಒಕ್ಕಲಿಗರ ಉದ್ಧಾರ ಮಾಡಿತ್ತು. ಸರ್ಕಾರದ ಹೇಳಿಕೆಯ ಪ್ರಕಾರ ವಿಶ್ವದೆಲ್ಲೆಡೆ ಭಾರತೀಯ ಸಂಸ್ಕೃತಿ ಪ್ರಚಾರ ಮಾಡುತ್ತಿರುವ ಇವರನ್ನು ಈ ವರ್ಷ ಕರೆಸಲಾಗುತ್ತಂತೆ. ಇವರೇನು ಭಾಷಣ ಮಾಡುತ್ತಾರೋ, ಆಶೀರ್ವಚನ ನೀಡುತ್ತಾರೋ ತಿಳಿದುಬಂದಿಲ್ಲ, ಅಂತೂ ಒಬ್ಬ ಬ್ರಾಹ್ಮಣನಿಗೆ ಅವಕಾಶ ಕಲ್ಪಿಸುವುದರ ಮೂಲಕ ಬ್ರಾಹ್ಮಣ ಜನಾಂಗದ ಉದ್ಧಾರ ಮಾಡಲು ಹೊರಟಿದೆ ಸರ್ಕಾರ!

ಬಿಳಿಬಟ್ಟೆಯ (ಈ ಪದಕ್ಕೆ ಇನ್ನೊಂದು ಅರ್ಥವೂ ಇದೆ. ಮಹಿಳಾ ವಾಚಕರು ಕ್ಷಮಿಸಬೇಕು) ಆಸಾಮಿಯನ್ನು ಯಾರು 'ಗುರೂಜಿ' ಅಂತ ಗುರುತಿಸಿದರೋ ಗೊತ್ತಿಲ್ಲ. ಅವರನ್ನು ನೋಡಿದರೆ 'ಖೋಜಾಜಿ' ಅನ್ನಿಸುತ್ತೆ. ಅದಲ್ಲ ವಿಷಯ. ರೈತರನ್ನು ಮೇಲೆತ್ತಲು ನಮ್ಮ ಘನ ಸರ್ಕಾರಗಳಿಗೆ ಆಗಾಗ್ಗೆ ಮೈಮೇಲೆ ದೇವರು ಬಂದಹಾಗೆ ಆಗುತ್ತೆ. ತಾಳೆ ಬೆಳೆ ಚಿನ್ನದ ಬೆಳೆ. ಅದನ್ನ ಬೆಳಿಸಿ ಬೆಳಕು ಹರಿಯೋ ಹೊತ್ತಿಗೆ ಶ್ರೀಮಂತರನ್ನಾಗಿ ಮಾಡಿಸಬೇಕು ಅನ್ನಿಸಿತು. ಶಿವಮೊಗ್ಗ ಜಿಲ್ಲೆಯಲ್ಲಿ ಸರ್ಕಾರದ ಇಂತಹ ಮಾತುಗಳನ್ನು ಕೇಳಿ ತಾಳೆ ಬೆಳೆದ ರೈತರು ಮಾರುಕಟ್ಟೆ ಸಿಗದೆ ವಿಷ ಕುಡಿಯುವ ಹಂತಕ್ಕೆ ಬಂದಿದ್ದರು ಅನ್ನೋದು ಅಲಾಯಿದ. ಚಿನ್ನದ ಬೆಳೆ ಬೆಳೆದು ಮನೆತುಂಬ ಚಿನ್ನ ತುಂಬ್ಕಳಿ ಅನ್ನೊ ಪ್ರಚಾರಕ್ಕೆ ಮಂಡ್ಯಕ್ಕೆ ಬಂದಿದ್ದರು. 'ಬದುಕುವ ಕಲೆ' ಕರಗತ ಮಾಡಿಕೊಂಡಿರುವ ಬಿಳಿ ಬಟ್ಟೆ ಖೋಜಾಜಿಯಿಂದ ರೈತರ ಕಿವಿ ಊದಿಸಲು ಕರೆಸಿದ್ದರು. ಅಲ್ಲೇನಾಯ್ತು ಅಂತೀರಿ ದೇವರ ಮೇಲೆ ಭಕ್ತಿ, ಉದಾರತೆ ಇದ್ದರೆ ಉತ್ತಮ ಬೆಳೆ ಖಾತರಿ ಎಂದು ಸಾರಿದರು. ಬೆಳೆ ಹಾಳಾದರೆ ದೇವರ ಮೇಲೆ ಭಕ್ತಿ ಇರಲಿಲ್ಲ ಅದಕ್ಕೆ ಹಂಗಾಯ್ತು ಅನ್ನೋ ಕಾರಣವನ್ನ ನೀಡಬಹುದಲ್ವಾ ಅಂತ ಕೆಲವರು ಕುಹಕ ಆಡುತ್ತಾರೆ. ಆದಿರಲಿ. ಭಾಷಣದ ನಡುವೆ ನಿಮಗೊಂದು ವಿಸ್ಮಯ ತೋರುಸ್ತೀನಿ ಅಂದ್ರು. ಎಲ ಎಲಾ ಈ ಬಿಳಿ ಬಟ್ಟೆ ಸ್ವಾಮಿ ಅದೇನು ತೋರುಸ್ತಾನೋ ಏನೋ ತಾಳೆಮರ ನೆಟ್ಟು ಮೂರು ದಿನಕ್ಕೇ ಏನಾರ ಫಲ ಕೊಡೋ ಹಂಗೆ ಮಾಡ್ತಾನಾ ಅಂತಾವ ಕುತೂಹಲದ ನಿರೀಕ್ಷೆಯಲ್ಲಿದ್ದರೆ.....

ಈ ಬಿಳಿ ಬಟ್ಟೆಯೇನು ರೈತರಂಗೆ ಪೆದ್ದನಾ. ಯಾವಾಗ, ಎಲ್ಲಿ ಏನು ತೋರಿಸಬೇಕು ಅನ್ನೋದು ಅರೀದೆ ಆರ್ಟ್ ಆಫ್ ಲಿವಿಂಗ್‌ನ ವಶೀಕರಿಸಿಕೊಂಡಿದ್ದನಾ. ಅವನ ಮಾತು ಸಡನ್ ಆಗಿ ಕುಡಿಯುವ ನೀರಿನ ಕಡೆ ನೆಗೀತು: ಅಶುದ್ಧ ನೀರನ್ನು ಕುಡಿದು ಕಾಯಿಲೆ ಕಸಾಲೆ ಬರುಸ್ಕೊಂಡು ಸಾಯ್ತೀರಿ. ಇದನ್ನು ತಡೆಯಬೇಕಾದ್ರೆ ಈ ಬ್ರಾಂಡ್‌ನ ವಾಟರ್ ಫಿಲ್ಟರ್ ಉಪಯೋಗಿಸಿ ಅಂದರು! ಅದು ಕಾರ್ಯ ಮಾಡುವ ವಿಧಾನವನ್ನೂ ಪರಿಚಯಿಸಿದರು! ಅಷ್ಟೇ ಅಲ್ಲ, ಅದರ ಬೆಲೆಯನ್ನು ತಾಳೆ ಬೆಳೆಯುವ ರೈತನೇನೂ ಕೊಡಬೇಕಾಗಿಲ್ಲ, ಸರ್ಕಾರ ನೀಡುವ ಸಹಾಯಧನದಲ್ಲೇ ಮುರಿದುಕೊಳ್ಳಲಾಗುತ್ತದೆ ಎಂದು ಸಾರಿದರು!

ತಾಳೆ ಬೆಳೆಗೂ ವಾಟರ್ ಫಿಲ್ಟರ್‌ಗೂ ಎತ್ತಲಿಂದೆತ್ತಣ ಸಂಬಂಧವಯ್ಯಾ ಅಂದರೆ ಇದು ಆರ್ಟ್ ಆಫ್ ಲಿವಿಂಗ್ ಸಂಬಂಧ ಕಾಣಾ!


ಎಂತಹ ಅದ್ಭುತ ಮಾರ್ಕೆಟಿಂಗ್ ತಂತ್ರ!

ಈ ಬಿಳಿ ಬಟ್ಟೆಸ್ವಾಮಿ ದಸರಾದಲ್ಲಿ ಯಾವ ಬ್ರಾಂಡ್‌ನ ಯಾವ ಪದಾರ್ಥ ಮಾರ್ಕೆಟಿಂಗ್ ಮಾಡ್ತಾನೋ ತಿಳಿದಿಲ್ಲ, ಈತನದ್ದು 'ಆರ್ಟ್ ಆಫ್ ಲಿವಿಂಗ್' ಅಲ್ಲ 'ಆರ್ಟ್ ಆಫ್ ಮಾರ್ಕೆಟಿಂಗ್!'

ಯೋಚಿಸಿ ಹೇಳಿ!

ದಕ್ಷ, ಪ್ರಾಮಾಣಿಕ ಅಧಿಕಾರಿ ಆದರೆ ಎಲ್ಲರಿಗೂ ಒಳ್ಳೆಯದೆ. ತಾನು ಇಂತಹವನು ಅನ್ನೋದು ಅವರ ತಲೆಗೇನಾದ್ರೂ ಏರಿದರೆ... ಹಾಗೆ ನೆತ್ತಿಗೇರಿಸಿಕೊಂಡವನ ಕತೆ ಇದು.

ಇನ್ನೂ ಹದಿಹರೆಯದ ವಯಸ್ಸು. ಉತ್ತಮ ಅಧಿಕಾರಿ ಅನ್ನಿಸಿಕೊಳ್ಳುವ ಕಾತುರ ಇತ್ತು. ಹೀಗನ್ನಿಸಿಕೊಳ್ಳಬೇಕಾದರೆ ಅಧಿಕಾರ ಅನ್ನೋದು ಒಂದು ಇರಬೇಕಲ್ಲ, ಅದೇನೇನೋ ಮಾಡಿ ಪೊಲೀಸ್ ಇಲಾಖೆ ಸೇರಿದ. ಹೊಸದರಲ್ಲಿ ಏನೂ ಪ್ರಮಾದ ನಡೆಯಲಿಲ್ಲ, ಒಂದಷ್ಟು ವರ್ಷ ಕಳೀತಿದ್ದಂತೆ ಗೌರವ ತಾನೇತಾನಾಗಿ ಬಂತು ಅದರ ಜೊತೇಲೇ ಇನ್ನೊಂದು ಬಂತು. ಇವರ ದಕ್ಷತೆ ಪ್ರಾಮಾಣಿಕತೆ ನೋಡಿ ಹೊಟ್ಟೆ ಕಿಚ್ಚಾಯಿತೋ ಏನು ಕತೆಯೋ. ಇವನು ಕಾಡು ಕುರುಬ ಅಲ್ಲ ನಾಡ ಕುರುಬ, ಕಾಡು ಕುರುಬರಿಗೆ ನ್ಯಾಯಬದ್ಧವಾಗಿ ಸಿಗಬೇಕಾಗಿದ್ದ ಹುದ್ದೆಯನ್ನ ಇವನು ಲಪಟಾಯಿಸಿದ್ದಾನೆ ಅನ್ನೋ ಗುಲ್ಲೆಬ್ಬಿಸಿದರು. ನೆಂಟರು ಇಷ್ಟರು ಎಲ್ಲ ನಾಡ ಕುರುಬರಾಗಿದ್ದರೂ ಇವನೊಬ್ಬ ಮಾತ್ರ ಕಾಡು ಕುರುಬನಾಗಿದ್ದಾನೆ ಎಂಬ ವ್ಯಂಗ್ಯದ ಮಾತನ್ನಾಡಿದರು. ಇಲ್ಲ ಇಲ್ಲ ನಾನು ಕಾಡು ಕುರುಬನೇ ಸೈ ಅನ್ನೋದ ದಾಖಲೆ ಸಮೇತ ಸಾಧಿಸಬೇಕಾದರೆ ಹೆಣ ಬಿದ್ದೋಯ್ತು. ಇದಕ್ಕೆ ಸಹಕಾರ ನೀಡಿದ ಊರ ಕುರುಬ ರಾಜಕಾರಣಿಗಳನ್ನ ಈಗಲೂ ಕೃತಜ್ಞತೆಯಿಂದ ನೆನೆಯುತ್ತಾರೆ. ಇಂತಹದರಲ್ಲೆಲ್ಲ ಬಹಳ ನಿಯತ್ತು ಅವರಿಗೆ. ಇದು ಕಳೀತಲ್ಲಾ ಅಂತ ಇದ್ದಂಗೆ ಲೋಕಾಯುಕ್ತರಿಗೆ ಯಾರು ದೂರು ಕೊಟ್ಟರೋ ಏನೋ. ದಾಳಿ ನಡೆಸಿದರು. ಅರಮನೆಯಂತಹ ವಾಸದ ಮನೆಯನ್ನ ಚಿತ್ರ ಪ್ರಕಟಿಸಿ ವರದಿ ಮಾಡಿದ



ಪತ್ರಿಕೆಯವರ ಮೇಲೆಲ್ಲ ಹಾರಾಡಿದರು. ಮಾನನಷ್ಟ ಮೊಕದ್ದಮೆ ಹೂಡ್ತೀನಿ ಅಂತೆಲ್ಲ ಕೂಗಾಡಿದರು. ಅದೇನೂ ಆದಂಗಿಲ್ಲ ಬಿಡಿ. ಇಂತಹ ದಕ್ಷ ಅಧಿಕಾರಿಗಳಿಗೆ ರಕ್ಷಣೆ ಕೊಡೋಕೆ ಅಲ್ವ ಸರ್ಕಾರ ಇರೋದು. ಲೋಕಾಯುಕ್ತರ ಕಣ್ಣಿಗೆ ಕಾಣಿಸಿದ ಅಕ್ರಮ ಗಳಿಕೆ ಸರ್ಕಾರದ ಕಣ್ಣಿಗೆ ಸಕ್ರಮ ಗಳಿಕೆಯಾಗಿ ಗೋಚರಿಸಿತು!

ಇಂತಹ ದಕ್ಷ ಪ್ರಾಮಾಣಿಕ ಅಧಿಕಾರಿಗೆ ಯಾರಿಗೆ ಇಲಾಖೆ ಬಡ್ತಿ ನೀಡಿದರೂ ಅದರಲ್ಲೇನಾದ್ರೂ ಊನ ಕಾಣಿಸುತ್ತಿತ್ತು. ಧೈರ್ಯವಂತ ಅಧಿಕಾರಿ ಅಲ್ವ, ಇಂತಹದ್ದನ್ನೆ ಆಡಿಯೂ ತೋರಿಸುತ್ತಿದ್ದರು. ಇತ್ತೀಚೆಗೆ ಏನಾಯ್ತು ಅಂದ್ರೆ ಡಿಜಿಪಿಯಾಗಿ ಅಜಯ್‌ಕುಮಾರ್ ಸಿಂಗ್‌ಗೆ ಬಡ್ತಿ ಸಿಗ್ತಲ್ಲ. ಆ ಮೊಸರಲ್ಲೂ ಕಲ್ಲು ಸಿಕ್ತಂತೆ ನಮ್ಮ ಸಾಹೇಬರಿಗೆ. ಅವರ ಹತ್ತಿರ ಕ್ಯಾತೆ ತೆಗೆದರಂತೆ. ಬಾಯಿಗೆ ಬಂದಂಗೆ ಏನೇನೋ ಅಂದರಂತೆ. ಆ ಮನುಷ್ಯ ಎಲ್ಲ ಕೇಳಿಸಿಕೊಂಡು ಸುಮ್ಮನಿದ್ದರೂ ಆಗ್ತಿತ್ತು, ಅವರೂ ತಿರುಗಿಬಿದ್ದರಂತೆ. ಈ ಕುರಿಗೆ ಹೆದರ್ತೀನಾ ನಾನು ಅಂದುಕೊಂಡ ನಮ್ಮ ಸಿಂಹ ಏನು ಮಾಡಿತು- ಸ್ವಯಂ ನಿವೃತ್ತಿ ಪಡೀತೀನಿ ಅಂತಾವ ಬೆದರಿಕೆ ಹಾಕ್ತು. 'ಪಡ್ಕೊ' ಅಂದಿರಬೇಕು ಅವರು. 'ಪಡೀತೀನಿ ಕಣೊ' ಅಂತ ಇವರು ಕೆರಳಿರಬೇಕು. ಒಟ್ಟಿನಲ್ಲಿ ಬರಬರಾಂತ ಅವರ ಚೇಂಬರ್‌ನಿಂದ ಹೊರಕ್ಕೆ ಬಂದ ಈ ಹುಲಿ ಕೋಪದಿಂದ ಸಿಡಿಯುವಂತಾಗಿತ್ತು.

ಸ್ವಯಂ ನಿವೃತ್ತಿ ಪಡೆಯೋದು ಅಧಿಕಾರಿಗಳಿಗೆ ಅಷ್ಟು ಸಲೀಸಲ್ಲ. ಮಧುಗಿರಿ ಉಪಚುನಾವಣೆ ಸಮಯದಲ್ಲಿ ಆಯ್ತಲ್ಲ ಹಂಗೇ ನನಗೂ ಆಗುತ್ತೆ ಅಂದುಕೊಂಡಿರಬೇಕು. ಒಂದು ತಿಂಗಳು ರಜ ಬಿಸಾಕಿ ಸ್ವಯಂನಿವೃತ್ತಿ ಅರ್ಜಿ ಕೆರೆದೆಸೆದರು. ಎಷ್ಟೇ ಆಗಲಿ ಪ್ರಾಮಾಣಿಕ ಅಧಿಕಾರಿ ಅಲ್ವ ಅವರು. ಸ್ವಯಂನಿವೃತ್ತಿ ವಿಷಯ ತಿಳೀತಿದ್ದಂತೆ ಇಲಾಖೆ ಸಿಬ್ಬಂದಿ ಬಂದು ಹಿಂದಕ್ಕೆ ಪಡೀರಿ ಅಂತ ಬೇಡಿಕೊಳ್ತಾವೆ; ಮುಷ್ಕರ ಹೂಡ್ತಾವೆ. ಇದನ್ನ ಕಂಡು ಸರ್ಕಾರ ಬಂದು ಮಂಡಿ ಊರಿಕೊತ್ಕತ್ತದೆ, ಹಿಂದಕ್ಕೆ ಪಡಿಯಪ್ಪ ನಿನ್ನ ಅರ್ಜೀನ ಅಂತ ಗೋಗರೆಯುತ್ತೆ ಅಂತೆಲ್ಲ ಮನಸ್ಸಿನಲ್ಲೇ ಮಂಡಿಗೆ ತಿಂತಿದ್ದರು ನಮ್ಮ ದಕ್ಷ ಸಾಹೇಬರು. ಆದರೇನು ಮಾಡ್ತಾರೆ ಪಾಪ. ಅಜಯ್‌ಕುಮಾರ್ ಸಿಂಗ್ ಅದೇನು ವರದಿ ಕಳಿಸಿದ್ದರೋ ಏನೋ. ಸರ್ಕಾರ ತರಗುಟ್ಟಿಕೊಂಡು ನಡುಗಲಿಲ್ಲ ಪರಂತು ದಡ ಗುಟ್ಟಿಕೊಂಡು ಒಪ್ಪಿಗೆ ನೀಡಿತು!

ನಾನಿಲ್ಲದೆ ಇದ್ದರೂ ಪೊಲೀಸ್ ಇಲಾಖೇಲಿ ಬೆಳಕು ಹರಿಯುತ್ತೆ ಅನ್ನೋದು ಖಾತರಿಯಾಗ್ತಿದ್ದಂತೆ ಇರೋ ಒಂದೆರಡು ತಿಂಗಳಾದರೂ ಅಧಿಕಾರ ಅನುಭವಿಸಿ ಸಾಧ್ಯವಾದರೆ ಮುಂದೆ ಯಾವುದಾದರೂ ತನುವಾದ ಸ್ಥಳ ಹೊಡೀಬೇಕು ಎಂದೋ ಏನೋ, ರಜ ವಜಾ ಮಾಡಿ ತಮ್ಮ ಹಿಂದಿನ ಕಚೇರೀಲಿ ಪೀಠಸ್ಥರಾದರು! ಯಾರೂ... ನಮ್ಮ ದಕ್ಷ, ಪ್ರಾಮಾಣಿಕ ಅಧಿಕಾರಿ. ಯಾವಾಗ... ಸರ್ಕಾರ ಸ್ವಯಂನಿವೃತ್ತಿಯನ್ನು ಒಪ್ಪಿದ ನಂತರ!

ಆಹಾ ಏನು ದಕ್ಷತೆ! ಏನು ಪ್ರಾಮಾಣಿಕತೆ!

ಈ ಅಧಿಕಾರಿ ಯಾರು ಊಹಿಸಬಲ್ಲಿರಾ?

ಥಟ್ ಅಂತ ಬೇಡಿ, ನಿಧಾನವಾಗೇ ಹೇಳಿ.

ಕುರುಹು: ಉತ್ತರ ಕೇಳಿದರೆ ಮುಖ ಕೆಂಪಗಾಗುತ್ತೆ ಅಯ್ಯ!!

ಶೂದ್ರರಿಗೆ ನಿಷ್ಠೆ, ಪ್ರಾಮಾಣಿಕತನ, ಆದರ್ಶಗಳಿಲ್ಲ

ಹೊಗಳಿಕೆ ತೆಗಳಿಕೆ

ಪ್ರತಿವಾರ ತಪ್ಪದೆ ಪತ್ರಿಕೆಯನ್ನು ಓದುತ್ತಿದ್ದೇನೆ. ಸಂಪಾದಕೀಯ ಬಹಳ ಅರ್ಥಪೂರ್ಣವಾಗಿದೆ. ಇತರೇ ಯಾವುದೇ ಪತ್ರಿಕೆಗಳಾಗಲಿ, ಚಾನೆಲ್‌ಗಳಾಗಲಿ, ಯಾವುದೇ ವ್ಯಕ್ತಿಯ, ಸಂಘಟನೆಯ, ಸರ್ಕಾರದ ಒಂದು ಮುಖವನ್ನಷ್ಟೇ ತೋರುತ್ತವೆ. ಆದರೆ ಪತ್ರಿಕೆಯು ಅವರ ಇನ್ನೊಂದು ಮುಖವನ್ನೂ ತೋರಿಸುತ್ತದೆ.

ನಿಧನ ಹೊಂದಿದ ವೈಎಸ್‌ಆರ್ ಕುರಿತ ಲೇಖನ ಚೆನ್ನಾಗಿದೆ. ವೈಎಸ್‌ಆರ್‌ರವರು 'ಆಪರೇಷನ್ ಕಮಲ' ತಡೆಯಲು ಕರ್ನಾಟಕ ಕಾಂಗ್ರೆಸ್ಸಿಗರಿಗೆ 'ಅಭಯ ಹಸ್ತ' ನೀಡಬಹುದಾಗಿತ್ತು!

'ವಿಮಾ ಖಾಸಗೀಕರಣ ಯಾರ ಲಾಭಕ್ಕಾಗಿ?' ಎಂಬ ಲೇಖನವೂ ಅರ್ಥಪೂರ್ಣವಾಗಿತ್ತು, ಚಿನ್ನದ ಮೊಟ್ಟೆ ಇಡುವ ಕೋಳಿಯನ್ನೇ ಕತ್ತರಿಸುವ ನಮ್ಮ ಕೇಂದ್ರ ಸರ್ಕಾರಗಳು, ಆರ್ಥಿಕ ತಜ್ಞರುಗಳು ಎಲ್‌ಐಸಿಯನ್ನೂ ನಾಶ ಮಾಡಲು ಹೊರಟಿದ್ದಾರೆ. ಈ ಲೇಖನ ಬರೆದ ಎಸ್.ಕೆ. ಗೀತಾ ಅವರು ನಮ್ಮ ಭಾರತೀಯ ಜೀವವಿಮಾ ನಿಗಮದ ನೌಕರರ ಸಂಘದ ಕಾರ್ಯದರ್ಶಿಗಳಾಗಿದ್ದು ಉತ್ತಮ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ.

-ಎಂ. ಸದಾಶಿವ, ತುಮಕೂರು

ಪತ್ರಿಕೆಯ ಸಂಪಾದಕರು ಪ್ರತಿಯೊಂದು ವಿಚಾರವನ್ನು negative ದೃಷ್ಟಿಕೋನದಿಂದ ವಿಶ್ಲೇಷಿಸುವುದು ಒಂದು ಪತ್ರಿಕೆಗೆ ಗೌರವ ಘನತೆ ತರುವುದಿಲ್ಲ.

ಕಂಡಹಾಗೆ ಕಾಲಂನಲ್ಲಿ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಬಗ್ಗೆ ಇಬ್ಬರು ಬ್ಲಾಗ್‌ನಲ್ಲಿ ಬರೆದಿರುವ ಬಗ್ಗೆ ಪ್ರಸ್ತಾಪಿಸಿ ಕಲಾಂ ಮುಖವಾಡವನ್ನು ಬಯಲಿಗೆಳೆದಿದ್ದಾರೆ.

ಅಬ್ದುಲ್ ಕಲಾಂ ಒಬ್ಬ ಪ್ರತಿಭಾನ್ವಿತ ವಿಜ್ಞಾನಿ ಎಂಬುದನ್ನು ಯಾರೂ ಮರೆಯುವಂತಿಲ್ಲ. ಪ್ರಯೋಗಶೀಲತೆಯಲ್ಲಿ ವಿಫಲತೆಯೆ ಮೊದಲ ಹೆಜ್ಜೆ ಎಂಬುದನ್ನು ಲೇಖಕರು ಮರೆತಿದ್ದಾರೆ. ವಿಜ್ಞಾನಿಗಳು ಮಾಡುವುದು ಸಂಶೋಧನೆಯನ್ನು, ಸಂಶೋಧನೆಯ ಗುರಿ ವಿಫಲತೆಯ ನಡುವೆ ಸಫಲತೆ ಆಗಿದೆ. ರಾಷ್ಟ್ರದ ಜನತೆ ಡಾ. ಅಬ್ದುಲ್ ಕಲಾಂರವರನ್ನು ಒಬ್ಬ ಮಾನವತಾವಾದಿ ಹಾಗೂ ರಾಷ್ಟ್ರಪ್ರೇಮಿಯಾಗಿ ಕಂಡಿದ್ದಾರೆಯೇ ವಿನಃ ಒಬ್ಬ ಬಾಲಬಡುಕ ರಾಷ್ಟ್ರಪತಿಯಾಗಿಯಲ್ಲ.

ಇನ್ನು ಜಾತಿ ಬಗ್ಗೆ ಸಂಪಾದಕರು ಏಕೆ ಪ್ರಸ್ತಾಪಿಸಿದ್ದಾರೋ ತಿಳಿಯದು. ಸಂಪಾದಕರೆ ನಮೂದಿಸಿರುವಂತೆ ಅವರ ದೃಷ್ಟಿಕೋನವೆಲ್ಲಾ ಬನಿಯಾ-ಬ್ರಾಹ್ಮಣ ಜಾತಿ ಮೇಲಿನದಾಗಿದೆ. ಜಾತಿಯ-ಜನಸಂಖ್ಯೆ ಆಧಾರದ ಮೇಲೆ ಉದ್ದಿಮೆಗಳು-ಸೃಷ್ಟಿಯಾಗುವುದಾದರೆ ಸಂಪಾದಕರು ಹೇಳಿರುವಂತೆ ಶೂದ್ರಶಕ್ತಿ-ಹಿಂದುಳಿದ ವರ್ಗದ ಪಾಲಾಗಬೇಕಿತ್ತು.

ಆದರೆ ಪ್ರತಿಭೆ-ಬುದ್ಧಿವಂತಿಕೆಗಳು ಯಾವ ಜಾತಿ ನೋಡಿ ಬರುವುದಿಲ್ಲ-ಸಂಸ್ಕಾರದಿಂದ, ನಡೆ-ನುಡಿ, ಶ್ರದ್ಧೆಯಿಂದ ಬರುವಂತಹದ್ದು.

ರಾಜ್ಯದಲ್ಲಿರುವ ಪ್ರತಿಷ್ಠಿತ ಉದ್ದಿಮೆಗಳು ಬನಿಯಾ-ಬ್ರಾಹ್ಮಣರ ಕೈಯಲ್ಲಿ ಇಲ್ಲ, ಪತ್ರಿಕಾ ಕ್ಷೇತ್ರದಲ್ಲಿ ಪ್ರಜಾವಾಣಿ ಈಡಿಗರ ಕೈಯಲ್ಲಿರುವುದು, ಕನ್ನಡ ಪ್ರಭ ಗೊಯಾಂಕಾ ಕೈಯಲ್ಲಿರುವುದು ಸಂಪಾದಕರು ಮರೆತಂತಿದೆ.

ಇತರೆ ಸಮುದಾಯಗಳು ಎಲ್ಲಾ ರಂಗಗಳಲ್ಲಿಯೂ ಮೇಲುಗೈ ಸಾಧಿಸಲು ಬರಿ ಹೋರಾಟ ಮಾಡುತ್ತಿವೆಯಷ್ಟೇ. ಅದಕ್ಕೆ ಬೇಕಾದ ನಿಷ್ಠೆ-ಪ್ರಾಮಾಣಿಕತನ-ಆದರ್ಶಗಳು ಇಲ್ಲದಿರುವ ಕಾರಣ ಸಂಖ್ಯಾಬಲದಲ್ಲಷ್ಟೇ ಬಲಾಢ್ಯರಾಗಿದ್ದಾರೆ.

ಉದಾಹರಣೆಗೆ-ಉಡುಪಿಯ ಹೋಟೆಲ್‌ಗಳನ್ನು ತೆಗೆದುಕೊಳ್ಳಿ. ಹೋಟೆಲ್ ಉದ್ಯಮದಲ್ಲಿ ಬಡವರ್ಗವನ್ನು ತೊಡಗಿಸುತ್ತಿರುವ ಈ ಸಮುದಾಯ ಜನಪ್ರಿಯಗೊಳ್ಳಲು ಅವರ ಶ್ರಮ ಕಾರಣ.

ಕೇವಲ ದೈಹಿಕ ಬಲವಿದ್ದರೆ ಸಾಲದು-ಜ್ಞಾನ ಭಂಡಾರವೂ ಮುಂದುವರಿಕೆಗೆ ಅಗತ್ಯವಾಗಿದೆ. ಸರ್ಕಾರಿ ವಲಯದಲ್ಲಿ ಮೀಸಲಾತಿ ಜಾರಿಗೆ ಬಂದಿದ್ದರಿಂದ ಇಂದು ಸರ್ಕಾರಿ ರಂಗ ಎಂತಹ ಸ್ಥಿತಿಗೆ ಬಂದಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಖಾಸಗಿ ರಂಗದಲ್ಲಿ ಶೈಕ್ಷಣಿಕ ಹಿನ್ನೆಲೆಗೆ ಬೆಲೆ ಇರುವುದರಿಂದಲೇ ಖಾಸಗಿ ವಲಯ ಇಂದು ಅಭಿವೃದ್ಧಿ ಪಥದಲ್ಲಿ ಸಾಗಲು ಕಾರಣವಾಗಿದೆ.

ಟೀಕೆ ಟಿಪ್ಪಣಿಗಳು: ಎಲ್ಲಾ ವರ್ಗಕ್ಕೆ ಆದರ್ಶವಾಗಿರಬೇಕೆ ವಿನಃ ಒಮ್ಮುಖದ ಅಭಿಪ್ರಾಯವಾಗಬಾರದು.

ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದನಂತರ ಲಿಂಗಾಯತ ಅಧಿಕಾರಿಗಳನ್ನು- ರಾಜಕಾರಣಿಗಳು ಪಕ್ಷಕ್ಕೆ ತುಂಬುತ್ತಿರುವುದು ಸಂಪಾದಕರ ಗಮನಕ್ಕೆ ಬಂದಿಲ್ಲವೆ?


-ಸಿ.ಪಿ. ಮೂರ್ತಿ, ಮಂಡ್ಯ


(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.com ಗೆ ಕಳಿಸಬಹುದು)

ಕೃಷ್ಣನ ಕಷ್ಟಗಳು!

ೋಹನ್ ನಿರ್ದೇಶನದ
ಣ ನೀ ಲೇಟಾಗ್ ಬಾರೋ'
ದ ಆಡಿಯೋ ರಿಲೀಸ್
ನ್ನೆ ನಡೆಯಿತು. ಇನ್ನೇನು
ರಡು ವಾರದಲ್ಲಿ ಈ
ಬಿಡುಗಡೆಯ ಭಾಗ್ಯ
ಬಹುದು. ಈ ಚಿತ್ರದ
ಹಲವರಲ್ಲಿ ವಿಶೇಷವಾದ
ಕುತೂಹಲವಿದೆ. ಕಾರಣವಿಷ್ಟೇ:
ಮೋಹನ್ ಮೂಲತಃ
ಪ್ರಮ ಚಿತ್ರಕಥೆಗಾರ,
ಷ್ಟು ಚಿತ್ರಗಳಿಗೆ
ಭಾಷಣೆ-ಚಿತ್ರಕಥೆ ಬರೆದು
ಪ್ರತಿಭೆಯನ್ನು
ರ್ಶಿಸಿರುವವರು. ಹೀಗಾ
ತನ್ನ ಚಿತ್ರದಲ್ಲಿ
ದರೂ ಗಿಮಿಕ್-ಚಮಕ್
ಡಿರಬಹುದು ಎಂಬ
ತೂಹಲವಂತೂ ಇದ್ದೇ
.

ಆದರೆ ದುರಾದೃಷ್ಟವಶಾತ್
ಚಿತ್ರವನ್ನು ಸುಸೂತ್ರವಾಗಿ
ಗಿಸಲು ಮೋಹನ್‌ಗೆ
ಧ್ಯವಾಗಲಿಲ್ಲವಂತೆ.
ಕೆಂದರೆ ಚಿತ್ರ
ಆರಂಭವಾಗುವ ಮೊದಲೇ
ರ್ಮಾಪಕರ ಸಮಸ್ಯೆಯಂತೆ.
ಬ್ಬ ನಿರ್ಮಾಪಕ ಕೈಕೊಟ್ಟ
ತರ, ಮತ್ತೊಬ್ಬನನ್ನು
ಬಿಯಲು ಓಡಾಡಿದರಂತೆ.
ಗೆ ಚಿತ್ರ ಮುಗಿಯುವ
ತ್ತಿಗೆ ಒಟ್ಟು ಐದು
ರ್ಮಾಪಕರು
ಲಾದರಂತೆ!
ಈತನ ಕ್ರಿಯೇಟಿವಿಟಿ
ನ್ನಾ ನಿರ್ಮಾಪಕರುಗಳನ್ನು
ಬಿಯುವುದರಲ್ಲೇ
ಮಹೋಗಿದೆಯೋ
ೋ?


'ಕೃಷ್ಣ ನೀ ಲೇಟಾಗ್ ಬಾರೋ'
ಮೋಹನ್-ನಿಧಿ ಸುಬ್ಬಯ್ಯ



ಇಳಯ ವಾರ

ಇದು ಸಂಗೀತ ನಿರ್ದೇಶಕ ಇಳಯರಾಜರ ವಾರ ಎಂದು ಹೇಳಬಹುದು. ಇವರು ಸಂಗೀತ ನೀಡಿರುವ 'ಭಾಗ್ಯದ ಬಳೆಗಾರ' ಮತ್ತು 'ಪ್ರೇಮ್‌ಕಹಾನಿ' ಎಂಬ ಎರಡು ಚಿತ್ರಗಳು ಈ ವಾರ ಬಿಡುಗಡೆಯಾಗಲಿವೆ. ಎರಡೂ ಸಂಗೀತಮಯ ಚಿತ್ರವಾಗಿರುವುದರಿಂದ ಇಳಯರಾಜರಿಗೆ ಇಳಯರಾಜರೇ ಇಲ್ಲಿ ಪೈಪೋಟಿ!

ಸಾಯಿಪ್ರಕಾಶ್ ನಿರ್ದೇಶನದ 'ಭಾಗ್ಯದ ಬಳೆಗಾರ' ಚಿತ್ರದಲ್ಲಿ ಎಂಟು ಹಾಡುಗಳಿದ್ದರೆ ಚಂದ್ರು ನಿರ್ದೇಶನದ 'ಪ್ರೇಮ್‌ಕಹಾನಿ'ಯಲ್ಲಿ ಒಂಬತ್ತು ಹಾಡುಗಳಿವೆ. ಅಂದರೆ ಈ ಎರಡು ಚಿತ್ರಗಳಲ್ಲಿ ಒಟ್ಟು ಹದಿನೇಳು ಹಾಡುಗಳಿವೆ. ವಿಶೇಷವೆಂದರೆ ವಿಭಿನ್ನ ಕಥಾವಸ್ತುವಿನ ಈ ಚಿತ್ರಗಳ ಯಶಸ್ಸು ಇಳಯರಾಜರ ಮೇಲೆ ನಿಂತಿದೆ. ಆ ಕಾರಣಕ್ಕಾಗಿಯೇ "ನನ್ನ ಚಿತ್ರದ ಎರಡು ಹಾಡು ಹಿಟ್ ಆದರೂ ಸಾಕು. ನಾನು ಗೆದ್ದಂತೆ" ಎಂದು ಸಾಯಿ ಮತ್ತು ಚಂದ್ರು ಉಸಿರು ಬಿಗಿ ಹಿಡಿದು ಕುಳಿತಿದ್ದಾರೆ. ಇಳಯರಾಜ ಇಂದು ಚಿತ್ರವೊಂದಕ್ಕೆ ಅರವತ್ತೈದು ಲಕ್ಷ ರೂ. ಸಂಭಾವನೆ ಪಡೆಯುತ್ತಿದ್ದಾರೆ. ಅಲ್ಲಿಗೆ ಈ ಎರಡು ಚಿತ್ರಗಳಿಂದ ಅವರಿಗೆ ಸುಮಾರು ಒಂದುಕಾಲು ಕೋಟಿ ದೊರಕಿದಂತಾಗಿದೆ. ಅಷ್ಟೇ ಅಲ್ಲ, ಹದಿನೇಳು ಹಾಡುಗಳ ಚಿತ್ರೀಕರಣಕ್ಕಾಗಿ ಕನಿಷ್ಠವೆಂದರೂ ಎರಡೂವರೆ ಕೋಟಿ ರೂ.ಗಳನ್ನು ನಿರ್ಮಾಪಕರು ಸುರಿದಿದ್ದಾರೆ. ಅಲ್ಲಿಗೆ ಒಟ್ಟು ಮೂರುಮುಕ್ಕಾಲು ಕೋಟಿ ರೂ.ಗಳಿಗೆ ಈಗ ಇಳಯರಾಜ ಪರೋಕ್ಷವಾಗಿ ಜವಾಬ್ದಾರಿಯಾಗುತ್ತಾರೆ.

ಸೋಲಿನ ಸರಪಳಿಯಲ್ಲಿ ಸಿಲುಕಿರುವ ಶಿವರಾಜ್‌ಕುಮಾರ್‌ಗೆ ಇಳಯರಾಜ ತಾರಾಮೌಲ್ಯವನ್ನು ಮತ್ತೆ ಗಿಟ್ಟಿಸಿಕೊಡುತ್ತಾರೋ? ಚಂದ್ರು-ಅಜಯ್ ಜೋಡಿಗೆ ಮತ್ತೆ ಯಶಸ್ಸಿನ ಸಿಹಿ ಉಣಿಸುತ್ತಾರೋ? ಎಂಬ ಫಲಿತಾಂಶಕ್ಕಾಗಿ ನೀವು ಒಂದು ವಾರ ಕಾಯಬೇಕು.




ಹ್ಯಾಟ್ರಿಕ್ ಜೋಡಿಯ 'ಸವಾರಿ'

ನಿರ್ಮಾಪಕ ಬಸಂತ್‌ಕುಮಾರ್ ಪಾಟೀಲ್ ಮತ್ತು ನಿರ್ದೇಶಕ ಗಿರೀಶ್ ಕಾಸರವಳ್ಳಿ ಜೋಡಿಯ ಮೂರನೇ ಚಿತ್ರ ಮುಂದಿನವಾರ ಆರಂಭವಾಗಲಿದೆ. ಕ್ರಿಕೆಟ್ ಭಾಷೆಯಲ್ಲಿ ಹೇಳುವುದಾದರೆ ಇವರದ್ದು 'ಹ್ಯಾಟ್ರಿಕ್ ಜೋಡಿ'ಯೆಂದು ಕರೆಯಬಹುದು. ಈ ಹಿಂದೆ 'ನಾಯಿನೆರಳು' ಮತ್ತು 'ಗುಲಾಬಿ ಟಾಕೀಸ್' ಚಿತ್ರಗಳನ್ನು ಈ ಜೋಡಿ ಹೊರತಂದಿದೆ.

ಮೊನ್ನೆಯಷ್ಟೇ 'ಗುಲಾಬಿ ಟಾಕೀಸ್' ಚಿತ್ರದಲ್ಲಿನ ಪಾತ್ರಕ್ಕಾಗಿ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಪಡೆದ ಉಮಾಶ್ರೀ ಈ ಚಿತ್ರಕ್ಕೂ ನಾಯಕಿಯಾಗಿದ್ದಾರೆ. ಕೃಶಕಾಯದ ಬಿರಾದಾರ್ ಎಂಬ ಪೋಷಕನಟ ಈ ಚಿತ್ರದ ನಾಯಕ. ವಿಶೇಷವೆಂದರೆ ಇದು ನಾಯಕ ಪ್ರಧಾನವಾದ ಕಥಾವಸ್ತುವಿನ ಚಿತ್ರ. ಅನೇಕ ವರ್ಷಗಳ ನಂತರ ಕಾಸರವಳ್ಳಿ ನಾಯಕ ಪ್ರಧಾನವಾದ ಕಥಾವಸ್ತುವನ್ನು ಕೈಗೆತ್ತಿಕೊಂಡು ಎಲ್ಲರ ಆಶ್ಚರ್ಯಕ್ಕೆ ಕಾರಣರಾಗಿದ್ದಾರೆ. ಅಂದಹಾಗೆ ಇದು ಅಮರೇಶ್ ನುಗಡೋಣಿ ಬರೆದಿರುವ 'ಸವಾರಿ' ಎಂಬ ಕಥೆಯನ್ನು ಆಧರಿಸಿರುವ ಚಿತ್ರ.

ಈ ಚಿತ್ರಕ್ಕೂ ಒಂದು ವೇಳೆ ರಾಷ್ಟ್ರೀಯ ಸ್ವರ್ಣ ಕಮಲ ಪ್ರಶಸ್ತಿ ದೊರಕದಿದ್ದರೆ ಬಸಂತ್‌ಕುಮಾರ್ ಪಾಟೀಲ್ ಮತ್ತೊಂದು ಚಿತ್ರವನ್ನು ನಿರ್ಮಿಸಲು ತಯಾರಾಗಿದ್ದಾರೆ ಎಂದು ಗಾಂಧಿನಗರಿಗಳು ಕುಹಕವಾಡುತ್ತಿರುವುದು ಮಾತ್ರ ನಿಜ.



'ನೂರು ಜನ್ಮಕೂ...' ಇದು ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಅಮೆರಿಕಾ ಅಮೆರಿಕಾ' ಚಿತ್ರದ ಹಾಡೊಂದರ ಸಾಲು. ಈಗ ಅದೇ ಸಾಲನ್ನು ನಾಗತಿಹಳ್ಳಿ ತಮ್ಮ ಹೊಸ ಚಿತ್ರಕ್ಕೆ ಟೈಟಲ್ ಆಗಿ ಇಟ್ಟಿದ್ದಾರೆ. ಸದ್ಯಕ್ಕೆ ಕನ್ನಡ ಚಿತ್ರರಂಗದ ಹಾಟ್ ನಟಿ ಎನಿಸಿರುವ ಅಂದ್ರಿತಾ ರೇ ಚಿತ್ರದ ನಾಯಕಿ. ಅನೇಕ ಚಿತ್ರಗಳ ಕ್ಲೈಮ್ಯಾಕ್ಸ್‌ನಲ್ಲಿ ಸಣ್ಣ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದ ಸಂತೋಷ್ ಎಂಬ ಪೋಷಕ ನಟ ಈ ಚಿತ್ರದ ಮುಖಾಂತರ ಫುಲ್‌ಲೆನ್ತ್ ಹೀರೋ ಆಗಿ ಕಾಣಿಸಿಕೊಳ್ಳಲಿದ್ದಾನೆ. ಅಂದ್ರಿತಾ ರೇ ಬಂಗಾಳಿ, ಸಂತೋಷ್ ಮಲೆಯಾಳಿ. ಈ ಇಬ್ಬರೂ ಪರಭಾಷಾ ಕಲಾವಿದರನ್ನು ಹಾಕಿಕೊಂಡು ನಾಗತಿಹಳ್ಳಿ ಕನ್ನಡ ಸಿನಿಮಾ ಮಾಡುತ್ತಿದ್ದಾರೆ.

ದುಬಾಯ್‌ನಲ್ಲಿ ಕನ್ನಡ ಚಿತ್ರಗಳಿಗೆ ಪ್ರಶಸ್ತಿ ನೀಡುತ್ತೇನೆಂದು ಐದು ವರ್ಷಗಳ ಹಿಂದೆ ಬಂಡಲ್ ಬಿಟ್ಟ ಈ ಸಂತೋಷ್ ಚಿತ್ರರಂಗಕ್ಕೆ ಎಂಟ್ರಿಯಾಗಿದ್ದ, ಅಲ್ಲಿಂದಾಚೆಗೆ ಅನೇಕರು ಪ್ರಶಸ್ತಿ ಆಸೆಗಾಗಿ ಸಂತೋಷ್‌ಗೆ ಚಿಕ್ಕಪುಟ್ಟ ಪಾತ್ರಗಳನ್ನು ನೀಡಿ ಬೆಳೆಸುತ್ತಾ ಬಂದರು. ಇದೀಗ ಕ್ಲೈಮ್ಯಾಕ್ಸ್ ಎಂಬಂತೆ ಸಂತೋಷ್ ನಾಗತಿಹಳ್ಳಿ ಚಿತ್ರದಲ್ಲಿ ಹೀರೋ ಆಗಿದ್ದಾನೆ.


ಪುನೀತ್ ಪಾರು ಪ್ರೇಮ್ ಪಾಡು!

"ನಿರ್ದೇಶಕ ಪ್ರೇಮ್‌ನನ್ನು ಸದಾಶಿವನಗರದ ಹೆಡ್ ಆಫೀಸಿನಿಂದ ಓಡಿಸಿದರಂತೆ", "ಕಥೆ ರೆಡಿ ಮಾಡಿಕೊಂಡಿದ್ದರೆ ಮಾತ್ರ ಬನ್ನಿ ಎಂದು ಪುನೀತ್ ಪ್ರೇಮ್‌ನನ್ನು ಗದರಿದರಂತೆ..."

ಇಂತಹ ಹಲವಾರು ಗಾಳಿಸುದ್ದಿಗಳು ಗಾಂಧಿನಗರದಲ್ಲಿ ಹಾಟ್ ನ್ಯೂಸ್‌ನಂತೆ ಸರಿದಾಡುತ್ತಿದೆ. ಆದರೆ ವಾಸ್ತವವಾಗಿ ಪ್ರೇಮ್‌ನನ್ನು ಹೆಡ್‌ಆಫೀಸಿನವರು ಓಡಿಸಿಯೂ ಇಲ್ಲ, ಪುನೀತ್ ಗದರುವ ಮಾತಂತೂ ಇಲ್ಲವೇ ಇಲ್ಲ, ಬದಲಿಗೆ ಗಾಂಧಿನಗರದ ವಜ್ರೇಶ್ವರಿ ಕಂಬೈನ್ಸ್‌ಗೇ ಪ್ರೇಮ್‌ನನ್ನು ಕರೆಸಿದ ರಾಘವೇಂದ್ರ ರಾಜ್‌ಕುಮಾರ್ "ಇನ್ನು ಎರಡು ವರ್ಷಗಳ ಕಾಲ ಪುನೀತ್ ಕಾಲ್‌ಶೀಟ್ ಕೊಡಲು ಸಾಧ್ಯವಿಲ್ಲ" ಎಂದು ನಯವಾಗಿ ಹೇಳಿ ಕಳಿಸಿದ್ದಾರಂತೆ.

ಮಿ॥ ಕೆ.ಡಿ. ಕ್ಯಾನ್ಸಲ್


ಒಂದು ವೇಳೆ 'ರಾಜ್' ಚಿತ್ರ ಗೆದ್ದಿದ್ದರೆ ಈ ಹೊತ್ತಿಗಾಗಲೇ ಪ್ರೇಮ್ ಮತ್ತು ಪುನೀತ್ ಕಾಂಬಿನೇಷನ್‌ನಲ್ಲಿ 'ಮಿ. ಕೆ.ಡಿ' ಎಂಬ ಚಿತ್ರ ಸೆಟ್ಟೇರಬೇಕಿತ್ತು, ಅಸಲಿಗೆ ಇದು ಡಾ. ರಾಜ್‌ಕುಮಾರ್ ನಟಿಸಿ ಸೂಪರ್ ಹಿಟ್ ಆಗಿದ್ದ 'ಕಸ್ತೂರಿ ನಿವಾಸ'... ತಪ್ಪಿದ ಮಗ' ಚಿತ್ರದ ರಿಮೇಕು. ಕಥಾವಸ್ತು ಅದೇ ಕತೆಯನ್ನೇ ಇವತ್ತಿನ ಕಾಲಘಟ್ಟಕ್ಕೆ ಅಪ್‌ಡೇಟ್ ಮಾಡಿ ರಾಜ್ ಮಾಡಿದ್ದ ಕಳ್ಳನ ಪಾತ್ರವನ್ನು ಡುಬ್ಲಿಕೇಟ್ ಅಗಿಯೂ, ಮತ್ತೊಂದು ಪಾತ್ರ ಕಾಲೇಜು ಉಪನ್ಯಾಸಕನನ್ನು ಯುನಿವರ್ಸಿಟಿ ಪ್ರೊಫೆಸರ್ ಆಗಿಯೂ ಬದಲಿಸಲಾಗಿತ್ತು, 'ಕೆ' ಅಂದರೆ ಕಾರ್ತಿಕ್, 'ಡಿ' ಅಂದರೆ ದೀಪಕ್- ಈ ಎರಡನ್ನೂ ಸೇರಿಸಿ 'ಮಿ. ಕೆ.ಡಿ.' ಎಂಬ ಶೀರ್ಷಿಕೆ ಫೈನಲೈಸ್ ಆಗಿತ್ತು. ಚಿಂತನ್ ಎಂಬ ಹೊಸ ಯುವಕನ ಕೈಲಿ ಸಂಭಾಷಣೆಯ ಮೊದಲ ವರ್ಷನ್ ಅನ್ನೂ ಬರೆಸಿದ್ದಾಗಿತ್ತು, ಅಷ್ಟೇ ಅಲ್ಲ, ಈ ಚಿತ್ರವನ್ನು ನಿರ್ಮಿಸುವುದಾಗಿ ಸೌಂದರ್ಯ ಜಗದೀಶ್ ಕೂಡ ಒಪ್ಪಿದ್ದರು. ಈ ಚಿತ್ರ ನಿರ್ದೇಶಿಸಲು ಪುನೀತ್ ಸಂಭಾವನೆಗಿಂತ ಹತ್ತು ಲಕ್ಷ ಹೆಚ್ಚು ಸಂಭಾವನೆ ಕೇಳಿದ್ದ ಪ್ರೇಮ್ ಈಗಾಗಲೇ ಸೌಂದರ್ಯ ಜಗದೀಶ್‌ರಿಂದ 27 ಲಕ್ಷ ರೂಪಾಯಿಯ ಅಡ್ವಾನ್ಸ್ ಅನ್ನೂ ಪಡೆದಿದ್ದರು. ಪುನೀತ್ ಕಾಲ್‌ಶೀಟ್ ಕೊಡುತ್ತಾರೆ ಎಂಬ ನಂಬಿಕೆಯಿಂದ ಅಡ್ವಾನ್ಸ್ ಪಡೆದ ಪ್ರೇಮ್ ಆ ಹಣವನ್ನು ತಾನು ಕಟ್ಟುತ್ತಿರುವ ಹೊಸ ಮನೆ ಮೇಲೆ ಇನ್‌ವೆಸ್ಟ್ ಮಾಡಿದರು.




ಈಗ ಪುನೀತ್‌ರ ಡೇಟ್ಸ್ ಸಿಗುತ್ತಿಲ್ಲವಾದ್ದರಿಂದ ಸೌಂದರ್ಯ ಜಗದೀಶ್‌ರಿಂದ ಪಡೆದಿರುವ ಹಣಕ್ಕೆ ಮೂರು ಪರ್ಸೆಂಟ್ ಬಡ್ಡಿ ಸೇರಿಸಿ ಮರುಪಾವತಿ ಮಾಡಬೇಕಿದೆ ಪ್ರೇಮ್. ಮೊದಲೇ ವ್ಯವಹಾರದ ವಿಚಾರದಲ್ಲಿ ಕಡ್ಡಿತುಂಡು ಮಾಡಿದಂತೆ ಮಾತನಾಡುವ ಜಗದೀಶ್ ಹಣ ವಸೂಲಿ ಮಾಡಲು ಎಂಥ ರಿಸ್ಕ್‌ಅನ್ನು ಬೇಕಾದರೂ ತೆಗೆದುಕೊಳ್ಳುವ ಗಟ್ಟಿಗ.


ಶಿವರಾಮ್ ಕೊಟ್ಟಿದ್ದು ಐದು ಲಕ್ಷ

'ರಾಜ್' ಚಿತ್ರ ನಿರ್ಮಾಣ ಹಂತದಲ್ಲಿದ್ದಾಗ ಒಮ್ಮೆ ನಟ ಭಯಂಕರ ಐಎಎಸ್ ಶಿವರಾಮು ಪ್ರೇಮ್‌ನನ್ನು ಕರೆಸಿ "ಚಿತ್ರರಂಗದಲ್ಲಿ ನನಗೊಂದು ಬ್ರೇಕ್ ನೀಡಿ ನಾನು ದೊಡ್ಡ ಸ್ಟಾರ್ ಆಗುವಂತೆ ಸಿನಿಮಾವೊಂದನ್ನು ನಿರ್ದೇಶಿಸಿಕೊಡಿ" ಎಂದು ಕೇಳಿಕೊಂಡಿದ್ದರಂತೆ. ಎದ್ದೂ ಬಿದ್ದೂ ಈ ಶಿವರಾಮು ಚಿತ್ರವನ್ನು ನಿರ್ದೇಶಿಸಿದರೆ ಗಾಂಧಿನಗರದ ಮಂದಿ ಎಂದೆಂದಿಗೂ ತನ್ನನ್ನು ಮೂಸುವುದಿಲ್ಲ ಎಂಬುದನ್ನು ಅರಿತ ಪ್ರೇಮ್ "ಕಥೆ, ಚಿತ್ರಕಥೆ ಬೇಕಾದರೆ ಮಾಡಿಕೊಡುತ್ತೇನಿ. ಡೈರೆಕ್ಷನ್ ಬೇಕಾದ್ರೆ ನಮ್ಮ ಹುಡುಗುರಲ್ಲೇ ಯಾರಾದರೊಬ್ಬರು ಮಾಡುತ್ತಾರೆ" ಎಂದಿದ್ದಾನೆ. ಈ ಮಾತುಕತೆ ಪ್ರಕ್ರಿಯೆಯಲ್ಲಿದ್ದಾಗಲೇ ತನ್ನ ಶಿಷ್ಯ ದಶಾವತಾರ ಚಂದ್ರುನನ್ನು ಕಳುಹಿಸಿ ಐದು ಲಕ್ಷ ರೂಪಾಯಿಗಳ ಮುಂಗಡವನ್ನೂ ಡಿಮ್ಯಾಂಡ್ ಮಾಡಿದ್ದಾನೆ ಪ್ರೇಮ್. ಅಡ್ವಾನ್ಸ್ ಹಣಕ್ಕಾಗಿ ಒಂದೇ ಸಮ ಬೆನ್ನುಹತ್ತಿದ್ದ ಪ್ರೇಮ್ ಮತ್ತು ಚಂದ್ರು ಕಾಟ ತಡೆಯಲಾರದೆ ಕೆ. ಶಿವರಾಮು ತನ್ನ ಭಾವಮೈದುನ ಉಮೇಶ್ ಮೂಲಕ ಹಣ ಸಂದಾಯ ಮಾಡಿಸಿದ್ದಾರೆ. ಹಾಗೆ ಅಡ್ವಾನ್ಸ್ ಹಣ ಪಡೆದ ಪ್ರೇಮ್‌ನ ನೆರಳೂ ಸಹ ಈವರೆಗೂ ಶಿವರಾಮ್ ಸಾಹೇಬರತ್ತ ಸುಳಿದಿಲ್ಲ.


ಶಿವರಾಂ


ಸೌಂದರ್ಯ ಜಗದೀಶ್

ಇನ್ನು 'ಮಂದಾಕಿನಿ' ಚಿತ್ರದ ನಿರ್ಮಾಪಕ ಬಿ.ಕೆ. ಶ್ರೀನಿವಾಸ್‌ಗೂ ಪ್ರೇಮ್ ಲಕ್ಷಾಂತರ ರೂಪಾಯಿಯ ಟೋಪಿ ಹಾಕಿದ್ದಾನೆ ಎಂಬ ಸುದ್ದಿಯೂ ಎಲ್ಲೆಡೆ ಮಾರ್ದನಿಸುತ್ತಿದೆ. ಹೀಗೆ ಸಿಕ್ಕಸಿಕ್ಕವರಿಂದಲ್ಲಾ ಹಣ ಎತ್ತಿರುವ ಪ್ರೇಮ್ 'ಉಪೇಂದ್ರನಿಗಿಂತ ದೊಡ್ಡ ಮನೆ ಕಟ್ಟಬೇಕು' ಎಂದು ತನ್ನ ಕನಸಿನ ಬೆನ್ನೇರಿ ಹೊಸ ಮನೆಯ ನಿರ್ಮಾಣಕ್ಕೆ ಸುರಿದಿದ್ದಾನೆ.



ಇತ್ತ ಪುನೀತ್ ಇನ್ನೆರಡು ವರ್ಷ ಕಾಲ್‌ಶೀಟ್ ಇಲ್ಲ ಎಂದಿದ್ದರೆ ಅತ್ತ ಶಿವರಾಜ್‌ಕುಮಾರ್ ಸಹ 'ಜೋಗಯ್ಯ' ಚಿತ್ರಕ್ಕೆ ಡೇಟ್ಸ್ ಕೊಡಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಸ್ವತಃ ತಾನೇ ನಾಯಕನಟನಾಗಿ ನಟಿಸಲು ಪ್ಲಾನ್ ಮಾಡಿದ್ದ 'ಅಡ್ಡ' ಎಂಬ ಚಿತ್ರವನ್ನು ನಿರ್ದೇಶಿಸುವುದಿಲ್ಲ ಎಂದು ತುಷಾರ್ ರಂಗನಾಥ್ ಹಿಂದೇಟು ಹಾಕಿಬಿಟ್ಟಿದ್ದಾರೆ.

ಒಟ್ಟಾರೆಯಾಗಿ ದುರಾದೃಷ್ಟಗಳೆಲ್ಲಾ ಒಂದಾಗಿ ಒಮ್ಮೆಲೇ ಪ್ರೇಮ್‌ನನ್ನು ಅಮರಿಕೊಂಡಿವೆ. ಇದನ್ನೆಲ್ಲ ನೋಡುತ್ತಿದ್ದರೆ, ಸದ್ಯ ಪ್ರೇಮ್ ಸಿಲುಕಿಕೊಂಡಿರುವ ಸಂಕಷ್ಟದಿಂದ ಆತ ನಂಬಿರುವ ಮಲೆ ಮಹದೇಶ್ವರನೇ ಇಳಿದುಬಂದರೂ ಪಾರು ಮಾಡಲು ಸಾಧ್ಯವಿಲ್ಲ ಎನಿಸುತ್ತಿದೆ....

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 23-09-2009 RNI No. KARKAN2005/

ವಿಷ್ಣುವರ್ಧನ್‌ಗೆ ನಾಗವಲ್ಲಿ ಕಾಟ!



ಒಬ್ಬ ಹಿರಿಯ ನಟನ ಸಿನಿಮಾ ಪ್ರಚಾರಕ್ಕಾಗಿ ದೆವ್ವಭೂತಗಳ ಮೊರೆ ಹೋಗಬೇಕೆ? ಕನ್ನಡ ಸಿನಿಮಾವೊಂದು ಜನರ ಗಮನ ಸೆಳೆಯಲು ಈ ಪರಿ ಸುಳ್ಳುಗಳನ್ನು ಸೃಷ್ಟಿಸುವ ಅಗತ್ಯವಾದರೂ ಏನು?

ನಿಜಕ್ಕೂ ಇದು ಕನ್ನಡ ಚಿತ್ರರಂಗದ ದೌರ್ಭಾಗ್ಯವಲ್ಲದೇ ಮತ್ತೇನೂ ಅಲ್ಲ.



'ಆಪ್ತರಕ್ಷಕ' ಚಿತ್ರತಂಡ ಪಬ್ಲಿಸಿಟಿಗಾಗಿ ತೀರ ಇಂತಹ ಕೆಳಮಟ್ಟದ ಕೆಲಸಕ್ಕೆ ಕೈಹಾಕಬಾರದಿತ್ತು. 'ಆಪ್ತಮಿತ್ರ' ಚಿತ್ರದ ನಿರ್ದೇಶಕ ತಮಿಳಿಗ ವಾಸು ಬಹುಶಃ ಕನ್ನಡಿಗರನ್ನು ಮೂರ್ಖರು ಎಂದು ಭಾವಿಸಿರುವಂತಿದೆ. "ಚಿತ್ರ ಆರಂಭವಾದಾಗಿನಿಂದ ಇಲ್ಲಿಯವರೆಗೂ ಹಲವಾರು ಅಡ್ಡಿಆತಂಕಗಳು ಎದುರಾಗಿವೆ. ಇದಕ್ಕೆ ನಾಗವಲ್ಲಿಯ ಭೂತಚೇಷ್ಟೆಗಳೇ ಕಾರಣ'' ಎಂಬಿತ್ಯಾದಿಯಾಗಿ ವುಕಾರು ಹಬ್ಬಿಸಿ ಚಿತ್ರದ ಬಗ್ಗೆ ಅಗ್ಗದ ಪ್ರಚಾರ ಗಿಟ್ಟಿಸುವ ಪ್ಲಾನ್ ಮಾಡಿದ್ದಾರೆ ವಾಸು.

ವಿಷ್ಣು ವಿಕ್ಷಿಪ್ತ ಮಾತು!

ವಾಸು ಕನ್ನಡಿಗರನ್ನು ಮಂಗ ಮಾಡಲು ಮುಂದಾಗಿರುವಾಗ, ಕನ್ನಡದ ಮಟ್ಟಿಗೆ ಹಿರಿಯ ನಟನೆನಿಸಿಕೊಂಡಿರುವ ಸಾಹಸಸಿಂಹ ವಿಷ್ಣುವರ್ಧನ್ ಅವರ ಬುದ್ಧಿಗೆ ಯಾವ ಭೂತ ವಕ್ಕರಿಸಿದೆಯೋ ಗೊತ್ತಿಲ್ಲ.

ಇತ್ತೀಚೆಗೆ ಪ್ಯಾಲೆಸ್ ಗ್ರೌಂಡಿನಲ್ಲಿ ಚಿತ್ರೀಕರಣ ನಡೆಯುತ್ತಿದ್ದ ಸಂದರ್ಭದಲ್ಲಿ ಕುದುರೆ ಏರಿ ಬರುವ ದೃಶ್ಯದಲ್ಲಿ ವಿಷ್ಣು ಪಾಲ್ಗೊಂಡಿದ್ದರಂತೆ. ಸಾಹಸ ನಿರ್ದೇಶಕ ರಾಂ ಶೆಟ್ಟಿ ಕೂತಿದ್ದಾಗ ಸುಮ್ಮನಿದ್ದ ಕುದುರೆ ವಿಷ್ಣು ಕುಳಿತ ಒಂದೆರಡು ನಿಮಿಷಕ್ಕೇ ಹುಚ್ಚಾಪಟ್ಟೆ ಓಡಲು ಶುರುಮಾಡಿತಂತೆ. ಕಡೆಗೆ ಇಡೀ ದೇಹವನ್ನು ತಟತಟಾ ಅಲ್ಲಾಡಿಸಿ ವಿಷ್ಣುರನ್ನು ಕೆಳಗೆ ಕೆಡವಿತಂತೆ. "ಈ ಹಿಂದೆ ಎಷ್ಟೋ ಬಾರಿ ಕುದುರೆ ಸವಾರಿ ಮಾಡಿದ್ದೇನೆ. ಆದರೆ ಕೆಳಗೆ ಬಿದ್ದದ್ದು ಇದೇ ಮೊದಲು'' ಎಂದು ಎಳೇ ಹುಡುಗನಂತೆ ಹೇಳುತ್ತಿರುವ ವಿಷ್ಣು ತಾನಿನ್ನೂ ಯಂಗ್ ಹೀರೋ ಎಂಬ ಭ್ರಮೆಯಲ್ಲಿರುವಂತೆ ಕಾಣುತ್ತಿದೆ. ನಿನ್ನೆ ಮೊನ್ನೆ ಬಂದ ಯುವ ನಟರೇ ಕುದುರೆ ಏರಲು ಭಯಪಡುತ್ತಿದ್ದಾರೆ. ಅಂಥದ್ದರಲ್ಲಿ ವಯಸ್ಸಿನಲ್ಲಿ ಅರವತ್ತರಕ್ಕೆ ಹತ್ತಿರಾಗಿರುವ ವಿಷ್ಣು ಕುದುರೆ ಸವಾರಿ ಮಾಡಲು ಹೋಗಿ ಬಿದ್ದರೆ ಅದರಲ್ಲಿ ಆಶ್ಚರ್ಯಪಡುವಂಥದ್ದೇನೂ ಇಲ್ಲ. ಹೀಗಿರುವಾಗ "ಕುದುರೆ ಬೀಳಿಸಿದ್ದಕ್ಕೆ ಯಾವುದೋ ಅಗೋಚರ ಶಕ್ತಿಯೇ ಕಾರಣ.... ಕುದುರೆ ಮೇಲಿಂದ ಬಿದ್ದಾಗ ಹಿಡಿದ ಜ್ವರ ನನಗೆ ಇನ್ನೂ ಬಿಟ್ಟಿಲ್ಲ. ಇದಕ್ಕಾಗಿ ದೇವರಿಗೆ ಹರಕೆ ಹೊತ್ತು, ಹೋಮಹವನಗಳನ್ನೂ ಮಾಡಿದ್ದೇನೆ'' ಎನ್ನುತ್ತಿರುವ ವಿಷ್ಣುರ ಮಾತನ್ನು ನೋಡಿದರೆ ಬಹುಶಃ ಅವರು ಮಾನಸಿಕ ಸ್ತಿಮಿತತೆಯನ್ನು ಕಳೆದು ಕೊಂಡಿದ್ದಾರೆ ಎಂಬ ಅನುಮಾನ ಕಾಡುತ್ತದೆ.





ಸುಳ್ಳುಗಳ ಕಂತೆ!

ನಾಯಕನಟ ವಿಷ್ಣುವರ್ಧನ್ ಸೇರಿದಂತೆ ಚಿತ್ರತಂಡದವರು ಹೇಳುವ ಪ್ರಕಾರ 'ಆಪ್ತರಕ್ಷಕ' ಚಿತ್ರ ಆರಂಭದಿಂದಲೂ ಆ ಚಿತ್ರತಂಡದ ಪ್ರತಿಯೊಬ್ಬರನ್ನೂ ನಾಗವಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಕಾಡುತ್ತಿದ್ದಾಳಂತೆ. ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಕನ್ನಡತಿ ಹಾಗೂ ಖ್ಯಾತ ನೃತ್ಯ ಕಲಾವಿದೆ ವಿಮಲಾರಾವ್ 'ಆಪ್ತರಕ್ಷಕ' ಚಿತ್ರದಲ್ಲಿ ನಾಗವಲ್ಲಿಯ ಪಾತ್ರ ಮಾಡುತ್ತಿದ್ದಾಳೆ. ಮೊದಲು ನಾಗವಲ್ಲಿಯ ಕಾಟ ಆರಂಭವಾಗಿದ್ದೇ ಈಕೆಗಂತೆ. ವಿಮಲಾ ರಾವ್ ಉಳಿದುಕೊಂಡಿದ್ದ ಕೋಣೆಯಲ್ಲಿ ಯಾವುದೋ ನೆರಳು ಬಂದಂತಾಯಿತಂತೆ. ನಂತರ ಅದು ಆಕೆಯೊಟ್ಟಿಗೆ ಬಂದು ಮಲಗಿತಂತೆ. ಅಷ್ಟೇ ಅಲ್ಲದೆ ಈ ಸಿನಿಮಾದ ಚಿತ್ರೀಕರಣಕ್ಕೆ ಬರುವ ವೇಳೆ ಹಲವಾರು ಬಾರಿ ಆಕೆಯ ಕಾರು ಅಪಘಾತಕ್ಕೆ ಈಡಾಯಿತಂತೆ.

ಇನ್ನು ಚಿತ್ರದಲ್ಲಿ ನಟಿಸಿರುವ ಮತ್ತೊಬ್ಬ ನಟಿ ಭಾವನಾ ತಂಗಿದ್ದ ಕೋಣೆಯಲ್ಲಿ ಕಿಟಕಿಗಳು ಅಲುಗಾಡಿ, ಆದರ ಕರ್ಟನ್‌ಗಳು ತಂತಾನೇ ತೆರೆದುಕೊಂಡಿತಂತೆ. ನಟ ಅವಿನಾಶ್‌ಗಂತೂ ಬಾವಿಯಲ್ಲಿ ಇಳಿದು ಈಜುವ ದೃಶ್ಯದಲ್ಲಿ ನಟಿಸಲು ಸಾಧ್ಯವೇ ಆಗಲಿಲ್ಲವಂತೆ. ಉತ್ತಮ ಡಬ್ಬಿಂಗ್ ಕಲಾವಿದನಾಗಿರುವ ಅವಿನಾಶ್‌ಗೆ ಡಬ್ಬಿಂಗ್ ಮಾಡುವ ಸಮಯದಲ್ಲಿ ಭಯ ಆರಂಭವಾಗುತ್ತಿತ್ತಂತೆ. ಮತ್ತೊಬ್ಬ ಪೋಷಕ ನಟ ರಮೇಶ್ ಭಟ್ ಅವರಿಗೆ ಈ ಚಿತ್ರದಲ್ಲಿ ನಟಿಸಿದಾಗಿನಿಂದ ಒಂದೇ ಸಮ ಜ್ವರ ಹಿಡಿದುಬಿಟ್ಟಿದೆಯಂತೆ.... ಇಂಥ ಅಂತೆಕಂತೆಗಳನ್ನು ಸೃಷ್ಟಿಸಿ ಸುಳ್ಳುಗಳ ಸರಮಾಲೆಯನ್ನೇ ಪೋಣಿಸುತ್ತಿರುವ ಚಿತ್ರತಂಡದ ಮಾತುಗಳನ್ನು ಕೇಳಿದರೆ ಇದು ಪಕ್ಕಾ ಬಂಡಲ್ ಗ್ಯಾಂಗ್ ಎಂಬುದು ಎಂಥ ದಡ್ಡನಿಗೂ ಅರ್ಥವಾಗುತ್ತದೆ.

ಕಿಡಿಕಿಡಿ ಕುಳ್ಳ!

ಒಂದು ಕಡೆ 'ಆಪ್ತರಕ್ಷಕ' ತಂಡದವರು ಮನಸ್ಸಿಗೆ ಬಂದಂತೆ ರೀಲು ಬಿಡುತ್ತಾ ಪ್ರಚಾರ ಪಡೆಯಲು ಹವಣಿಸುತ್ತಿದ್ದರೆ, ಇನ್ನೊಂದೆಡೆ ಕುಳ್ಳ ದ್ವಾರಕೀಶ್ ಕಿಡಿಕಿಡಿಯಾಗಿದ್ದಾರೆ. "ಒಂದು ಚಿತ್ರವನ್ನು ಗೆಲ್ಲಿಸುವ ಉದ್ದೇಶದಿಂದ ಚೀಪ್ ಪಬ್ಲಿಸಿಟಿ ಗಿಮಿಕ್ ಮಾಡುತ್ತಿದ್ದಾರೆ. ನನ್ನ ನಿರ್ಮಾಣದ 'ಆಪ್ತಮಿತ್ರ' ಚಿತ್ರಕ್ಕೆ ಕಾಡದ ನಾಗವಲ್ಲಿ ಇವರ ಚಿತ್ರಕ್ಕೇ ಏಕೆ ಕಾಡುತ್ತಿದ್ದಾಳೆ? ಕುದುರೆ ಸವಾರಿ ಮಾಡಲು ಬರದ ನಾಯಕನಟ ಕೆಳಗೆ ಬಿದ್ದರೆ, ನಾಯಕಿಗೆ ಜ್ವರ ಬಂದರೆ, ಅದಕ್ಕೆ ನಾಗವಲ್ಲಿಯೇ ಕಾರಣ ಎಂದು ಹೇಳಿ ಪ್ರಚಾರ ಪಡೆಯುವುದು ಸರಿಯಲ್ಲ. ಜನ ನೋಡುವಂಥ ಸಿನಿಮಾ ಮಾಡಿದರೆ ಸಿನಿಮಾ ಹಿಟ್ ಆಗುತ್ತದೆಯೇ ಹೊರತು ಇಂತಹ ಕೀಳುಮಟ್ಟದ ಪ್ರಚಾರದಿಂದಲ್ಲ" ಎಂದು ಇತ್ತೀಚೆಗೆ ತುಂಬಿದ ಸಮಾರಂಭವೊಂದರಲ್ಲಿ ದ್ವಾರಕೀಶ್ ನೇರವಾಗಿ ಆರೋಪಿಸಿದ್ದಾರೆ.

ಇದೆಲ್ಲವನ್ನೂ ನೋಡಿದರೆ, ತಾನು ನಟಿಸಿದ ಇತ್ತೀಚೆಗಿನ ಎಲ್ಲ ಚಿತ್ರಗಳೂ ತೋಪಾಗುತ್ತಾ, ಹೊಸಬರ ಮುಂದೆ ತಾನು ವರ್ಚಸ್ಸು ಕಳೆದುಕೊಂಡಿರುವ ಕಾರಣಕ್ಕೆ, ವಿಷ್ಣುರಂಥ ಹಿರಿಯ ನಟ ದೆವ್ವ-ಭೂತಗಳ ಕಥೆ ಹೇಳಿ ಜನರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರಾ? ಎಂದೆನಿಸುತ್ತದೆ.

● ಅರುಣ್





ಪತ್ರಕರ್ತರಿಗೇ ಗೆಟ್‌ಔಟ್ ಅಂದಳು ಸೆಲಿನಾ!

ಸದಾ ವಿವಾದಗಳಿಂದಲೇ ಬಾಲಿವುಡ್‌ನಲ್ಲಿ ಬಣ್ಣಬಣ್ಣದ ಸುದ್ದಿಗೆ ವಸ್ತುವಾಗಿರುವ ಸೆಲಿನಾ ಜೈಟ್ಲಿ ಈಗ ಕನ್ನಡದ ಸಿನಿಮಾ ಪತ್ರಕರ್ತರಿಗೇ ಗೆಟ್‌ಔಟ್ ಎಂದು ಹೇಳಿ ಮತ್ತೊಂದು ವಿವಾದವನ್ನು ಮೈಮೇಲೆ ಎಳೆದುಕೊಂಡಿದ್ದಾಳೆ.

ಉಪೇಂದ್ರ ತನ್ನ ಪತ್ನಿ ಪ್ರಿಯಾಂಕಾಳೊಂದಿಗೆ ನಟಿಸುತ್ತಿರುವ 'ಶ್ರೀಮತಿ' ಚಿತ್ರದ ಚಿತ್ರೀಕರಣ ಮೊನ್ನೆ ಯಲಹಂಕದ 'ಜೇಡ್ ಗಾರ್ಡನ್'ನಲ್ಲಿ ನಡೆಯುತ್ತಿತ್ತು. ಒಳಗೆ ಉಪೇಂದ್ರ ಮತ್ತು ಸೆಲಿನಾ ಜೇಟ್ಲಿ ಪಾಲ್ಗೊಂಡಿದ್ದ ರೇಪ್‌ಸೀನ್ ನಡೆಯುತ್ತಿತ್ತು. ಪತ್ರಿಕಾಗೋಷ್ಠಿಗೆ ಆಗಮಿಸಿದ್ದ ಪತ್ರಕರ್ತರು ಅಲ್ಲಿ ಯಾವ ದೃಶ್ಯದ ಚಿತ್ರೀಕರಣ ನಡೆಯುತ್ತಿದೆ ಎಂಬುದರ ಅರಿವಿಲ್ಲದೆ ನೇರ ಆ ರೂಮಿಗೇ ಹೋಗಿ ಮಿಕಮಿಕ ನೋಡಿದ್ದಾರೆ. ತಕ್ಷಣ ಸಿಟ್ಟಿಗೆದ್ದು ಹೌಹಾರಿದ ಸೆಲಿನಾ ಹಿಂದುಮುಂದು ನೋಡದೆ ಎಲ್ಲರಿಗೂ 'ಗೆಟ್‌ಔಟ್' ಎಂದುಬಿಟ್ಟಿದ್ದಾಳೆ. ಗಾಬರಿಗೆ ಬಿದ್ದ ಛಾಯಾಗ್ರಾಹಕರು ಮತ್ತು ಪತ್ರಕರ್ತರೂ ಗುಮ್ಮನಿಗೆ ಹೆದರಿದ ಮಕ್ಕಳಂತೆ ಹೊರಗೆ ಓಡಿಬಂದಿದ್ದಾರೆ!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44